ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 34 ಆಗಸ್ಟ್ 17-23, 1998 ರೂ. 2.00



ಡಿಸೆಂಬರ್ 11ರಂದು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ

ರಾಷ್ಟ್ರೀಯ ಸಮಾವೇಶದ ರಣಕಹಳೆ

ಕೋಟ್ಯಾಂತರ ದುಡಿಯುವ ಜನಗಳನ್ನು ಕಂಗೆಡಿಸುತ್ತಿರುವ ಆರ್ಥಿಕ ನೀತಿಗಳು ಮತ್ತು ಅವರ ಹೋರಾಟಗಳನ್ನು ಛಿದ್ರಗೊಳಿಸಿ ಆಳುವ ಜನಗಳಿಗೆ ನೆರವಾಗುವ ಕೋಮುವಾದದ ವಿರುದ್ಧ ರಣಕಹಳೆ ಮತ್ತೆ ಮೊಳಗಿದೆ. ಆಗಸ್ಟ್ 12ರಂದು ನವದೆಹಲಿಯಲ್ಲಿ ಸೇರಿದ ರಾಷ್ಟ್ರೀಯ ಸಮಾವೇಶ ಡಿಸೆಂಬರ್ 11, 1998 ರಂದು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಸಲು ಕರೆ ನೀಡಿದೆ. ಇದಕ್ಕೆ ಮೊದಲು ಅಕ್ಟೋಬರ್ ತಿಂಗಳಲ್ಲಿ ಜಿಲ್ಲಾ/ರಾಜ್ಯ ಮಟ್ಟಗಳಲ್ಲಿ ಸಮಾವೇಶಗಳು, ನವೆಂಬರ್ ತಿಂಗಳಲ್ಲಿ ರಾಜ್ಯಗಳ ರಾಜಧಾನಿಗಳಲ್ಲಿ ಹಾಗೂ ದಿಲ್ಲಿಯಲ್ಲಿ ಬೃಹತ್ ರ್‍ಯಾಲಿಗಳು ನಡೆಯಲಿವೆ.

ತಲ್ಕಟೋರಾ ಒಳಾಂಗಣದಲ್ಲಿ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಏರ್ಪಡಿಸಿದ್ದ ಸಮಾವೇಶದಲ್ಲಿ ಐವತ್ತಕ್ಕೂ ಹೆಚ್ಚು ಸಾಮೂಹಿಕ ಸಂಘಟನೆಗಳನ್ನು ಪ್ರತಿನಿಧಿಸಿದ್ದ ದೇಶದೆಲ್ಲೆಡೆಯಿಂದ ಬಂದ ಸಾವಿರಾರು ಕಾರ್ಮಿಕ, ರೈತ, ಕೃಷಿ ಕೂಲಿಕಾರ, ಮಹಿಳಾ, ಯುವಜನ, ವಿದ್ಯಾರ್ಥಿ ಸಂಘಟನೆಗಳ ಕಾರ್ಯಕರ್ತರು, ಮುಖಂಡರು ಭಾಗವಹಿಸಿದ್ದರು.

ಸಮಾವೇಶದಲ್ಲಿ ಮಾತನಾಡಿದ ಭಾಷಣಕಾರರೆಲ್ಲಾ ಜನಗಳ ಸಂಕಟಗಳನ್ನು ನೂರ್ಮಡಿ ಹೆಚ್ಚಿಸುತ್ತಿರುವ ಸರಕಾರದ ನೀತಿ-ನಿಲುವುಗಳನ್ನು ಕಟುವಾಗಿ ಟೀಕಿಸಿದರು ಹಾಗೂ ಇವುಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸುವುದಾಗಿ ಪಣ ತೊಟ್ಟರು.

ಸಮಾವೇಶ 24 ನಿರ್ದಿಷ್ಟ ಬೇಡಿಕೆಗಳನ್ನು ಮುಂದಿಟ್ಟ ಒಂದು ಘೋಷಣಾ ಪತ್ರವನ್ನು ಅಂಗೀಕರಿಸಿತು. ಬಿ.ಜೆ.ಪಿ. ಅಧಿಕಾರಕ್ಕೆ ಬಂದ ನೂರು ದಿನಗಳೊಳಗೆ ಹಣದುಬ್ಬರದ ದರ ಶೇ. 4.7 ದಿಂದ ಶೇ. 8ನ್ನೂ ಮೀರಿ ನಾಗಾಲೋಟ ಹೂಡಿದೆ. ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರಿವೆ, ರೇಶನ್ ವ್ಯವಸ್ಥೆ ಕಳಚಿ ಬೀಳುತ್ತಿದೆ, ಕೈಗಾರಿಕಾ ರೋಗಗ್ರಸ್ತತೆ ಹೆಚ್ಚುತ್ತಿದೆ, ಲಾಭ ಮಾಡುವ ಸಾರ್ವಜನಿಕ ವಲಯಗಳ ಉದ್ದಿಮೆಗಳ ಖಾಸಗೀಕರಣ ಪ್ರಯತ್ನ ನಡೆದಿದೆ ಎಂದು ಗಮನಿಸಿದ ಈ ಘೋಷಣೆ "1991ರಿಂದ ಅನುಸರಿಸುತ್ತಿರುವ ಉದಾರೀಕರಣ ಹಾಗೂ ಜಾಗತೀಕರಣದ ನೀತಿಗಳ ಮುಖ್ಯ ತತ್ವ ಎಂದರೆ ಉದ್ದಿಮೆ, ವ್ಯಾಪಾರಗಳಿಂದ ಸರಕಾರ ಹಿಂದೆ ಸರಿಯಬೇಕು ಎಂದು. ಇದು ಬಿ.ಜೆ.ಪಿ. ಅಧಿಕಾರಕ್ಕೆ ಬಂದ ಮೇಲೆ ಉಲ್ಬಣಗೊಂಡಿದೆ" ಎಂದಿದೆ.

ಬಿ.ಜೆ.ಪಿ. ನೇತೃತ್ವದ ಸರಕಾರದ ಆರ್ಥಿಕ ನೀತಿಗಳನ್ನು ಬಲವಾಗಿ ಖಂಡಿಸುತ್ತಲೇ ಸಮಾವೇಶ ಸರಕಾರ ಹಿಂದುತ್ವ ಅಜೆಂಡಾವನ್ನು ಅನುಸರಿಸುತ್ತಿರುವ ರೀತಿಯನ್ನು ತೀಕ್ಷ್ಣವಾಗಿ ಟೀಕಿಸಿತು. 'ರಾಮ ದೇವಸ್ಥಾನ ನಿರ್ಮಾಣದ ಕೆಲಸವನ್ನು ಮಾಡುತ್ತಾ ಬಿ.ಜೆ.ಪಿ. ಮತ್ತು ಸಂಘ ಪರಿವಾರ ದೇಶದಲ್ಲಿ ಕೋಮು ಸೆಳೆತಗಳನ್ನು ಮತ್ತೆ ಉದ್ದೀಪನಗೊಳಿಸಿ ಹಿಂದುತ್ವ ಆಧಾರಿತ ರಾಷ್ಟ್ರಾಂಧತೆಯನ್ನು ಬೆಳೆಸುತ್ತಿದೆ" ಎಂದು ಸಮಾವೇಶದ ಘೋಷಣೆ ಹೇಳಿದೆ.

ಸಂಘ ಪರಿವಾರ ಅಧ್ಯಕ್ಷ ಮಾದರಿ ಸರಕಾರವನ್ನು ಪ್ರತಿಪಾದಿಸುತ್ತಾ ಸಂಸದೀಯ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಲು ಹಾಗೂ ಹಿಂದುತ್ವ ನಿಲುವಿನಿಂದ ಇತಿಹಾಸವನ್ನು ವಿಕೃತಗೊಳಿಸಲು ಪ್ರಯತ್ನಿಸುತ್ತಿದೆ ಎಂದಿರುವ ಘೋಷಣೆ ಮಾಧ್ಯಮವನ್ನು ಒಂದೆಡೆ ಬಹುರಾಷ್ಟ್ರೀಯ ಕಂಪನಿಗಳು ಸಾಂಸ್ಕೃತಿಕ ಆಕ್ರಮಣಕ್ಕೆ ಬಳಸುತ್ತಿದ್ದರೆ, ಇನ್ನೊಂದೆಡೆ ಹಿಂದುತ್ವ ಕಣ್ಣೋಟ ಹಂಚಲು ಬಳಸಲಾಗುತ್ತಿದೆ" ಎಂದು ಟೀಕಿಸಿದೆ. ○

ಆಗಸ್ಟ್ 31 ರಂದು ರಾಜ್ಯ ಸಮಿತಿ ಸಭೆ

ಆಗಸ್ಟ್ 31 ರಂದು ಸಿಪಿಐ(ಎಂ) ರಾಜ್ಯ ಸಮಿತಿಯ ಸಭೆ ನಡೆಯಲಿದೆ ಎಂದು ತಿಳಿಸಲಾಗಿದೆ.

ಡಿಸೆಂಬರ್ 10, 11 ರಂದು ಸಾರ್ವಜನಿಕ ವಲಯದಲ್ಲಿ ಮುಷ್ಕರ

ರಾಷ್ಟ್ರೀಯ ಸಮಾವೇಶದ ಹಿಂದಿನ ದಿನ ಆಗಸ್ಟ್ 11ರಂದು ನಡೆದ ಸಾರ್ವಜನಿಕ ವಲಯದ ಸಮಾವೇಶ ಕೂಡಾ ಹತ್ತು ಬೇಡಿಕೆಗಳ ಮೇಲೆ ದೇಶಾದ್ಯಂತ ಡಿಸೆಂಬರ್ 10 ಹಾಗೂ 11ರಂದು ಎರಡು ದಿನಗಳ ಮುಷ್ಕರದ ಮೂಲಕ ಸಾರ್ವಜನಿಕ ವಲಯವನ್ನು ಕಳಚಿ ಹಾಕುವ ನೀತಿಗಳ ವಿರುದ್ಧ ಬಲವಾದ ಪ್ರತಿಭಟನೆಯನ್ನು ವ್ಯಕ್ತಪಡಿಸಲು ನಿರ್ಧರಿಸಿದೆ.

ಈ ಮುಷ್ಕರಕ್ಕೆ ಪೂರ್ವಭಾವಿಯಾಗಿ ಈ ಕೆಳಗಿನ ಕಾರ್ಯಕ್ರಮಗಳನ್ನು ಸಮಾವೇಶ ರೂಪಿಸಿತು.

1. ಆಗಸ್ಟ್ 27- ಗೇಟ್ ಮೀಟಿಂಗ್‌ಗಳು
2. ಅಕ್ಟೋಬರ್ 31ರೊಳಗೆ ರಾಜ್ಯಗಳ ರಾಜಧಾನಿಗಳಲ್ಲಿ ಹಾಗೂ ಪ್ರಮುಖ ಸಾರ್ವಜನಿಕ ವಲಯ ಕೇಂದ್ರಗಳಲ್ಲಿ ಇತರ ಕಾರ್ಮಿಕ ಸಂಘಗಳು ಹಾಗೂ ಸಾಮೂಹಿಕ ಸಂಘಟನೆಗಳೊಂದಿಗೆ ಸಮಾವೇಶಗಳು
3. ನವಂಬರ್ 10 : ಮಾನವ ಸರಪಳಿ

ಸೆಪ್ಟೆಂಬರ್ 1 ರಂದು ಬೆಂಗಳೂರಿನಲ್ಲಿ ಸಮಾವೇಶ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರ್ನಾಟಕ ರಾಜ್ಯ ಮಟ್ಟದ ಸಮಾವೇಶ ಸೆಪ್ಟೆಂಬರ್ 1 ರಂದು ಬೆಂಗಳೂರಿನಲ್ಲಿ ನಡೆಯುತ್ತಿದೆ.

ಕಾವೇರಿ ರಾಜೀ ಸೂತ್ರ: ಸಿಪಿಐ(ಎಂ) ಸ್ವಾಗತ

ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕಾವೇರಿ ಜಲವಿವಾದವನ್ನು ಸೌಹಾರ್ದಯುತವಾಗಿ ಬಗೆಹರಿಸುವ ನಿಟ್ಟಿನಲ್ಲಿ ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಪಾಂಡಿಚೇರಿಯ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಗಳ ಸಮಕ್ಷಮದಲ್ಲಿ ಸರ್ವಸಮ್ಮತವಾದ ಸೂತ್ರವೊಂದಕ್ಕೆ ರಾಜಿಯಾಗಿರುವುದು ಸ್ವಾಗತಾರ್ಹ ಬೆಳವಣಿಗೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದೆ.

ನ್ಯಾಯ ಪಂಚಾಯ್ತಿಯ ಮಧ್ಯಂತರ ಆದೇಶ ಮತ್ತು ಸುಪ್ರೀಂ ಕೋರ್ಟ್ ನೀಡಿದ್ದ ಗಡುವಿನ ಹಿನ್ನೆಲೆಯಲ್ಲಿ ಈ ರಾಜೀಸೂತ್ರ ಸ್ವಾಗತಾರ್ಹ ಬೆಳವಣಿಗೆ ಎಂದು ಸಿಪಿಐ(ಎಂ) ಹೇಳಿದೆ.

ಸಿಪಿಐ(ಎಂ) ನ ಎಲ್ಲಾ ಘಟಕಗಳೂ ಹಿಂದಿನಿಂದಲೂ ಕಾವೇರಿ ಜಲವಿವಾದವನ್ನು ಕರ್ನಾಟಕ ಮತ್ತು ತಮಿಳುನಾಡಿನ ರೈತರ ಹಿತದೃಷ್ಟಿಯಿಂದ ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳುವುದು ಅಗತ್ಯ ಎಂದು ಹೇಳುತ್ತಾ ಬಂದಿವೆ.

ಸಿಪಿಐ(ಎಂ) ತಮಿಳುನಾಡು ರಾಜ್ಯ ಕಾರ್ಯದರ್ಶಿಗಳಾದ ಶಂಕರಯ್ಯನವರು ಕೂಡಾ ತಮಿಳುನಾಡು ಸರಕಾರ ಈ ರಾಜೀಸೂತ್ರವನ್ನು ಜಾರಿಗೊಳಿಸುವಲ್ಲಿ ಸಹಕಾರ ನೀಡುವುದಾಗಿ ಹೇಳಿದ್ದಾರೆ. ಕೇವಲ ರಾಜಕೀಯ ಕಾರಣಗಳಿಗಾಗಿ ಈ ಒಪ್ಪಂದವನ್ನು ವಿರೋಧಿಸುವವರು ಜನಗಳಿಂದ ದೂರವಾಗುತ್ತಾರೆ ಎಂದು ಅವರು ಹೇಳಿದ್ದಾರೆ. ಈ ಒಪ್ಪಂದ ರಾಜ್ಯಗಳ ನಡುವೆ ನದಿ ನೀರು ಹಂಚಿಕೆಯ ಪ್ರಶ್ನೆಗಳನ್ನು ಬಗೆಹರಿಸುವಲ್ಲಿ ಒಂದು ಉದಾಹರಣೆಯೆಂದ ಅವರು ಉನ್ನತ ಮಟ್ಟದಲ್ಲಿ ಈ ಮಾತುಕತೆಗಳು ನಡೆದಿರುವುದರಿಂದ ಈ ಒಪ್ಪಂದ ಉಳಿಯುತ್ತದೆ ಎಂದರು. ಈ ಒಪ್ಪಂದ ನಾಲ್ಕು ರಾಜ್ಯಗಳ ರೈತ ಸಮುದಾಯಕ್ಕೆ ಸಿಕ್ಕ ವಿಜಯ ಎನ್ನುತ್ತಾ ತಮಿಳುನಾಡಿನಲ್ಲಿ ಎಐಎಡಿಎಂಕೆ, ಕರ್ನಾಟಕದಲ್ಲಿ ಕಾಂಗ್ರೆಸ್ ಕೇವಲ ರಾಜಕೀಯ ಲಾಭ ಪಡೆಯಲು ಯಾವುದೇ ಒಪ್ಪಂದವನ್ನು ಛಿದ್ರಗೊಳಿಸುವ ಮಟ್ಟಕ್ಕಿಳಿಯದೆ ನಾಲ್ಕು ರಾಜ್ಯಗಳ ರೈತರ ಹಿತದೃಷ್ಟಿಯಿಂದ ತಮ್ಮ ನಿಲುವಿನ ಬಗ್ಗೆ ಪುನರಾಲೋಚನೆ ಮಾಡಬೇಕು ಎಂದಿದ್ದಾರೆ.

ಆಗಸ್ಟ್ ೬ ರಂದು ಎರಡು ದಿನಗಳ ಮಾತುಕತೆಗಳ ನಂತರ ಈ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ಆದೇಶವನ್ನು ಜಾರಿಗೊಳಿಸಲು ಒಪ್ಪಿಕೊಂಡರು. ಪ್ರಧಾನ ಮಂತ್ರಿಗಳ ಮುಖ್ಯಸ್ಥಿಕೆಯಲ್ಲಿ ಕಾವೇರಿ ನದಿ ಪ್ರಾಧಿಕಾರವೊಂದನ್ನು ರಚಿಸುವುದು ಹಾಗೂ ಒಂದು ಉಸ್ತುವಾರಿ ಸಮಿತಿಯನ್ನು ರಚಿಸುವುದು ಈ ರಾಜೀಸೂತ್ರದ ಮುಖ್ಯ ಅಂಶಗಳು, ಉಸ್ತುವಾರಿಯ ಅಧಿಕಾರ ವ್ಯಾಪ್ತಿಯ ಬಗ್ಗೆ ಭಿನ್ನಾಭಿಪ್ರಾಯಗಳನ್ನು ನಂತರ ಬಗೆಹರಿಸಿಕೊಳ್ಳಲಾಗಿದೆ. ಇದರ ಪ್ರಕಾರ ಕೇಂದ್ರ ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳ ನೇತೃತ್ವದಲ್ಲಿರುವ ಈ ಸಮಿತಿಯಲ್ಲಿ ನಾಲ್ಕು ರಾಜ್ಯಗಳು ನೇಮಿಸಿದ ಅಧಿಕಾರಿಗಳು ಸದಸ್ಯರಾಗಿದ್ದು ಇದು ಪ್ರಾಧಿಕಾರಕ್ಕೆ ನಿರ್ಣಯಗಳನ್ನು ಕೈಗೊಳ್ಳುವಲ್ಲಿ ಸಹಾಯ ನೀಡುತ್ತದೆ. ಮಾಹಿತಿಗಳನ್ನು ಸಂಗ್ರಹಿಸಿ ಕೊಡುತ್ತದೆ ಹಾಗೂ ಜಾರಿಯಲ್ಲಿ ಬರುವಾಗ ಅಡಚಣೆಗಳ ಬಗ್ಗೆ ಪ್ರಾಧಿಕಾರಕ್ಕೆ ಮಾಹಿತಿ ನೀಡುತ್ತದೆ.

ಆಗಸ್ಟ್ ೧೧ ರಂದು ಈ ಯೋಜನೆಯನ್ನು ಕೇಂದ್ರ ಸರ್ಕಾರವು ಅಧಿಕೃತವಾಗಿ ಪ್ರಕಟಿಸಿದ್ದು ಮರುದಿನ ಈ ಕುರಿತು ಗಡುವು ನೀಡಿದ್ದ ಸುಪ್ರೀಂ ಕೋರ್ಟಿನ ಮೂವರು ನ್ಯಾಯಧೀಶರ ಪೀಠ ಈ ವಿವಾದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಆಗಸ್ಟ್ ೧೬ ರಂದು ಸುಪ್ರಿಂ ಕೋರ್ಟಿನ ಸಂವಿಧಾನ ಪೀಠದ ಮುಂದಿಡಲು ನಿರ್ದೇಶನ ನೀಡಿದೆ. ○




"ಈ ಮೆರವಣಿಗೆ ಜನಗಳಿಗೆ ಪರಮಾಣು ಅಸ್ತ್ರಗಳು ಬೇಕಿಲ್ಲ ಎಂದು ದೇಶವನ್ನು ಆಳುವವರ ಗಮನಕ್ಕೆ ತಂದಿದೆ, ಅಣ್ವಸ್ತ್ರ ತಯಾರಿಸುವ, ನೆಲೆಗೊಳಿಸುವ ಬಿಜೆಪಿ ಸರಕಾರದ ಕಾರ್ಯಕ್ರಮವನ್ನು ನಿಲ್ಲಿಸಬೇಕೆಂದು ಕರೆ ನೀಡಿದೆ. ಭಾರತ ಮತ್ತೆ ಶಾಂತಿ ಮತ್ತು ನಿಶ್ಶಸ್ತ್ರೀಕರಣದ ಹಾದಿಗೆ ಮರಳಬೇಕು ಎಂದು ಹೇಳಿದೆ" - ಆಗಸ್ಟ್ 6 ರಂದು ನವದೆಹಲಿಯಲ್ಲಿ 'ಪರಮಾಣು ಅಸ್ತ್ರಗಳ ವಿರುದ್ಧ ನಾಗರಿಕರು' ಮೆರವಣಿಗೆಯ ನಂತರ ನಡೆದ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಒಂದು ಮಾತು. ಅಂದು ಸಾವಿರಾರು ಮಂದಿ, ಶಾಲಾ ಮಕ್ಕಳು ಕೆಂಪುಕೋಟೆಯಿಂದ ಆರಂಭವಾದ ಮೆರವಣಿಗೆಯಲ್ಲಿ ಭಾಗವಹಿಸಿದರು. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್, ಸಿಪಿಐ ಪ್ರಧಾನ ಕಾರ್ಯದರ್ಶಿ ಎ.ಬಿ.ಬರ್ಧನ್, ಪ್ರಖ್ಯಾತ ಪತ್ರಕರ್ತ ಕುಲದೀಪ್ ನಾಯರ್, ಸಮಾಜ ಶಾಸ್ತ್ರಜ್ಞ ರಜನೀಕೊಠಾರಿ, ಲೇಖಕಿ ಅರುಂಧತಿ ರಾಯ್ ಹಾಗೂ ಇತರ ಹಲವಾರು ಬುದ್ಧಿಜೀವಿಗಳು ಇವರಲ್ಲಿ ಭಾಗವಹಿಸಿದರು.

ಮೇಲಿನ ಚಿತ್ರ: ಕಲ್ಕತ್ತೆಯಲ್ಲಿ 4 ಲಕ್ಷ ಭಾಗವಹಿಸಿದ್ದ ಮೆರವಣಿಗೆಯ ಒಂದು ದೃಶ್ಯ

ಇತಿಹಾಸದ ಪುಟಗಳಿಂದ

ಕೇರಳದ ಕಮ್ಯುನಿಸ್ಟ್ ಆಂದೋಲನದ ಹರಿಕಾರರಲ್ಲೊಬ್ಬರಾದ ಪಿ.ಕೃಷ್ಣಪಿಳ್ಳೆಯವರ ಮರಣದ ಐವತ್ತನೇ ವಾರ್ಷಿಕದ ಸಂದರ್ಭದಲ್ಲಿ ಮೈಸೂರಿನ ಎಂ.ಡಿ.ಯವರು ನಮಗೆ ಈ ಲೇಖನ ಕಳಿಸಿದ್ದಾರೆ.



ಸಖಾವಿಗೆ ನಮನ

"ಸಖಾಕ್ಕಳೇ ಮುನ್ನೋಟ್ಟು" (ಸಂಗಾತಿಗಳೇ ಮುನ್ನಡೆಯಿರಿ) ಕ್ರಾಂತಿಕಾರಿ ಆಂದೋಲನದೊಂದಿಗೆ ಹೆಜ್ಜೆ ಹಾಕುವ ಪ್ರತಿಯೊಬ್ಬರ ಕಿವಿಯಲ್ಲಿ ಸದಾ ಗುನುಗುಣಿಸುವ ಶಬ್ದಗಳು. ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ಹಿಂದಡಿಯಿಡದಂತ ಜಾಗ್ರತಗೊಳಿಸುವ ಈ ಘೋಷಣೆಯನ್ನು ನೀಡಿದವರು ಸಖಾವು ಎಂದೇ ಜನಮನದಲ್ಲಿ ನೆಲೆನಿಂತ ಪಿ. ಕೃಷ್ಣಪಿಳ್ಳೆ ಕೃಷ್ಣ ಪಿಳ್ಳೆ ಮರಣ ಹೊಂದಿ ಈ ಆಗಸ್ಟ್ ಹತ್ತೊಂಬತ್ತಕ್ಕೆ ಐವತ್ತು ವರ್ಷಗಳಾದವು.

ಕೃಷ್ಣಪಿಳ್ಳೆ ಅಸಾಮಾನ್ಯ ಸಂಘಟಕ. ಕೇರಳದ ಕಮ್ಯುನಿಸ್ಟ್ ಆಂದೋಲನಕ್ಕೆ ಕೃಷ್ಣಪಿಳ್ಳೆಯವರಂತಹ ಸಂಘಟಕ, ಇಎಂಎಸ್ ರಂತಹ ಸಿದ್ಧಾಂತಿ, ಎಕೆಜಿಯವರಂತಹ ಹೋರಾಟಗಾರ ದೊರೆತಿದ್ದರಿಂದಲೇ ನಾವಿಂದು ಕಾಣುತ್ತಿರುವ ಬೆಳವಣಿಗೆ ಸಾಧ್ಯವಾಗಿರುವುದು. ಕೇರಳದ ಚರಿತ್ರೆಯ ಚಿಂತನೆಯ ದಿಕ್ಕು ಬದಲಿಸಿ, ಇಡೀ ದೇಶಕ್ಕೆ ಮಾದರಿಯಾಗಿ ರೂಪುಗೊಳ್ಳಲು ಮೂಲಚೇತನವಾಗಿದ್ದವರು ಕೃಷ್ಣಪಿಳ್ಳೆ

1948 ರ ಆಗಸ್ಟ್ ಹತ್ತೊಂಬತ್ತನೇ ತಾರೀಖು ಮುಹಮ್ಮದ ಬಳಿಯ ಶೆಲ್ಟರ್ ಒಂದರಲ್ಲಿ ಹಾವುಕಚ್ಚಿ ಕೃಷ್ಣಪಿಳ್ಳೆ ಮರಣ ಹೊಂದಿದರು. ಕಮ್ಯುನಿಸ್ಟ್ ಪಕ್ಷದ ತಿರುವಾಂಕೂರು ಕೊಚ್ಚಿ ಸಮಿತಿಯ ಸಭೆಯೊಂದರಲ್ಲಿ ಮಂಡಿಸಬೇಕಿದ್ದ ವರದಿಯೊಂದನ್ನು ಬರೆಯುತ್ತಿದ್ದಾಗ ಕೃಷ್ಣಪಿಳ್ಳೆಯವರಿಗೆ ಹಾವು ಕಡಿಯಿತು. ಕೃಷ್ಣ ಪಿಳ್ಳೆಯವರು ಬರೆದ ಕೊನೆಯ ಸಾಲುಗಳು "ಕಗ್ಗತ್ತಲು ನನ್ನ ಕಣ್ಣುಗಳನ್ನಾವರಿಸುತ್ತಿದೆ. ನನ್ನ ಶಕ್ತಿ ಉಡುಗಿ ಹೋಗುತ್ತಿದೆ. ಏನಾಗಲಿದೆಯೆಂಬುದು ನನಗೆ ಗೊತ್ತಿದೆ. ಸಂಗಾತಿಗಳೇ ಮುನ್ನಡೆಯಿರಿ. ಲಾಲ್ ಸಲಾಂ !"

1909 ರಲ್ಲಿ ರಂದು ಕೃಷ್ಣ ಪಿಳ್ಳೆ ಜನನ. ತಂದೆ ನಾಯಾಯಣನ್ ಪಿಳ್ಳೆ. ತಾಯಿ ಪಾರ್ವತಿ. ಚಿಕ್ಕಂದಿನಲ್ಲಿಯೇ ಕೃಷ್ಣ ಪಿಳ್ಳೆ ತಂದೆ ತಾಯಿಗಳನ್ನು ಕಳೆದುಕೊಂಡರು. ಸಂಬಂಧಿಕರ ಮನೆಗಳಲ್ಲಿ ಬೆಳವಣಿಗೆ. ತನ್ನ ಕಾಲಮೇಲೆ ತಾನು ನಿಲ್ಲ ಬೇಕೆನ್ನುವ ಹಂಬಲದಿಂದಾಗಿ ಓದನ್ನು ಅರ್ಧಕ್ಕೆ ಬಿಟ್ಟು ಆಲೆಪ್ಪಿಯ ತೆಂಗಿನಹುರಿ ಕಾರ್ಖಾನೆಯಲ್ಲಿ ದಿನಗೂಲಿ ಕೆಲಸ. ಕಾರ್ಮಿಕರ ಸಂಪರ್ಕ, ಹೊಸ ಅನುಭವ ಆಲೋಚನೆಗಳಿಗೆ ಪ್ರಚೋದಿಸಿತು.

ನಂತರ ಕೆಲಸ ಬಿಟ್ಟು ಊರೂರು ಅಲೆದಾಡಿ ಜನಸಾಮಾನ್ಯರ ಕಷ್ಟಕಾರ್ಪಣ್ಯಗಳನ್ನು ನೋವು ನಲಿವುಗಳನ್ನು ಬಹು ಹತ್ತಿರದಿಂದ ನೋಡಿದರು. ಊರಲ್ಲಿ ನೆಲೆನಿಂತ ಮೇಲೆ ಹಿಂದೀ ಪ್ರಚಾರಕ್ಕೆ ಗಾಂಧೀಜೀಯವರು ನೀಡಿದ್ದ ಕರೆಗೆ ಓಗೊಟ್ಟು ಹಿಂದಿ ಕಲಿಯಲು ಪ್ರಾರಂಭಿಸಿದರು. ಅಲಹಾಬಾದಿಗೆ ತೆರಳಿ ಹಿಂದಿ ವ್ಯಾಸಂಗ. ಸಾಹಿತ್ಯ ವಿಚಾರದ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಅಲಹಾಬಾದ್‌ನಲ್ಲಿ ಹಿಂದಿ ಕಲಿಕೆಯ ಜೊತೆಗೆ ದೇಶದ ರಾಜಕಾರಣದ ಪರಿಚಯ. ಅಲಹಾಬಾದ್ ಅಂದು ಸ್ವಾತಂತ್ರ್ಯ ಹೋರಾಟದ ಕಮ್ಯುನಿಸ್ಟ್ ಆಂದೋಲನದ ಕೇಂದ್ರವಾಗಿತ್ತು.

1917 ರ ರಷ್ಯನ್ ಕ್ರಾಂತಿಯ ಪ್ರಭಾವದಿಂದಾಗಿ ಹೊಸ ಆಲೋಚನೆಯ ಗಾಳಿ ದೇಶದಾದ್ಯಂತ ಬೀಸುತ್ತಿತ್ತು. ದೇಶದ ಸ್ವಾತಂತ್ರ್ಯಕ್ಕಾಗಿ ಹೊಸ ಹೊಸ ಮಾರ್ಗಗಳ ಅನ್ವೇಷಣೆಯಲ್ಲಿ ಕ್ರಾಂತಿಕಾರಿಗಳು ತೊಡಗಿದ್ದರು. ಕೃಷ್ಣಪಿಳ್ಳೆ ಕೂಡಾ ಈ ಪ್ರಭಾವಗಳಿಂದ ಹೊರಗುಳಿಯಲು ಸಾಧ್ಯವಿರಲಿಲ್ಲ.

ಅಲಹಾಬಾದ್ ನಿಂದ ಹಿಂದಿರುಗಿದ ಕೃಷ್ಣಪಿಳ್ಳೆ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದ ಪ್ರಚಾರಕನಾಗಿ ತೃಪ್ಪುನ್ನಿತ್ತುರದಲ್ಲಿ ನೆಲೆನಿಂತರು. ಆದರೆ ರಾಜಕೀಯವಾಗಿ ಪ್ರಭುದ್ಧತೆಯೆಡೆಗೆ ಸಾಗುತ್ತಿದ್ದ ಕೃಷ್ಣಪಿಳ್ಳೆ ಕೊನೆಗೆ ಹಿಂದಿಪ್ರಚಾರಕ ವೃತ್ತಿಗೆ ತಿಲಾಂಜಲಿಯಿತ್ತು. ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು.

1930 ಮಾರ್ಚ್ ಹನ್ನೆರಡರಂದು ಕಾಂಗ್ರೆಸ್ ನಾಯಕ ಕೆಳಪ್ಪನ್‌ರ ನಾಯಕತ್ವದಲ್ಲಿ ಕಲ್ಲಿಕೋಟೆಯಿಂದ ಪಯ್ಯನ್ನೂರುರೆಗಿನ ಉಪ್ಪು ಸತ್ಯಾಗ್ರಹ ಯಾತ್ರೆಯಲ್ಲಿ ಭಾಗವಹಿಸಿದ ಇಪ್ಪತ್ತೆಂಟು ಜನ ಸತ್ಯಾಗ್ರಹಿಗಳಲ್ಲಿ ಕೃಷ್ಣ ಪಿಳ್ಳೆ ಕೂಡಾ ಒಬ್ಬರಾಗಿದ್ದರು.

1924 ರಲ್ಲಿ ವೈಕ್ಕಂ ಶಿವಕ್ಷೇತ್ರದಲ್ಲಿ ಅಸ್ಪೃಶ್ಯತಾ ವಿರೋಧಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಕೃಷ್ಣ ಪಿಳ್ಳೆ, 1931 ರಲ್ಲಿ ಗುರುವಾಯೂರ್ ಸತ್ಯಾಗ್ರಹದ ನಾಯಕರಲ್ಲೊಬ್ಬರಾಗಿದ್ದರು.

ಕಣ್ಣೂರು ಜೈಲುವಾಸದ ನಂತರ ಕೃಷ್ಣಪಿಳ್ಳೆಯವರಿಗೆ ಸ್ವಾತಂತ್ರ್ಯ ಹೋರಾಟದ ಬಗೆಗಿನ ಪರಿಕಲ್ಪನೆ ಬದಲಾಯಿತು. ಲಾಹೋರ್ ಪಿತೂರಿಯ ಆಪಾದಿತರಾಗಿದ್ದ ಭಗತ್‌ಸಿಂಗ್‌ರ ಅನುಯಾಯಿ ಕಮಲ್‌ನಾಥ್‌ತಿವಾರಿ ಬಂಗಾಲದ ಕ್ರಾಂತಿಕಾರಿಗಳು ಇದಕ್ಕೆ ಕಾರಣರಾಗಿದ್ದರು. ಜೈಲಿನಿಂದ ಹೊರ ಬಂದ ನಂತರ ಕಲ್ಲಿಕೋಟೆಯನ್ನು ಕೇಂದ್ರವನ್ನಾಗಿಸಿಕೊಂಡು ಕಾರ್ಮಿಕರನ್ನು ಸಂಘಟಿಸತೊಡಗಿದರು. ಕೈ ಮಗ್ಗ ನೇಕಾರರು ಗಿರಣಿ, ಹೆಂಚು, ಬೀಡಿ, ಸಿಗಾರ್ ಕಾರ್ಮಿಕರನ್ನು ಸಂಘಟಿಸಿ ಕಾರ್ಮಿಕ ಚಳುವಳಿಗೆ ನವ ಚೈತನ್ಯ ನೀಡಿದರು.

1934 ರಲ್ಲಿ ರಾಷ್ಟ್ರೀಯ ವಿಮೋಚನಾ ಚಳುವಳಿಯ ಹೊಸ ಘಟ್ಟ ಪ್ರಾರಂಭ. ಸಮಾಜವಾದಿ ಆಶಯಗಳ ಕಾಂಗ್ರೆಸ್ಸಿಗರ ವೇದಿಕೆಯಾಗಿ ಕಾಂಗ್ರೆಸ್ ಸಮಾಜವಾದಿ ಪಕ್ಷ ರೂಪುಗೊಂಡಿತು. ಕಲ್ಲಿಕೋಟೆಯಲ್ಲಿ ಜರುಗಿದ ಕಾಂಗ್ರೆಸ್ ಸಮಾಜವಾದಿಪಕ್ಷದ ಪ್ರಥಮ ಸಮ್ಮೇಳನದಲ್ಲಿ ಪಿ. ಕೃಷ್ಣಪಿಳ್ಳೆ ಕಾರ್ಯದರ್ಶಿಯಾಗಿ ಆಯ್ಕೆಯಾದರು.


1937 ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಕೇರಳ ಘಟಕ ಅಸ್ತಿತ್ವಕ್ಕೆ ಬಂದಿತು. ಪಿ. ಕೃಷ್ಣಪಿಳ್ಳೆ, ಇ.ಎಂ.ಎಸ್, ಎನ್. ಸಿ. ಶೇಖರ್ ಹಾಗೂ ದಾಮೋದರನ್ ಸದಸ್ಯರು. 1939 ರಲ್ಲಿ ತಲಚೇರಿಯ ಪಿಣರಾಯಿಯಲ್ಲಿ ನಡೆದ ಕಾಂಗ್ರೆಸ್ ಸಮಾಜವಾದಿ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಪಕ್ಷ ಇಡೀಯಾಗಿ ಕಮ್ಯುನಿಸ್ಟ್ ಪಕ್ಷವಾಗಿ ಪರಿವರ್ತಿತವಾಯಿತು. ಕೇರಳ ಇತಿಹಾಸದ ಹೊಸ ಅಧ್ಯಾಯ ಅಲ್ಲಿಂದ ಪ್ರಾರಂಭ. ಸಾಮ್ರಾಜ್ಯಶಾಹಿ ಊಳಿಗಮಾನ್ಯ ದೊರೆಗಳು, ಹಾಗೂ ಜಮೀನ್ದಾರ್ ಶೋಷಣೆ, ಕ್ರಾರ್ಯಗಳ ವಿರುದ್ಧ ಎದೆ ಸೆಟೆದು ನಿಂತ ಕೇರಳ ರೈತರು, ಕಾರ್ಮಿಕರು ಕೃಷಿಕೂಲಿಗಾರರು ಹಾಗೂ ಕೆಳಜಾತಿಗಳ ಜನಕೋಟಿ ಕಮ್ಯುನಿಸ್ಟರ ನೇತೃತ್ವದಲ್ಲಿ ಹೊಸ ಇತಿಹಾಸ ರಚಿಸಿದರು. ಪುನಪ್ರ - ವಯಾಲಾರ್, ಕಯ್ಯೂರು, ಕಾವುಂಬಾಯಿ ಕವೆಳ್ಳೂರು ತಿಲ್ಲಾಂಗೇರಿ.... ಹೀಗೆ ನೂರಾರು ಸಮರಭೂಮಿಗಳು ಕೆಂಪಾದವು. ಕೃಷ್ಣಪಿಳ್ಳೆ ಅಸಮಾನ ಧೈರ್ಯ ಸಾಹಸ ಹಾಗೂ ಮೇಧಾಶಕ್ತಿಯಿಂದ ನಾಯಕತ್ವ ನೀಡಿ ದಂತ ಕಥೆಯೇ ಆದರು.

ಕೃಷ್ಣ ಪಿಳ್ಳೆ ಸಂಗಾತಿಗಳನ್ನು ಬೆಳೆಸುವುದರಲ್ಲಿ ಸಿದ್ಧ ಹಸ್ತರು. ತಮ್ಮ ಅರಿವಿಗೆ, ಸಂಪರ್ಕಕ್ಕೆ ಬರುವ ಸಂಗಾತಿಗಳ ಸಾಮರ್ಥ್ಯವನ್ನು ಗ್ರಹಿಸಿ, ಸೂಕ್ತ ಮಾರ್ಗದರ್ಶನದೊಂದಿಗೆ ಅವರಿಂದ ಅದ್ಭುತ ಸಾಧನೆಗಳಿಗೆ ಪ್ರೇರಣೆ ನೀಡುತ್ತಿದ್ದರು. ಕೃಷ್ಣಪಿಳ್ಳೆಯವರ ಮೂಸೆಯಲ್ಲಿ ಬೆಳೆದ ಹಲವರು ಇಂದು ಕಮ್ಯುನಿಸ್ಟ್ ಆಂದೋಲನದ ನೇತಾರರಾಗಿದ್ದಾರೆ.

ಮಾರ್ಕ್ಸ್‌ವಾದೀ ಸಾಹಿತ್ಯ ಪ್ರಚಾರಕ್ಕಾಗಿ ವಿಶೇಷಗಮನ ನೀಡುತ್ತಿದ್ದ ಕೃಷ್ಣಪಿಳ್ಳೆ ಸಮಾಜವಾದದ ಕುರಿತು ಹಲವು ಲೇಖನಗಳನ್ನು ಬರೆದಿದ್ದರು. ಎಮಿಲ್‌ಬರ್ನ್ಸ್‌ರ ವಾಟ್‌ಈಸ್ ಮಾರ್ಕ್ಸಿಸಂ ಕೃತಿಯನ್ನು ಹಿಂದಿ ಭಾಷೆಗೆ ಅನುವಾದಿಸಿದ್ದರು.

ಕೃಷ್ಣ ಪಿಳ್ಳೆ ನಂಬಿದ ಮಾನವತಾ ಸಿದ್ಧಾಂತದ ಪ್ರಚಾರಕ್ಕಾಗಿ ನಾವು ಸಾದಾ ಮುಂದಡಿಯಿಡುತ್ತೇವೆ ಎಂದು ಕೈಗೊಳ್ಳುವ ಪ್ರತಿಜ್ಞೆ ಇಂದಿನ ಕೃಷ್ಣಪಿಳ್ಳೆ ಸ್ಮರಣೆಯ ಗುರಿಯಾಗಿದೆ. ಸಂಗಾತಿಗಳೇ, ಮುನ್ನಡೆಯಿರಿ ಈ ಸಂದೇಶ ನಮಗೆಂದೆಂದೂ ಮಾರ್ಗದರ್ಶಿಯಾಗಿರುತ್ತದೆ.

ಉದಾರೀಕರಣದ ಫಲಾನುಭವಿಗಳು



ಜಿ.ಎಸ್.ಮಣಿ

ಉದಾರೀಕರಣದಿಂದ ಯಾರಿಗೆ ಹೆಚ್ಚು ಲಾಭವಾಗಿದೆ ಎಂದು ವಿಶ್ಲೇಷಣೆ ಮಾಡಿದರೆ ಉದಾರೀಕರಣ ಯಾರಿಗಾಗಿ ಎನ್ನುವುದು ಸ್ಪಷ್ಟವಾಗಿ ಗೊತ್ತಾಗಿಬಿಡುತ್ತದೆ.

ಉದಾರೀಕರಣ ಜನರಿಗಾಗಿ ದೇಶದ ಅಭಿವೃದ್ಧಿಗಾಗಿ ದೇಶದ ಜನ ಸಾಮಾನ್ಯರಿಗಾಗಿ ಎಂದು ಪ್ರಚಾರ ಮಾಡಿದರೆ ನಿಜಕ್ಕೂ ಅದರ ಫಲ ಈ ಜನ ವರ್ಗಗಳಿಗೆ ಅಲ್ಲ. ನಿಜದಲ್ಲಿ ಈ ಉದಾರೀಕರಣದ ಫಲಾನುಭವಿಗಳು ಯಾರು ಗೊತ್ತೆ? ಆಶ್ಚರ್ಯ ಪಡಬೇಡಿ ಬಹುರಾಷ್ಟ್ರೀಯ ಕಂಪನಿಗಳೇ ಈ ಉದಾರೀಕರಣದ ಫಲಾನುಭವಿಗಳು!

ಉದಾರೀಕರಣ 1991 ರಲ್ಲಿ ಪ್ರಾರಂಭವಾಯಿತಾದರೂ ಅದರ ಪರಿಣಾಮಗಳು 1994 ರಲ್ಲಿ ಬಂಡವಾಳ ಮಾರುಕಟ್ಟೆಯಲ್ಲಿ ಕಂಡು ಬಂದವು. ಮಾರುಕಟ್ಟೆ ಬಂಡವಾಳೀಕರಣವನ್ನು ತೆಗೆದು ಕೊಂಡರೆ ಅಂದರೆ ಮಾರುಕಟ್ಟೆಯಲ್ಲಿರುವ ಶೇರುಗಳ ಒಟ್ಟಾರೆ ಬೆಲೆಯ ಮೊತ್ತ ತೆಗೆದು ಕೊಂಡರೆ ಶೇ 87 ರಷ್ಟು ಪಾಲು ಬಹುರಾಷ್ಟ್ರೀಯ ಕಂಪನಿಗಳದ್ದು. ಅಧ್ಯಯನವೊಂದು ಮಾರುಕಟ್ಟೆ ಬಂಡವಾಳೀಕರಣ ಅತಿ ಹೆಚ್ಚಿರುವ 50 ಕಂಪನಿಗಳನ್ನು ಅಧ್ಯಯನ ಮಾಡಿತು.

ಈ 50 ಕಂಪನಿಗಳಲ್ಲಿ 26 ಖಾಸಗಿ ದೇಶಿ ಕಂಪನಿಗಳಾದರೆ 14 ಸಾರ್ವಜನಿಕ ಕಂಪನಿಗಳು. ಇನ್ನುಳಿದ 10 ಬಹುರಾಷ್ಟ್ರೀಯ ಕಂಪನಿಗಳು! 1994-98 ರ ಅವಧಿಯಲ್ಲಿ ಸಾರ್ವಜನಿಕ ವಲಯದ ಕಂಪನಿಗಳ ಮಾರುಕಟ್ಟೆ ಬಂಡವಾಳ ಶೇ 13 ರಷ್ಟು ಕಡಿಮೆಯಾದರೆ ದೇಶೀ ಖಾಸಗಿ ಕಂಪನಿಗಳ ಮಾರುಕಟ್ಟೆ ಬಂಡವಾಳ ಶೇ 36 ರಷ್ಟು ಹೆಚ್ಚಿತು. ಇವೆಲ್ಲಕ್ಕೂ ಕಿರೀಟವಿಟ್ಟಂತೆ ಬಹುರಾಷ್ಟ್ರೀಯ ಕಂಪನಿಗಳ ಮಾರುಕಟ್ಟೆ ಬಂಡವಾಳದ ಶೇ 87 ರಷ್ಟು ಹೆಚ್ಚಿತು.

ಬಹುರಾಷ್ಟ್ರೀಯ ಕಂಪನಿಗಳು ಹೂಡಿಕೆದಾರರ ನೆಚ್ಚಿನ ಕಂಪನಿಗಳಾಗಿ ಹೊರ ಹೊಮ್ಮುತ್ತಿರುವುದು ಮತ್ತು ದೇಶಿ ಕಂಪನಿಗಳು ಹೂಡಿಕೆದಾರರನ್ನು ಆಕರ್ಷಿಸುವಲ್ಲಿ ವಿಫಲವಾಗುತ್ತಿರುವುದು ಮತ್ತು ಸಾರ್ವಜನಿಕ ಕಂಪನಿಗಳು ಹೂಡಿಕೆದಾರರಿಂದ ವಿಕರ್ಷಿತವಾಗುತ್ತಿರುವುದು ಇದರಿಂದ ಬಹಳ ಸ್ಪಷ್ಟವಾಗಿ ಕಂಡು ಬರುತ್ತದೆ. ಈ ಬಹುರಾಷ್ಟ್ರೀಯ ಕಂಪನಿಗಳು ವೇಗವಾಗಿ ವ್ಯಾಪಾರವಾಗುವ. ಬಳಕೆ ವಸ್ತುಗಳ ವ್ಯವಹಾರದಲ್ಲಿ ತೊಡಗಿರುವುದೂ ಸ್ಪಷ್ಟ . ಆದರೆ ದೇಶದ ಅಭಿವೃದ್ಧಿ ಯವುದೇ ಭಾಗದಲ್ಲಿ ತೊಡಗುವ ಬದಲು ಇವು ತಮಗೆ ಲಾಭವಾಗುವ ವ್ಯವಹಾರದಲ್ಲಿ ಮಾತ್ರ ತೊಡಗಿವೆ ಎಂಬುದು ಬಹಳ ಸ್ಪಷ್ಟ. ಉದಾರೀಕರಣ ಬಹುರಾಷ್ಟ್ರೀಯ ಕಂಪನಿಗಳಿಗಾಗಿ ಸಾಮ್ರಾಜ್ಯ ಶಾಹಿ ದೇಶಗಳಿಗಾಗಿ ಎಂಬುವುದರಲ್ಲಿ ಯಾವುದೇ ಸಂಶಯವಿಲ್ಲ ಅಲ್ಲವೇ?

ವಿಳಂಬದಿಂದ ವಿನಾಶ

ವಿವಿಧ ಸರ್ಕಾರೀ ಯೋಜನೆಗಳ ಅನುಷ್ಠಾನದಲ್ಲಿ ಆಗಿರುವ ವಿಳಂಬದಿಂದ ದೊಡ್ಡ ಪ್ರಮಾಣದ ಹಾನಿ ಆಗುತ್ತಿದೆ. ಬಂಡವಾಳಶಾಹಿ ಪಕ್ಷಗಳು ಅಧಿಕಾರದಲ್ಲಿರುವಲ್ಲೆಲ್ಲ ಅವರ ಅಸಮರ್ಥತೆಯಿಂದಾಗಿ ಇಂತಹ ವಿಳಂಬಗಳಾಗುವುದು ಅದರಿಂದ ಹಾನಿಯಾಗುವುದು ಸಾಮಾನ್ಯ.

ಬಿಜೆಪಿ ನೇತೃತ್ವದ ಸರ್ಕಾರ ಬದುಕುಳಿಯಲು ಒದ್ದಾಡುತ್ತಿರುವುದರಿಂದ ಹಲವು ಯೋಜನೆಗಳ ಅನುಷ್ಠಾನದಲ್ಲಿ ಆಗುತ್ತಿರುವ ವಿಳಂಬದ ಕಡೆ ಗಮನ ಹರಿಸಲೂ ಅದರಿಂದ ಆಗುತ್ತಿಲ್ಲವಾದ್ದರಿಂದ ಅಪಾರ ಪ್ರಮಾಣದ ಹಾನಿ ದೇಶಕ್ಕೆ ಆಗುತ್ತಿದೆ.

ಒಟ್ಟು 221 ದೊಡ್ಡ ಪ್ರಮಾಣದ ಯೋಜನೆಗಳು ಅನುಷ್ಠಾನದ ಹಂತಗಳಲ್ಲಿದ್ದು ಇವುಗಳ ಮೂಲ ಅಂದಾಜು ವೆಚ್ಚ 113069 ಕೋಟಿ ರೂಪಾಯಿಗಳಾಗಿದ್ದವು. ಈಗ ಆಗಿರುವ ವಿಳಂಬದಿಂದಾಗಿ ಇವುಗಳ ಅಂದಾಜು ವೆಚ್ಚ 154233 ಕೋಟಿ ರೂಪಾಯಿಗಳಾಗಿವೆ. ಅದರೆ ಸುಮಾರು 41164 ಕೋಟಿ ರೂಪಾಯಿಗಳಷ್ಟು ಹೆಚ್ಚಳ!

ಅತಿ ಹೆಚ್ಚು ವಿಳಂಬಿತ ಯೋಜನೆಗಳಿರುವುದು ರೈಲು ವಿಭಾಗದಲ್ಲಿ. ಈ ವಿಭಾಗದಲ್ಲಿ 85 ಯೋಜನೆಗಳಲ್ಲಿ ಪ್ರಗತಿ ಎನ್ನುವುದು ಶೂನ್ಯ ಮಟ್ಟದಲ್ಲಿದೆಯಂತೆ. ಈ ಯೋಜನೆಗಳಿಗೆ ವಿಶ್ವಬ್ಯಾಂಕ್ ಮತ್ತು ಏಶಿಯ ಅಭಿವೃದ್ಧಿ ಬ್ಯಾಂಕುಗಳ ಹಣಕಾಸು ನೆರವಿದ್ದರೂ ಹಣಕಾಸು ಸುಲಭವಾಗಿ ದೊರೆಯದೇ ಇರುವುದೇ ಈ ವಿಳಂಬಕ್ಕೆ ಕಾರಣವಂತೆ.

ಎರಡನೇ ಕ್ಷೇತ್ರವೆಂದರೆ ಪೆಟ್ರೋಲಿಯಂ ಈ ಕ್ಷೇತ್ರದಲ್ಲಿ 34 ಯೋಜನೆಗಳಲ್ಲಿ ಬರೀ ಶೇ 69 ರಷ್ಟು ಪ್ರಗತಿ ಯಾಗಿದೆಯಂತೆ. ನಂತರದ ಸ್ಥಾನ ವಿದ್ಯುತ್ ಯೋಜನೆಗಳದ್ದು. ವಿದ್ಯುತ್ ವಲಯದ ಯೋಜನೆಗಳಲ್ಲೂ ಹಲವು ಯೋಜನೆಗಳು ವಿಳಂಬದ ರೋಗಕ್ಕೆ ಗುರಿಯಾಗಿವೆ.

ತಮಾಷೆಯೆಂದರೆ ವಿಳಂಬವಾಗಿರುವ ಬಹುತೇಕ ಯೋಜನೆಗಳಲ್ಲಿ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಹಣಕಾಸು ನೆರವು ಮಂಜೂರಾಗಿದ್ದು ಈ ಸಂಸ್ಥೆಗಳಲ್ಲ ವಿಶ್ವಬ್ಯಾಂಕು ಮತ್ತು ಏಶಿಯನ್ ಅಭಿವೃದ್ಧಿ ಬ್ಯಾಂಕುಗಳೂ ಸೇರಿರುವುದು.

ಮತ್ತೆ ರಫ್ತು ಮಂತ್ರ ಜಪ

ರಫ್ತು ಶೇ. 7.94 ರಷ್ಟು ಕಡಿಮೆಯಾಗಿದೆ. ರಫ್ತು ತೀವ್ರವಾಗಿ ಹೆಚ್ಚಿದರೆ ಮಾತ್ರ ಆರ್ಥಿಕ ಅಲ್ಪ ಸ್ವಲ್ಪ ಬೆಳವಣಿಗೆ ತೋರುವುದು ಸಾಧ್ಯ. ಅದಕ್ಕಾಗಿ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಶತಾಯಗತಾಯ ಪಯತ ಮಾಡುತಿದೆ. ಆದರೆ ಆದರ ಯಾವ ಪ್ರಯತ್ನಗಳೂ ಸಫಲವಾಗುತ್ತಿಲ್ಲ. ಆಮದು ರಫ್ತು ನೀತಿಯನ್ನು ರಫ್ತುದಾರರಿಗೆ ಅನುಕೂಲವಾಗುವಂತೆ ಬದಲಾಯಿಸ ಲಾಯಿತು. ಅನಂತರ ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಸಾಲ ನೀತಿಯನ್ನು ರಫ್ತನ್ನು ಪ್ರೋತ್ಸಾಹಿಸುವಂತೆ ರೂಪಿಸಿತು. ಆದರೂ ರಫ್ತು ಬೆಳೆವ ಬದಲು ಕುಸಿಯುತ್ತಲೇ ಹೊಯಿತು.

ಈಗ ಕೇಂದ್ರ ಸರ್ಕಾರ ಇನ್ನೊಂದು ಕಂತೆ ಕ್ರಮಗಳನ್ನು ಘೋಷಿಸಿದೆ. ಅವುಗಳಲ್ಲಿ

- ರಫ್ತಿಗಾಗಿ ನೀಡುವ ಸಾಲಗಳ ಮೇಲಿನ ಬಡ್ಡಿದರದಲ್ಲಿ ಕಡಿತ
- ರಫ್ತು ಘಟಕಗಳಿಗೆ ತೆರಿಗೆ ವಿನಾಯಿತಿ 5 ವರ್ಷಗಳಿಂದ 10 ವರ್ಷಗಳಿಗೆ ಏರಿಕೆ
- ರಫ್ತು ಘಟಕಗಳು ಉಪಕಾಂಟ್ರಾಕ್ಟ್ ನೀಡಲು ಮುಕ್ತ
- ಇಪಿಸಿಜಿಯೋಜನೆಯ ವಿಸ್ತರಣೆ ಇತ್ಯಾದಿಗಳೆಲ್ಲ ಸೇರಿಕೊಂಡಿವೆ .

ರಫ್ತು ಅಭಿಮುಖದ ಅಭಿವೃದ್ಧಿ ಸಾಧಿಸುವ ಹುಚ್ಚು ಸಾಹಸವನ್ನು ಬಿಟ್ಟು ದೇಶದ ಸ್ವಾವಲಂಬನೆಯತ್ತ ಗಮನ ನೀಡಿದರೆ ಖಂಡಿತ ಗಮನಾರ್ಹ ಸಾಧನೆ ಸಾಧ್ಯವಾಗುತ್ತಿತ್ತು ಆದರೆ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಅದು ಬೇಕಾಗಿಲ್ಲ. ಉದಾರೀಕರಣದ ಮುಂದುವರಿಕೆಯೇ ಅದರ ಉದ್ದೇಶ.

ಟೊಳ್ಳು ಮಸೂದೆಗಳ ವಿರುದ್ಧ ಬಂಡವಾಳಿಗರ ಹುಯಿಲು

ಕೇಂದ್ರ ಸರ್ಕಾರ ಎರಡು ಹೊಸ ಮಸೂದೆಗಳನ್ನು ಲೋಕಸಭೆಯಲ್ಲಿ ಮಂಡಿಸಿದೆ. ಒಂದು ಫೆಮಾ ಅಂದರೆ ಫಾರಿನ್ ಎಕ್ಸ್‌ಚೇಂಜ್ ಮ್ಯಾನೇಜ್‌ಮೆಂಟ್ ಆಕ್ಟ್ ವಿದೇಶಿ (ವಿನಿಮಯ ನಿರ್ವಹಣೆ ಮಸೂದೆ) ಮತ್ತು ಇನ್ನೊಂದು ಮನಿಲಾಂಡರಿಂಗ್ ಬಿಲ್ ಅಂದರೆ ವಿದೇಶೀ ವಿನಿಮಯದ ಅಕ್ರಮ ಬಳಕೆಯ ವಿರುದ್ಧದ ಮಸೂದೆ.

ಫೆಮಾ ಈಗಿರುವ ಫೆರಾ ಕಾಯಿದೆಯ ಸ್ಥಾನವನ್ನು ತುಂಬಿದರೆ ಇನ್ನೊಂದು ಹೊಸ ಕಾಯಿದೆ. ಈ ಕಾಯಿದೆಯ ಮುಖ್ಯ ಅಂಶಗಳು ಹೀಗಿವೆ.

ಫೆಮಾ:

ವಿದೇಶಿ ವ್ಯವಹಾರಗಳ ನಿಗಮಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ನಿಯಂತ್ರಿಸುತ್ತದೆ. ಫೆರಾ ಕಾಯಿದೆಗೆ ಹೆಚ್ಚಿನ ಆರ್ಥಿಕವಿತ್ತು ಆದು ಹೆಚ್ಚಿನ ನಿಯಂತ್ರಣ ಸಾಧಿಸಿತ್ತು. ಈಗಿರುವ ಪ್ರಕರಣಗಳನ್ನು ಫೆರಾ ಕಾಯಿದೆಯಡಿ ವಿಚಾರಣೆ ನಡೆಸಲಾಗುತ್ತದೆ. ತಪ್ಪಿತಸ್ಥರಿಗೆ ಬರೀ ಹಣದ ದಂಡನೆ. ಯಾವುದೇ ಸಿವಿಲ್ ನ್ಯಾಯಾಲಯ ಈ ವಿಷಯದಲ್ಲಿ ಮಧ್ಯ ಪ್ರವೇಶಿಸುವಂತಿಲ್ಲ.

ವಿದೇಶಿ ಹಣ ಅಕ್ರಮ ಬಳಕೆ ಮಸೂದೆ

ಅಕ್ರಮ ಪ್ರಕರಣಗಳಿಂದ ಪಡೆವ ಲಾಭಕ್ಕೆ ಇದು ಅನ್ವಯವಾಗುತ್ತದೆ. ಪ್ರಕರಣ ನಡೆದಿರುವಾಗಲೇ ಆಸ್ತಿಯನ್ನು ವಶಪಡಿಸಿಕೊಂಡು ತೀರ್ಪು ಬಂದ ನಂತರ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

ಇಂತಹ ಅಕ್ರಮ ಬಳಕೆಯ ಅಪರಾಧ ಜಾಮೀನುರಹಿತ ಅಪರಾಧವಾಗುತ್ತದೆ. ಈ ಕಾಯಿದೆಯ ಜಾರಿಗೆ ಹೊಸ ನಿರ್ದೇಶನಾಲಯವನ್ನು ಸ್ಥಾಪಿಸಲಾಗುತ್ತದೆ.

ಈ ಕಾಯಿದೆಗಳಲ್ಲಿ ಆಕ್ಷೇಪಾರ್ಹವಾದದ್ದೇನೂ ಇಲ್ಲ. ದೇಶದ ಹಿತಕ್ಕೆ ವಿರುದ್ಧವಾಗಿ ಕೆಲಸ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶವನ್ನು ಇವು ಮಾಡಿಕೊಡುತ್ತವೆ ಅಷ್ಟೇ. ಹಾಗೆ ನೋಡಿದರೆ ಫೆಮಾ ಕಾಯಿದೆ ಫೆರಾದಷ್ಟು ನಿಷ್ಠುರವೂ ಆಗಿಲ್ಲ. ಆದರೂ ಬಂಡವಾಳಿಗರು ಈ ಕಾಯಿದೆಗಳ ವಿರುದ್ಧ ಹುಯಿಲೆಬ್ಬಿಸಿದ್ದಾರೆ. ಅವರ ಪ್ರಕಾರ ಲೆಕ್ಕ ಪತ್ರಗಳಲ್ಲಿ ತಪ್ಪು ತೋರಿಸಿ ಅಪರಾಧ ಮಾಡಿದ್ದರೆ ಆದಕ್ಕೆ ಇಷ್ಟು ಕಠಿಣ ಶಿಕ್ಷೆ ನೀಡಬಾರದಂತೆ. ಹೀಗೆ ಎಂತಹ ಅಪರಾಧ ಮಾಡಿದರೂ ಶಿಕ್ಷೆ ನೀಡಬಾರದು ಎನ್ನುವುದೇ ಬಂಡವಾಳಿಗರ ಅಭಿಮತ. ಕೇಂದ್ರದ ಬಿಜೆಪಿ ಸರ್ಕಾರವೂ ಬಂಡವಾಳಿಗರ ಪರವಾಗಿಯೇ ಇರುವಂತೆ ಕಾಣುತ್ತದೆ. ಯಾಕೆಂದರೆ ಈ ಕಾಯಿದೆಗಳು ಲೋಕಸಭೆಯಲ್ಲಿ ಮಂಡನೆಯಾಗಿವೆ ಅಷ್ಟೇ. ಅವುಗಳು ಪಾಸಾಗುವ ಮೊದಲೇ ಬೇಕಾದ ತಿದ್ದುಪಡಿಗಳನ್ನು ಮಾಡಬಹುದು ಎಂಬ ಅಭಿಪ್ರಾಯವನ್ನು ಸರ್ಕಾರದೊಳಗಿನವರು ನೀಡಿದ್ದಾರಂತೆ. ಬಂಡವಾಳಿಗರ ಹಿತಾಸಕ್ತಿಗಳ ರಕ್ಷಣೆಯನ್ನು ಆ ವರ್ಗದ ಸರ್ಕಾರ ಮಾಡಲೇ ಬೇಕಲ್ಲವೆ!

ಕೆಪಿಸಿಎಲ್ ಸಾಧನೆ

ರಾಜ್ಯ ಸರ್ಕಾರಿ ವಲಯದ ಕರ್ನಾಟಕ ಪವರ್ ಕಾರ್ಪೊರೇಷನ್ ಲಿಮಿಟೆಡ್ 1997-98 ರ ಸಾಲಿಗೆ 138 ಕೋಟಿ ರೂಪಾಯಿಗಳ ಲಾಭಗಳಿಸಿದೆ. ಸರ್ಕಾರೀ ವಲಯದ ಉದ್ದಿಮೆಗಳಿಗೆ ವಿರುದ್ಧವಾದ ನೀತಿಗಳೇ ಪ್ರಚಲಿತವಾಗಿರುವ ಈ ದಿನಗಳಲ್ಲಿ ಸರ್ಕಾರಿ ವಲಯದ ಉದ್ದಿಮೆಯೊಂದು ಲಾಭ ತೋರಿಸುವುದು ದೊಡ್ಡ ಸಾಧನೆಯೇ. ಉದಾರೀಕರಣದ ನೀತಿಗಳು ಜಾರಿಗೆ ಬಂದನಂತರ ಈ ಉದ್ದಿಮೆಗಳಿಗೆ ಸರ್ಕಾರಿ ನೆರವು ತೀವ್ರವಾಗಿ ಕಡಿತ ಗೊಂಡಿದೆ. ಹೀಗಿರುವಾಗ ಕೆಪಿಸಿಎಲ್ 15888 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಿ ಶೇ. 34 ರಷ್ಟು ಬೆಳವಣಿಗೆ ತೋರಿಸಿ ಈ ಪ್ರಮಾಣದ ಲಾಭ ತೋರಿಸಿದೆ.

ಖಾಸಗಿ ವಿದ್ಯುತ್ ಯೋಜನೆಗಳು ಹಲವು ಅನುಮೋದನೆಗೊಂಡು ನಂತರ ಜಾರಿಗೆ ಬರುವಲ್ಲಿ ವಿಳಂಬ ಕಾಣುತ್ತಿರುವಾಗ ಮತ್ತು ಅವು ಉತ್ಪಾದನೆ ಪ್ರಾರಂಭಿಸುವಾಗ ವಿದ್ಯುತ್ತಿನ ಬೆಲೆ ಅಪಾರವಾಗಿ ಏರುವ ಲಕ್ಷಣಗಳಿರುವಾಗ ಕೆಪಿಸಿಎಲ್‌ನ ಈ ಸಾಧನೆ ದೊಡ್ಡದು. ಆದರೆ ಉದಾರೀಕರಣದ ದಾರಿಯಲ್ಲಿರುವ ಸರ್ಕಾರ ಮುಂಬರುವ ದಿನಗಳಲ್ಲಿ ಕೆಪಿಸಿಎಲ್ ನಂತಹ ಸರ್ಕಾರಿ ವಲಯದ ಉದ್ದಿಮೆಗಳಿಗೆ ಬೆಂಬಲ ನೀಡದೆ ಅವುಗಳನ್ನು ದುರ್ಬಲಗೊಳಿಸುವುದು ಖಂಡಿತ.

ರಾಜ್ಯದಾದ್ಯಂತ ಹಿರೋಶಿಮಾ ದಿನಾಚರಣೆ

ಕರ್ನಾಟಕದಲ್ಲಿ ಕಳೆದವಾರ

ಆಗಸ್ಟ್ 7

- ಕಾವೇರಿ ಮಧ್ಯಂತರ ವರದಿ ಜಾರಿಗೆ ಒಪ್ಪಿಗೆ
- ಸುರಪುರ ಜಿಲ್ಲೆ ರಚನೆಗೆ ಒತ್ತಾಯಿಸಿ ಬಂದ್
- ಸೀಬರ್ಡ್ ನೌಕಾನೆಲೆ ಯೋಜನೆಗೆ ಕೇಂದ್ರದ ಅಸ್ತು.

ಆಗಸ್ಟ್ 8

- ಕಾವೇರಿ ಉಸ್ತುವಾರಿ ಸಮಿತಿ ಕರಡಿಗೆ ಕರ್ನಾಟಕದ ಒಪ್ಪಿಗೆ.
- ಒಪ್ಪಂದ ರಾಜ್ಯದ ಹಿತಕ್ಕೆ ವಿಪತ್ಕಾರಿ ಎಂದು ಕಾಂಗ್ರೆಸ್
- ಹೊಯ್ಸಳ ಸಂಚಾರಿ ಪೋಲೀಸ್ ಪಡೆಯ ವಾರ್ಷಿಕೋತ್ಸವ
- ಐದು ದಿನಗಳ ರಾಜ್ಯ ಮಿನಿ ಒಲಿಂಪಿಕ್ ಕ್ರೀಡಾಕೂಟ ನೀರಸ ಸಮಾರೋಪದೊಡನೆ ಅಂತ್ಯ.
- ರಾಜ್ಯದಲ್ಲಿ ಐ.ಎಸ್.ಐ. ಚಟುವಟಿಕೆಗಳ ಬಗ್ಗೆ ಕಟ್ಟೆಚ್ಚರ-ಗೃಹ ಸಚಿವರು

ಆಗಸ್ಟ್ 9

- ಮದ್ದೂರು ಬಳಿ ಘರ್ಷಣೆ ಒಂದು ಸಾವು : ನಿಷೇದಾಜ್ಞೆ ಜಾರಿ
- ರಾಜ್ಯಾದ್ಯಂತ ಕ್ವಿಟ್ ಇಂಡಿಯಾ ಚಳುವಳಿಯ ನೆನಪು
- ಇಂಟಕ್ ಚಿನ್ನದ ಹಬ್ಬ ಆಚರಣೆಯಲ್ಲಿ ಎಸ್. ಸೂರ್ಯನಾರಾಯಣರಾವ್ ಸೇರಿ ಹಲವು ಕಾರ್ಮಿಕ ಮುಖಂಡರಿಗೆ ಸನ್ಮಾನ.

ಆಗಸ್ಟ್ 10

- ಕೋಟ್ಯಾಂತರ ರೂ ಮೌಲ್ಯದ ಭೂಮಿ ಸರ್ಕಾರದ ಸ್ವಾಧೀನಕ್ಕೆ

ಆಗಸ್ಟ್ 11

- ಕಾವೇರಿ ಪ್ರಾಧಿಕಾರ ರಚನೆ ಅಧಿಸೂಚನೆ ಪ್ರಕಟಣೆ
- ರಾಣಿಬೆನ್ನೂರಿನಲ್ಲಿ ಹಿಂಸೆ, ಗೋಲಿಬಾರ್, ಕರ್ಫ್ಯೂ
- ರಾಜ್ಯದಲ್ಲೂ ಕಾಲೇಜು ಅಧ್ಯಾಪಕರ ಮುಷ್ಕರ ಆರಂಭ.

ಆಗಸ್ಟ್ 12

- ಕಾವೇರಿ ಅಧಿಸೂಚನೆ ಸಂವಿಧಾನ ಪೀಠಕ್ಕೆ
- ಸುಪ್ರಸಿದ್ಧ ಬರಹಗಾರ ಡಾ|| ಡಿ.ಆರ್. ನಾಗರಾಜ್ ನಿಧನ
- ಬಾಗೂರು-ನವಿಲೆ ಘಟನೆ : ನ್ಯಾಯಾಂಗ ತನಿಖೆಗೆ ಗುರುದಾಸ್ ಗುಪ್ತ ಆಗ್ರಹ

ಆಗಸ್ಟ್ 13

- ಪ್ರಖ್ಯಾತ ರಂಗಕರ್ಮಿ, ನಾಟಕಕಾರ, ಲೇಖಕ ಸಿಂಧುವಳ್ಳಿ ಅನಂತಮೂರ್ತಿ ನಿಧನ
- ಕನ್ನಂಬಾಡಿ ಭರ್ತಿ : ತಗ್ಗು ಪ್ರದೇಶದ ಜನರಿಗೆ ಎಚ್ಚರಿಕೆ
- ಪಾಕಿಸ್ತಾನದ ಐ.ಎಸ್.ಐ.ನ ಮೂರು ಜನರ ಬಂಧನ

ತಲ್ಲಣಗೊಳಿಸುವ ಅಣ್ವಸ್ತ್ರ ಪೈಪೋಟಿ ಬೇಡ

1945 ಆಗಸ್ಟ್ 6 ಜಪಾನಿನ ಹಿರೋಶಿಮಾ ಮತ್ತು ನಾಗಸಾಕಿಯ ಕರಾಳ ಪರಿಣಾಮಗಳು ಇಡೀ ಜಗತ್ತಿನ ಮಾನವೀಯತೆಯ ಪ್ರಜ್ಞಾವಂತ ಮನಸ್ಸುಗಳನ್ನು ತಲ್ಲಣಗೊಳಿಸಿದ ನೆನಪು ಇನ್ನೂ ಸ್ಮೃತಿ ಪಟಲದಿಂದ ಮಾಸಿಲ್ಲ ಈಗ ಅಂತಹದ್ದೆ ಕಾರ್ಮೋಡವನ್ನು ಇಡೀ ಜಗತ್ತಿನ ಮಾನವ ಕುಲಕ್ಕೆ ಉಣಬಡಿಸಹೊರಟ ಯುದ್ಧಕೋರ ಮನಸ್ಸಿನ ಆಳುವ ವರ್ಗಗಳ ವ್ಯಾಘ್ರ ನೀತಿಯನ್ನು ಪ್ರಗತಿ ಪರ ಸಂಘಟನೆಗಳು ರಾಜ್ಯದಾದ್ಯಂತ ಪ್ರಬಲವಾಗಿ ವಿರೋಧಿಸಿವೆ.

ಇದೇ ಆಗಸ್ಟ್ 6 ರಂದು ರ್ಯಾಲಿ ಪ್ರದರ್ಶನ, ಸಭೆ ಸೆಮಿನಾರ್‌ಗಳ ಮುಖಾಂತರ ಪ್ರಜ್ಞಾವಂತ ಜನತೆಯ ತಲ್ಲಣ ಹೆಚ್ಚಿಸುವ ಅಣ್ವಸ್ತ್ರ ಪೈಪೋಟಿಯನ್ನು ವಿರೋಧಿಸಿದ ಲಕ್ಷಾಂತರ ಜನತೆ ಹಸಿದ ಹೊಟ್ಟೆ ಹೊತ್ತು ಹರಿದ ಬಟ್ಟೆ ಉಟ್ಟು ರೋಗದ ಗೂಡುಗಳಲ್ಲಿ ಉಸಿರು ಬಿಗಿ ಹಿಡಿದು ಭರವಸೆಯ ಮೂಟೆ ಜೊತೆ ಬವಣೆಯ ಹಾದಿ ಸವೆಸುತ್ತಿರುವ ಅಸಂಖ್ಯಾತ ಭಾರತೀಯರಿಗೆ ಒಂದು ಭದ್ರಬದುಕನ್ನು ನೀಡುವಂತೆ ಒತ್ತಾಯಿಸಿದ ಜನತೆ ಕಾಲುಕೆರೆದು ಯುದ್ಧ ಹೂಡುವ ನೀತಿಯಿಂದ ಹಿಂದೆ ಸರಿಯುವಂತೆಯು ಆಗ್ರಹಿಸಿದ ವರದಿಗಳು.



ಭಾರತಕ್ಕೆ ಬಾಂಬ್ ಏಕೆ: ಬಿಜೆಪಿ ಸ್ಪಷ್ಟ ಪಡಿಸಲಿ

ಶಿರಸಿ: ತಮ್ಮ ಸರ್ಕಾರಕ್ಕೆ ಮಿತ್ರ ಪಕ್ಷಿಗಳಿಂದ ನಿತ್ಯ ಅಪಾಯ ಇದ್ದು ಅದರಿಂದ ರಕ್ಷಣೆ ಪಡೆಯುವ ಒಂದೇ ಉದ್ದೇಶ ಅಣ್ವಸ್ತ್ರ ಪರೀಕ್ಷೆ ಎಂದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್.ನಾಗರಾಜ್ ಬಾಂಬ್ ಭಾರತಕ್ಕೆ ಅವಶ್ಯವಿದ್ದಲ್ಲಿ ಅದನ್ನು ಸ್ಪಷ್ಟಪಡಿಸಲಿ ಎಂದು ಸವಾಲೆಸೆದರು. ಅಯ್ಯೋಧ್ಯ ಘಟನೆಯಿಂದ 180 ಎಂ.ಪಿ ಗಳನ್ನು ಗಳಿಸಿಕೊಂಡ ಬಿಜೆಪಿ ಉಳಿದ ಬಹುಮತಕ್ಕಾಗಿ ಅಣುಪರೀಕ್ಷೆ ನಡೆಸಿ ಭಾರತದ ಹೆಮ್ಮೆಯ ವಿಷಯವನ್ನಾಗಿಸಹೊರಟಿರುವುದು ಖಂಡನೀಯವೆಂದರು.

ಸಿಪಿಐ(ಎಂ) ಉತ್ತರ ಕನ್ನಡ ಜಿಲ್ಲಾ ಸಮಿತಿ ಏರ್ಪಡಿಸಿದ್ದ ಹಿರೋಶಿಮಾ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡಿದ ಜಿ.ಎನ್. ಹಿರೋಶಿಮಾ ನಾಗಸಾಕಿಯ ದುರಂತವನ್ನು ವಿವರಿಸಿ ಆ ನಾಲ್ಕು ದಿನಗಳ ಅಂತರದಲ್ಲಿ 3 ಲಕ್ಷ 40 ಸಾವಿರ ಜನರನ್ನು ಆಹುತಿ ತೆಗೆದುಕೊಂಡ ಸಾಮ್ರಾಜ್ಯಶಾಹಿಗಳ ಯುದ್ಧ ಪಿಪಾಸೆ ನೀತಿಯನ್ನು ವಿವರಿಸಿದರು.

ಭಾರತ ಬಾಂಬ್ ತಯಾರಿಸಲು 12 ಸಾವಿರ ಕೋಟಿ ರೂ. ವ್ಯಯ ಮಾಡುತ್ತಿದೆ. ಇದು ಕರ್ನಾಟಕದ ವಾರ್ಷಿಕ ಬಜೆಟ್‌ಗೆ ಸಮ. ಇಷ್ಟು ಹಣವನ್ನು ನೀರಾವರಿ ಯೋಜನೆಗೆ ಬಳಸಿದರೆ ಲಕ್ಷಾಂತರ ಎಕರೆ ಜಮೀನಿಗೆ ನೀರುಣಿಸಬಹುದೆಂದರು. ಬಿಜೆಪಿಯು ತನ್ನ ಪ್ರಣಾಳಿಕೆಯಲ್ಲಿ ಕೊಟ್ಟ ಭರವಸೆಗಳಾದ ಕೋಟಿ ಉದ್ಯೋಗ, ಬಡತನ ನಿರ್ಮೂಲನೆ, ಭ್ರಷ್ಟಾಚಾರ ತಡೆಗಟ್ಟುವಿಕೆ ಮೇಲಾಗಿ ಬೆಲೆ ಏರಿಕೆ ತಡೆಗಟ್ಟುವಲ್ಲಿ ವಿಫಲವಾಗಿ ತನ್ನ ಕೋಮುವಾದಿ ನೀತಿಯಿಂದ ಅಧಿಕಾರದಲ್ಲುಳಿಯಲು ನಡೆಸಿದ ಯತ್ನದ ಜೊತೆ ಅಮೇರಿಕಕ್ಕೆ ತಲೆ ಬಾಗಿ ಸಿಟಿಬಿಟಿಗೆ ಸಹಿಹಾಕುವ ಕುತಂತ್ರವೆಂದರು.

ಟಿ.ಎಸ್.ನಾಯ್ಕ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಂ.ಬಿ.ನಾಯರ್ ಮುಂತಾದವರು ಮಾತನಾಡಿದರು ಶಾಂತರಾಂನಾಯಕ್ ಸ್ವಾಗತಿಸಿದರೆ. ಪಿ.ಜಿ. ಮಶಾಲ್ದಿ ವಂದಿಸಿದರು. ಸಂಪೂರ್ಣ ನಿಶ್ಶಸ್ತ್ರೀಕರಣಕ್ಕಾಗಿ ಜನತೆ ಹೋರಾಡಬೇಕಾದ ಅಗತ್ಯತೆ ಬಗ್ಗೆ ವಿವರಿಸಿದರು.

ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಸಿ. ನಾರಾಯಣ ವಹಿಸಿದರೆ ಮಹಾಬಲ ಒಡೇರ ಸ್ವಾಗತಿಸಿ, ದಾಸ್ ಭಂಡಾರಿ ವಂದಿಸಿದರು.

ಹೊಸ ಪೇಟೆ

ಸಮುದಾಯ ಸಾಂಸ್ಕೃತಿಕ ಸಂಘಟನೆ ಬಿ.ಜೆ.ವಿ.ಎಸ್. ಡಿ.ವೈ.ಎಫ್.ಐ ಹಾಗೂ ಎಸ್.ಎಫ್.ಐ ಸಂಘಟನೆಗಳು ನಗರದಲ್ಲಿ ಯುದ್ಧ ವಿರೋಧಿಗೀತೆ ಮುಂಕಾಂತರ ಮೆರವಣಿಗೆ ನಡೆಸಿ ಗಾಂಧಿ ಚೌಕದಲ್ಲಿ ಸಾರ್ವಜನಿಕ ಸಭೆ ನಡೆಸಿದವು. ಪತ್ರಕರ್ತ ಪರಶುರಾಮ್ ಕಲಾರಿ ಮಾತಾಡಿ ಶಿಕ್ಷಣ, ನಿರುದ್ಯೋಗ ವಸತಿ ಮುಂತಾದ ಸಮಸ್ಯೆಗಳು ಭೀಕರವಾಗಿ ಕಾಡುತ್ತಿರುವಾಗ ಕೇಂದ್ರ ಬಿಜೆಪಿ ಸರ್ಕಾರವು ಈ ಎಲ್ಲಾ ಸಮಸ್ಯೆಗಳಿಗೆ ಬನ್ನು ಉತ್ತರವಾಗಿ ನೀಡಿ ತನ್ನ ಯುದ್ಧ ಕೋರ ನೀತಿಯನ್ನು ಸಾಬೀತು ಪಡಿಸಿದೆ ಎಂದರು.

ಸಮುದಾಯ ಕಾರ್ಯದರ್ಶಿ ಎ.ಕರುಣಾನಿಧಿ, ಡಿ.ವೈ.ಎಫ್.ಐ ನ ಅಶೋಕನ್ ಮುಂತಾದವರು ಮಾತನಾಡಿದರು.

ಹೊಸಪೇಟೆಯ ಥಿಯೋಸಾಫಿಕಲ್ ಮಹಿಳಾ ಕಾಲೇಜಿನಲ್ಲಿಯೂ ಹಿರೋಶಿಮಾ ದಿನಾಚರಣೆ ಆಚರಿಸಲಾಯಿತು. ಸಮುದಾಯ ಸಂಘಟನೆ ನಿಶ್ಶಸ್ತ್ರೀಕರಣ ಕುರಿತು ವಿದ್ಯಾರ್ಥಿನಿಯರಿಗೆ ಚರ್ಚಾಸ್ಪರ್ದೆ ಹಾಗೂ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಿತು. ಉಪನ್ಯಾಸಕರಾಗಿ ಕನ್ನಡ ವಿವಿಯ ಚಿಲುವರಾಜು ಭಾಗವಹಿಸಿದರು.

ಉಡುಪಿ

ಸಿಪಿಐ(ಎಂ) ನೇತೃತ್ವದಲ್ಲಿ ನಡೆದ ದಿನಾಚರಣೆಯ ಅಂಗವಾಗಿ ಪಕ್ಷದ ನೂರಾರು ಕಾರ್ಯಕರ್ತರು ಸದಸ್ಯರು ಹಿತೈಶಿಗಳು ಸಾರ್ವಜನಿಕರು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ತಾಲೂಕು ಕಛೇರಿ ಮುಂದೆ ಬಹಿರಂಗ ಸಭೆ ನಡೆಸಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿ ಸಾಮ್ರಾಜ್ಯಶಾಹಿ ಬಂಡವಾಳಿಗರು ತಮ್ಮ ಸಂಪತ್ತು ಅಭಿವೃದ್ಧಿಗಾಗಿ ಯುದ್ಧ ದಾರಿಗಳನ್ನು ಅವಲಂಭಿಸುವ ಚರಿತ್ರೆ ವಿವರಿಸಿದರು. ಜಗತ್ತಿನಲ್ಲಿ ಮಾರಕಾಸ್ತ್ರ ಹಾಗೂ ಅಣುಬಾಂಬ್‌ಗಳನ್ನು ಸಂಪೂರ್ಣವಾಗಿ ನಾಶಗೊಳಿಸ ಬೇಕಾದ ಅಗತ್ಯವನ್ನು ಹೇಳಿದರು.


ಶಿರಸಿಯಲ್ಲಿ

ತಾಲೂಕು ಕಾರ್ಯದರ್ಶಿ ಪಿ.ವಿಶ್ವನಾಥ ರೈ ಮಾತಾಡಿ ಯುದ್ಧ ತಯಾರಿ ಕ್ರಮದಿಂದ ಹಿಂದೆ ಸರಿದು ಜನ ಸಾಮಾನ್ಯರ ಸಮಸ್ಯೆಗಳ ಪರಿಹಾರದತ್ತ ಗಮನ ಹರಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು. ಪಕ್ಷದ ಮುಖಂಡರುಗಳಾದ ರಮೇಶ್ ಮೆಂಡನ್ ಸಾದು ಅಮೀನ್, ಸಂಜೀವ ನಾಯಕ್ ಗುರುರಾಜ ಶೆಟ್ಟಿಗಾರ್ ದೋಗು ಸುವರ್ಣ ಮೊದಲಾದವರು ಉಪಸ್ಥಿತರಿದ್ದರು.

ಕುಂದಾಪುರ

ಪಕ್ಷದ ಸದಸ್ಯರು ಹಾಗೂ ಕಾರ್ಮಿಕರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿ ನೂಗರದಲ್ಲಿ ಮೆರವಣಿಗೆ ನಡೆಸಿ ಮತ್ತೊಮ್ಮೆ ಆದಿನ ಬೇಡವೆಂದು ಘೋಷಣೆಗಳ ಮುಖಾಂತರ ಸಾರ್ವಜನಿಕರ ಗಮನ ಸೆಳೆದರು.

ಕೆ. ಶಂಕರ್ ಮಾತನಾಡಿ ಪೋಖ್ರಾನ್ ನಲ್ಲಿ ಅಣುಸ್ಫೋಟ ನಡೆಸಿ ಅದನ್ನು ಹಾಡಿ ಹೊಗಳಿ ಅಲ್ಲಿ ಶಕ್ತಿ ಪೀಠ ಸ್ಥಾಪನೆ ಮಾಡ ಹೊರಟಿರುವ ಮತಾಂಧ ಶಕ್ತಿಗಳಿಗೆ ಪರಮಾಣು ಬಾಂಬಿನಿಂದಾಗುವ ಸರ್ವನಾಶದ ಅರಿವಿಲ್ಲವೆಂದರು.

ಬೆಂಗಳೂರು: ಬೃಹತ್ ಮೆರವಣಿಗೆ

ಅಣುಬಾಂಬ್ ವಿರೋಧಿ ಒಕ್ಕೂಟದ ನೇತೃತ್ವದಲ್ಲಿ ಸಾವಿರಾರು ನಾಗರೀಕರು ನಗರದ ಚಿಕ್ಕಲಾಲ್ ಬಾಗ್ ನಿಂದ ಬನಪ್ಪ ಪಾರ್ಕಿಗೆ ಬೃಹತ್ ಮೆರವಣಿಗೆ ನಡೆಸಿದರು.

ಸಿಪಿಐ(ಎಂ) ಸಿಐಟಿಯು, ಎಐಟಿಯುಸಿ, ಡಿ.ವೈ.ಎಫ್.ಐ, ಎಸ್.ಎಫ್.ಐ, ಜೆ.ಎಂ.ಎಸ್. ಯುಟಿಯುಸಿ ಎಐಡಿವೈಓ ಎಂಎಫ್‌ಎಸ್, ಎ.ಐ.ಡಿ.ಎಸ್.ಓ ಬಿಜೆವಿಎಸ್, ಮತ್ತು ಸೈನ್ಸ್ ಫೋರಂ ಹಾಗೂ ಜನೋತ್ಸವ ಸಂಘಟನೆಗಳ ಸಾವಿರಾರು ಕಾರ್ಯಕರ್ತರು, ಎಸ್ ಸೂರ್ಯ ನಾರಾಯಣ ರಾವ್, ಸೇತು ರಾವ್, ಎಸ್. ಚಟರ್ಜಿ, ಗಾಯಿತ್ರಿ, ಆರ್. ಶ್ರೀನಿವಾಸ್ ಇನ್ನು ಹಲವು ಗಣ್ಯರ ಮುಖಂಡತ್ವದಲ್ಲಿ ಸುರಿಯುವ ಮಳೆಯಲ್ಲಿಯೇ ಅಣ್ವಸ್ತ್ರವಿರೋಧಿ ಕೋಮುವಾದಿ ವಿರೋಧಿ, ಪ್ರಸ್ತುತ ಸಮಸ್ಯೆಗಳ ವಿರುದ್ದ ಫಲಕಗಳನ್ನು ಹೊತ್ತು ಮೆರವಣಿಗೆ ನಡೆಸಿ ಸಾರ್ವಜನಿಕರ ಗಮನ ಸೆಳೆದರು.

ಬೋರೆಂದು ಸುರಿಯುವ ಮಳೆಯಲ್ಲಿಯೇ ನಡೆದ ಬಹಿರಂಗ ಸಭೆಯಲ್ಲಿ ಸೇತುರಾವ್, ಎಸ್. ಸೂರ್ಯ ನಾರಾಯಣರಾವ್, ಗಾಯತ್ರಿ, ಜಿ.ಕೆ. ಗೋವಿಂದರಾವ್, ಸಿಂಹಾದ್ರಿ ಮುಂತಾದ ಗಣ್ಯರು ಮಾತನಾಡಿದರು.



ಗಂಗಾವತಿ

ಎಸ್.ಎಫ್.ಐ ಹಾಗೂ ಡಿ.ವೈ.ಎಫ್.ಐ ತಾಲೂಕು ಸಮಿತಿಗಳ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ಹಾಗೂ ಯುವಜನರು ಶಾಂತಿ ಮೆರವಣಿಗೆ ನಡೆಸಿ ಗಾಂಧಿ ಚೌಕದಲ್ಲಿ ಸಭೆ ನಡೆಸಿದರು. ಸಭೆಯಲ್ಲಿ ಎಸ್.ಎಫ್.ಐ ನ ಹನುಮೇಶ್ ಬರಗೂರು ಆ 'ಪುಟ್ಟ ಹುಡುಗ'ನ ಪರಿಣಾಮವೇ ಇನ್ನೂ ಕಾರ್ಮೋಡವಾಗಿ ಕಾಡುತ್ತಿದೆ, ಮತ್ತೆ ಯಾವ ಪೋಖ್ರಾನ್ ಸ್ಫೋಟಗಳ ಅಗತ್ಯವಿಲ್ಲ. ಶಿಕ್ಷಣ, ಉದ್ಯೋಗಗಳು ಮಾತ್ರ ಬೇಕಾಗಿದೆ ಎಂದರು.

ನಬೀಸಾಬ್ ವೀರನಗೌಡ ,ಮುದಿಯಪ್ಪ, ಶರಣಪ್ಪ ವೀರಭದ್ರ, ಸೋಮಯ್ಯ, ರೇಣುಕಮ್ಮ ರುದ್ರಮ್ಮ ಮುಂತಾದವರು ನೇತೃತ್ವ ವಹಿಸಿದ್ದರು.

ಹಾಸನ

ಸಿಪಿಐ(ಎಂ) ದಲಿತ ಸಂಘರ್ಷ ಸಮಿತಿ ಬಿಜೆವಿಎಸ್, ಬ್ಯಾಂಕ್ ಎಂಪ್ಲಾಯೀಸ್ ಫೇಡರೇಷನ್ ಜೆ.ಎಂ.ಎಸ್, ವಿಮಾನೌಕರರ ಸಂಘ, ಎಸ್.ಎಫ್.ಐ, ಸಿಐಟಿಯು ಎಐಟಿಯುಸಿ ಮುಂತಾದ ಸಂಘಟನೆಗಳ ನೂರಾರು ಕಾರ್ಯಕರ್ತರು ನಗರದಲ್ಲಿ ಶಾಂತಿಸೌಹಾರ್ದ ಮೆರವಣಿಗೆ ನಡೆಸಿ ಅಣ್ವಸ್ತ್ರ ವಿರೋಧಿಸಿದರು.

ಸಭೆಯನ್ನುದ್ದೇಶಿಸಿ ದರ್ಮೇಶ್, ಪ್ರಕಾಶ್, ಸುಬ್ರಮಣ್ಯ ಮಾಧವನ್, ಎ.ಎಲ್.ಮೂರ್ತಿ ಎಂ.ಸಿ. ದೋಂಗ್ರೆ ಮುಂತಾದವರು ಅಣ್ವಸ್ತ್ರ ಪೈಪೋಟಿ ವಿರೋಧಿಸಿ ಮಾತನಾಡಿದರು.

ಮಂಡ್ಯ: ಎಸ್.ಎಫ್.ಐ, ಡಿ.ವೈ.ಎಫ್.ಐ, ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿ, ಸಿಐಟಿಯು, ಬಿಜೆವಿಎಸ್, ಉಪನ್ಯಾಸಕರು ವಿದ್ಯಾರ್ಥಿಗಳು ಹಾಗೂ ಪತ್ರಕರ್ತರು ಒಳಗೊಂಡಂತೆ 300ಕ್ಕೂ ಹೆಚ್ಚು ಜನರು ಸಿಲ್ವರ್ ಜ್ಯೂಬಿಲಿ ಪಾರ್ಕಿನಿಂದ ಜಿಲ್ಲಾಧಿಕಾರಿ ಕಛೇರಿಗೆ ಶಾಂತಿಯಾತ್ರ ನಡೆಸಿ ಅಣ್ವಸ್ತ್ರ ಪೈಪೋಟಿ ಕೈ ಬಿಡುವಂತೆ ಒತ್ತಾಯಿಸುವ ಮನವಿ ನೀಡಿದರು.

ಗಾಂಧಿ ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ರಾಜ್ಯ ಮುಖಂಡರಾದ ಸಿ. ನಂಜುಂಡಪ್ಪ ಮಾತನಾಡಿ ಇಡೀ. ಜೀವರಾಶಿಗೆ ಮಾರಕವಾದ ಪರಮಾಣು ಅಸ್ತ್ರಗಳನ್ನು ವಿರೋಧಿಸಿದರು. ಸಭೆಯನ್ನುದ್ದೇಶಿಸಿ ರೈತ ಸಂಘದ ಸುನಂದ ಜಯರಾಮ್ ಎಸ್.ಎಫ್.ಐನ ಕೃಷ್ಣೇಗೌಡ, ಬಿಜೆವಿಎಸ್‌ನ ರೇವಣ್ಣ, ಪ್ರಕಾಶ ಮುಂತಾದವರು ಮಾತನಾಡಿ ಉಪಖಂಡದಲ್ಲಿ ಅಣ್ವಸ್ತ್ರ ಪೈಪೋಟಿಯನ್ನು ನಿಲ್ಲಿಸುವಂತೆ ಒತ್ತಾಯಿಸಿದರು

ಧಾರವಾಡ

ಗಾಂಧಿ ಶಾಂತಿ ಪ್ರತಿಷ್ಠಾನ, ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರ, ಸಮುದಾಯ ಮತ್ತಿತರ ಹಲವು ಸಂಘಟನೆಗಳ ಆಶ್ರಯದಲ್ಲಿ ಅಣ್ವಸ್ತ್ರ ವಿರೋಧಿ ಸಮಾವೇಶ ನಡೆಸಲಾಯಿತು. ಕರ್ನಾಟಕ ವಿ.ವಿ.ಯ ಭೌತಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ. ಎಸ್.ಆರ್. ತೋಂಟದಾರ್ಯ, ನಗರದ ಪ್ರಸಿದ್ಧ ವೈದ್ಯರೂ, ಪರಿಸರ ವಾದಿಯೂ ಆದ ಡಾ|| ಸಂಜೀವ ಕುಲಕರ್ಣಿ ಮಾತನಾಡಿದರು. ಕರ್ನಾಟಕ ವಿ.ವಿ.ಯ ಇಂಗ್ಲೀಷ್ ಪ್ರಾಧ್ಯಾಪಕರಾದ ಪ್ರೊ. ಸಿ.ವಿ. ವೇಣುಗೋಪಾಲ ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರದ ಗೌರವ ನಿರ್ದೇಶಕರಾದ ಡಾ. ವಿ.ಎನ್.ದೇಶಪಾಂಡೆ ಕಾಲೇಜು ವಿದ್ಯಾರ್ಥಿಗಳಿಗೆ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ನಡೆಸಿದ್ದ ಅಣುಬಾಂಬು ಸ್ಫೋಟದ ವಿಷಯವೂ ಸೇರಿದಂತೆ ನಡೆಸಿದ ಭಾಷಣ ಸ್ಪರ್ಧೆಯ ವಿಜೇತರಿಗೆ ಬಹುಮಾನ ನೀಡಿದರು. 'ಸಮುದಾಯ' ರಾಜ್ಯ ಸಮಿತಿಯ ಉಪಾಧ್ಯಕ್ಷರಾದ ಸಿ.ಆರ್.ಭಟ್ ಮಂಡಿಸಿದ ಅಣ್ವಸ್ತ್ರ ತಯಾರಿ ಮಾಡಬಾರದೆಂದು, ಸಂಪೂರ್ಣ ನಿಶ್ಶಸ್ತ್ರೀಕರಣ ನಡೆಸಲೇಬೇಕೆಂದು ಕರೆ ನೀಡುವ ಗೊತ್ತುವಳಿಯನ್ನು ಸರ್ವಾನುಮತ ದಿಂದ ಅಂಗೀಕರಿಸಲಾಯಿತು. ಇದನ್ನು ಆಗಸ್ಟ್ 9 ರ 'ನಾಗಸಾಕಿ ದಿನ'ದ ಅಣ್ವಸ್ತ್ರ-ವಿರೋಧಿ ಮೆರವಣಿಗೆಯ ನಂತರ ಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಸರ್ಕಾರಕ್ಕೆ ಕಳಿಸಲಾಯಿತು.

ಸಮುದಾಯ ಮತ್ತು ಇಪ್ಟಾ ಕಲಾವಿದರಿಂದ ಯುದ್ಧ-ವಿರೋಧಿ ಹಾಡುಗಳು, ಅಣ್ವಸ್ತ್ರ-ವಿರೋಧಿ ಭಿತ್ತಿ ಪತ್ರಗಳು, ವ್ಯಂಗ್ಯಚಿತ್ರಗಳ ಪುಸ್ತಕಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

ಬಿಜಾಪುರ

ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಭೀಮಸಿ ಕಲಾದಗಿ, ನಬೀಸಾಬ ದವಳಗಿ, ವೆಂಕಟೇಶ ಕೂಲಿಕಾರ, ಸುರೇಖ ರಜಪೂತ, ಚಂಚಲಕರ, ಐಹಮಜದ, ಲಿಂಗರಾಜ್, ಲಕ್ಷ್ಮಣ ರಬ್ಬಳಕಿ ಮಾತನಾಡಿದರು. ಸಂಗಮೇಶ್ವರ 'ವಿಳಗಿ' ಅಧ್ಯಕ್ಷತೆ ವಹಿಸಿದ್ದರು. ○


ಹಾಸನದಲ್ಲಿ

1992-93ರ ಮುಂಬೈ ಗಲಭೆಗಳು ಶ್ರೀಕೃಷ್ಣ ಆಯೋಗ ಕಂಡದ್ದೇನು?

ಕೊನೆಗೂ ಶ್ರೀಕೃಷ್ಣ ಆಯೋಗದ ವರದಿಯನ್ನು ಮಹಾರಾಷ್ಟ್ರದ ಬಿ.ಜೆ.ಪಿ.-ಶಿವಸೇನೆ ಸರ್ಕಾರ ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಮಂಡಿಸಲೇ ಬೇಕಾಗಿ ಬಂತು. ಈ ವರದಿಯನ್ನು ಪ್ರಕಟಿಸುವಂತೆ ಹಲವು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳಿಂದಾಗಿ ಶಿವಸೇನೆ-ಬಿ.ಜೆ.ಪಿ. ಸರಕಾರಕ್ಕೆ ಬೇರೆ ದಾರಿ ಉಳಿದಿರಲಿಲ್ಲ ಎಂದು ಹೇಳಲಾಗುತ್ತಿದ್ದೆ. "ಆಯೋಗಗಳ ಬಗ್ಗೆ ನನಗೆ ನಂಬಿಕೆಯಿಲ್ಲ" ಎಂಬ ಶಿವಸೇನೆ ಮುಖ್ಯಸ್ಥ ಬಾಳ ಠಾಕ್ರೆಯವರ ಮಾತು ಇದನ್ನೂ ದೃಢಪಡಿಸಿದೆ.

ಶ್ರೀಕೃಷ್ಣ ಆಯೋಗ ಈಗಾಗಲೇ ಜಾತ್ಯಾತೀತ ವ್ಯಕ್ತಿಗಳು, ಸಂಘಟನೆಗಳು ಹೇಳಿದ್ದನ್ನು ದೃಢಪಡಿಸಿದೆ. ಈ ಹಿಂದೆ ನಿವೃತ್ತ ನ್ಯಾಯಾಧೀಶರುಗಳಾದ ಸುರೇಶ್ ಹಾಗೂ ದಾವೂದ್‌ರವರಿದ್ದ ಒಂದು ಸಮಿತಿ ಹಾಗೂ ನಂತರ ಖ್ಯಾತ ಸಮಾಜ ಶಾಸ್ತ್ರಜ್ಞ ಅಸ್ಗರ್ ಅಲಿ ಇಂಜಿನಿಯರ್ ನೇತೃತ್ವದ ತಂಡಗಳು ತಮ್ಮ ತನಿಖೆಗಳಿಂದ ತಲುಪಿದ ತೀರ್ಮಾನಗಳು ಶ್ರೀಕೃಷ್ಣ ಆಯೋಗದ ತೀರ್ಮಾನಗಳು ಸುಮಾರು ಒಂದೇ ಆಗಿವೆ ಎನ್ನುತ್ತಾರೆ. ಅಸ್ಗರ್ ಅಲಿ ಇಂಜಿನೀಯರ್, ನ್ಯಾಯಮೂರ್ತಿ ಶ್ರೀಕೃಷ್ಣ ಅವರು ಕೋಮುವಾದಿಗಳು ಇತರ ಜಾತ್ಯಾತೀತ ಹಿಂದುಗಳನ್ನು ವರ್ಣಿಸುವಂತೆ "ಪಾಶ್ಚಾತ್ಯೀಕೃತ ಹಿಂದೂ" ಎಂದೂ ವರ್ಣಿಸುವಂತಿಲ್ಲ. ಆದರೂ ಅವರ ವರದಿಯನ್ನು 'ಹಿಂದುಗಳ ವಿರುದ್ಧ ಪಕ್ಷಪಾತದಿಂದ ಕೂಡಿದೆ' ಎಂದು ಹೇಳಲಾಗಿದೆ ಎನ್ನುತ್ತಾರೆ ಶ್ರೀಯುತ ಅಸ್ಗರ್ ಅಲಿ ಇಂಜಿನೀಯರ್.



ಈ ಆಯೋಗವನ್ನು ಜನವರಿ 23, 1993ರಂದು ನೇಮಿಸಲಾಯಿತು. ಐದು ವರ್ಷಗಳ ಕಾಲ ನ್ಯಾಯಮೂರ್ತಿ ಶ್ರೀಕೃಷ್ಣ ಅವರು 500ಕ್ಕೂ ಹೆಚ್ಚು ವ್ಯಕ್ತಿಗಳ ಹಾಗೂ 2135 ಅಫಿಡಿವಿಟ್‌ಗಳ ಪರೀಕ್ಷಣೆ ನಡೆಸಿದರು. ಮುಂಬೈಯ 72 ಪೋಲೀಸ್ ಠಾಣೆಗಳನ್ನು, ಹಲವು ಉನ್ನತ ಪೋಲೀಸ್ ಅಧಿಕಾರಿಗಳನ್ನು, ಉನ್ನತ ರಾಜಕಾರಣಿಗಳನ್ನು ಪ್ರಶ್ನಿಸಿ ಈ ವರದಿಯನ್ನು ತಯಾರಿಸಿದ್ದಾರೆ.

★

ಆಕೆಯ ಮನೆಯ ಮುಂದೆ ಜನವರಿ 3, 1993ರಂದು ಸರ್ವೇ ನಡೆಸಿ ಒಂದು ಅಳಿಸಲಾಗದ ಗುರುತು ಹಾಕಲಾಯಿತು. ಜನವರಿ 9ರಂದು ಮನೆಯ ಬಾಗಿಲು ತಟ್ಟಿದ ಸದ್ದು. ಆಕೆ ಹೊರ ಬಂದಾಗ ಖಡ್ಗಧಾರಿ, ಕತ್ತಿಧಾರಿ, ಲಾಠಿಧಾರಿ 'ಶಿವಸೈನಿಕ'ರ ವಿಚಾರಣೆ - 'ನಿನ್ನ ಮುಸಲ್ಮಾನ ಗಂಡ ಎಲ್ಲಿದ್ದಾನೆ?' ಮನೆಯಲಿಲ್ಲ, ಬೇಕಾದರೆ ಹುಡುಕಿ ಎಂದಳು. ಶಿವಸೈನಿಕರಿಗೆ ಆತ ಸಿಗಲಿಲ್ಲ. ಏಕೆಂದರೆ ಆತನನ್ನು ಪೆಟ್ಟಿಗೆ ಮಾದರಿಯ ಮಂಚದಲ್ಲಿ ಆಕೆ ಅಡಗಿಸಿಟ್ಟಿದ್ದಳು. ಜನವರಿ 13ರಂದು ಮತ್ತೆ ಸಶಸ್ತ್ರ ಶಿವಸೈನಿಕರು ಬಂದರು, ಒಬ್ಬ ಮುಸಲ್ಮಾನರನ್ನೇಕೆ ಮದುವೆಯಾದೆ, ನಾವೆಲ್ಲಾ ಹಿಂದೂಗಳು ಸತ್ತಿದ್ದೇವೆಯೇ ಎಂದು ಬೈದರು.

ಇದು ಶ್ರೀಕೃಷ್ಣ ಆಯೋಗದ ಮುಂದೆ ರೇಶ್ಮಾ ಉಮರ್ ಮಕ್ಕಿ ನೀಡಿದ ಸಾಕ್ಷಿ. ಈ ಹಿಂದೂ ಮರಾಠಿ ಮಹಿಳೆ ಮುಸಲ್ಮಾನನಾದ ಉಮರ್ ಮಕ್ಕಿಯನ್ನು ವಿವಾಹವಾಗಿದ್ದಳು. ಇಂತಹ ಹಲವು ಘಟನೆಗಳ ಆಧಾರದಲ್ಲಿ ಶ್ರೀಕೃಷ್ಣ ಆಯೋಗ ಹೀಗೆ ಹೇಳಿದೆ-

"ಮುಸ್ಲಿಮರ ಮೇಲೆ ಶಿವಸೈನಿಕರು ಕೈಯಲ್ಲಿ ಸಂಸ್ಥೆಗಳ ಮತ್ತು ಮತದಾರರ ಪಟ್ಟಿ ಹಿಡಿದು ಮಿಲಿಟರಿಯಂತೆ ಕರಾರುವಕ್ಕಾಗಿ ಆಕ್ರಮಣ ನಡೆಸಿದರು."

★

ಜನವರಿ, 1993. ಯುವರಾಜ್ ಮೋಹಿತೆ ಒಬ್ಬ ಪತ್ರಕರ್ತ. ಎರಡೂ ಕೋಮಿನವರು ಶಾಂತಿ ಕಾಪಾಡಲೆಂದು ಕರೆ ನೀಡುವ ಹೇಳಿಕೆ ನೀಡಬೇಕೆಂದು ಬಯಸಿದ್ದ ಆಗಿನ ಮುಂಬೈ ಮೇಯರ್ ಚಂದ್ರಕಾಂತ್ ಹಂದೊರೆ ಆತನನ್ನು ಬಾಳಠಾಕ್ರೆಯವರ ನಿವಾಸ 'ಮಾತೋಶ್ರೀ'ಗೆ ಕರೆದೊಯ್ದರು. ಇದಕ್ಕೆ ಮೊದಲು ಅವರಿಬ್ಬರು ಸ್ಮಗ್ಲರ್ ಆಗಿದ್ದು ರಾಜಕಾರಣಿಯಾದ ಹಾಜಿ ಮಸ್ತಾನನನ್ನು ಭೇಟಿಯಾದಾಗ ಆತ ಇಂತಹ ಹೇಳಿಕೆಗೆ ಸಹಿ ಹಾಕಲು ಸಿದ್ಧನಾದ.

'ಮಾತೊಶ್ರೀ'ಯೊಳಗಿನ ದೃಶ್ಯವನ್ನು ಮೋಹಿತೆ ವಿವರಿಸಿದ್ದನ್ನು ಶ್ರೀಕೃಷ್ಣ ಆಯೋಗದ ವರದಿ ಅವರದ್ದೇ ಮಾತುಗಳಲ್ಲಿ ದಾಖಲಿಸಿದೆ.

"ಠಾಕ್ರೆ ಕಾವಿ ಶರಟು ಮತ್ತು ಲುಂಗಿ ಧರಿಸಿದ್ದರು, ಜೈ ಮಹಾರಾಷ್ಟ್ರ ಎಂದು ಬರಮಾಡಿಕೊಂಡರು.... ಠಾಕ್ರೆ ಮತ್ತು ಹಂದೋರೆ ದಂಗೆಗಳ ಬಗ್ಗೆ ಚರ್ಚಿಸಿದರು......... ಈ ನಡುವೆ ಠಾಕ್ರೆಯವರು ಹಲವು ದೂರವಾಣಿ ಕರೆಗಳನ್ನು ಉತ್ತರಿಸಿದರು.

ಮಾತುಕತೆಗಳಿಂದ ಸ್ಪಷ್ಟವಾಗಿತ್ತು..... ಠಾಕ್ರೆ ಶಿವಸೈನಿಕರಿಗೆ, ಶಾಖಾ ಪ್ರಮುಖರಿಗೆ, ಮತ್ತಿತರ ಕಾರ್ಯಕರ್ತರಿಗೆ ಮುಸ್ಲಿಮರ ಮೇಲೆ ಧಾಳಿ ನಡೆಸಿ ಮುಯ್ಯಿಗೆ ಮುಯ್ಯಿ ತೀರಿಸಿ, ಮೌಖಿಕ ಸಾಕ್ಷಿ ಕೊಡಲು ಒಬ್ಬನೇ ಒಬ್ಬ ಮುಸಲ್ಮಾನ ಉಳಿಯದಂತೆ ನೋಡಿಕೊಳ್ಳಿ ಎಂದು ನಿರ್ದೇಶನ ನೀಡುತ್ತಿದ್ದರು".

'ಮಾತೋಶ್ರೀ'ಯಿಂದ ಹೊರಬಂದಾಗ ನೀನು ಇಲ್ಲಿ ನೋಡಿದ್ದನ್ನು, ಕೇಳಿದ್ದನ್ನು ಮರೆತುಬಿಡು ಎಂದರಂತೆ ಮೇಯರ್. ಆ ದಿನ ಶಿವಸೈನಿಕರು ವ್ಯವಸ್ಥಿತವಾಗಿ ಧಾಂಧಲೆ ನಡೆಸಿದ್ದರು. ಬಹುಶಃ ಇದರ ಆಧಾರದ ಮೇಲೆ ಶ್ರೀಕೃಷ್ಣ ಆಯೋಗ ಈ ಮಾತನ್ನು ಹೇಳಿದೆ -

"ಬಾಳ ಠಾಕ್ರೆ ಒಬ್ಬ ಹಿರಿಯ ಸೇನಾಧಿಪತಿಯಂತೆ ತನ್ನ ವಿಧೇಯ ಶಿವಸೈನಿಕರಿಗೆ ಆದೇಶ ನೀಡಿದರು..... ವಿಭಿನ್ನ ವ್ಯಾಪ್ತಿಯಲ್ಲಿದ್ದ ಶಾಖೆಗಳು ಸ್ಥಳೀಯ ಆಧಿಪತ್ಯಗಳ ಕೇಂದ್ರಗಳಾದವು........... ಶಿವಸೇನೆ ಮತ್ತು ಶಿವಸೈನಿಕರು ಮುಸ್ಲಿಮರ ಮೇಲೆ ಆಕ್ರಮಣ ಸಂಘಟಿಸುವಲ್ಲಿ ನೇತೃತ್ವ ವಹಿಸಿದರು ಎಂಬುದರಲ್ಲಿ ಸಂದೇಹವಿಲ್ಲ."

★

ನಂತರ ಮುಂಬೈಯ ಮೇಯರಾದ ಮಿಲಿಂದ್ ವೈದ್ಯರ ಜೊತೆಗೆ ಖಡ್ಗಧಾರಿ ಪೋಲೀಸರು! ನಂತರ ಮಹಾರಾಷ್ಟ್ರದ ಗೃಹ ರಾಜ್ಯ ಸಚಿವರಾದ(!) ಗಾಜಾನನ್ ಕೀರ್ತಿಕರ್ ನೇತೃತ್ವದ ಜನಜಂಗುಳಿಯ 'ಕೆಲವರು' ಒಂದು ಮಸೀದಿಯ ಮೇಲೆ ಧಾಳಿ ಮಾಡಿದರು. ಇದು ಆಯೋಗದ ಮುಂದೆ ಬಂದ ಗಲಭೆಯ ಕೆಲವು ದೃಶ್ಯಗಳು.


★

ಶ್ರೀಕೃಷ್ಣ ಆಯೋಗದ ಪ್ರಕಾರ 900 ಮಂದಿ ಸತ್ತರು, ಇವರಲ್ಲಿ 575 ಮುಸ್ಲಿಮರು, 275 ಹಿಂದುಗಳು, 45 ಮಂದಿ ಯಾರೆಂದು ತಿಳಿಯಲಿಲ್ಲ. ಐವರು ಇತರರು. 2036 ಮಂದಿ ಗಾಯಗೊಂಡರು. ಇವರಲ್ಲಿ 1105 ಮುಸ್ಲಿಮರು, 893 ಹಿಂದುಗಳು, 38 'ಇತರರು'

ಸತ್ತವರಲ್ಲಿ 356 ಮಂದಿ ಪೋಲೀಸ್ ಗೋಳೀಬಾರಿನಿಂದ, 347 ಇರಿತಗಳಿಂದ, 97 ಅಗ್ನಿಸ್ಪರ್ಶಗಳಿಂದ, 80 ಜನಜಂಗುಳಿಯಿಂದ, 22 ಖಾಸಗೀ ಗೋಳಿಬಾರಿನಿಂದಾಗಿ ಹಾಗೂ ನಾಲ್ಕು ಮಂದಿ 'ಇತರ ಕಾರಣ'ಗಳಿಂದಾಗಿ ಸತ್ತರು.

ಪೋಲೀಸ್ ಮಧ್ಯಪ್ರವೇಶ ಮತ್ತು ಗಲಭೆಗಳು ಎರಡರಲ್ಲಿಯೂ ಮುಸ್ಲಿಮರ ಸಾವಿನ ಸಂಖ್ಯೆ ಜಾಸ್ತಿಯಾಗಿರುವುದು ಅಲ್ಪಸಂಖ್ಯಾತರ ಮೇಲೆ ಆಕ್ರಮಣದ ಹಾಗೂ ಪೋಲೀಸ್ ಪಡೆಯಲ್ಲೇ ಅಡಕವಾಗಿರುವ ಮುಸ್ಲಿಂ-ವಿರೋಧಿ ಪಕ್ಷಪಾತದ ಸೂಚಕ ಎಂದು ವರದಿ ಗಮನಿಸಿದೆ. ಆಗಿನ *ಅಡಿಶನಲ್ ಪೋಲೀಸ್ ಕಮಿಶನರ್ ಆರ್.ಡಿ. ತ್ಯಾಗಿ (ನಿವೃತ್ತಿಯ ನಂತರ ಅವರು ಶಿವಸೇನೆ ಸೇರಿದರು)ಯಿಂದ ಹಿಡಿದು ಕಾನ್‌ಸ್ಟೇಬಲ್‌ಗಳವರೆಗೆ ಖಿ*

ಶ್ರೀಕೃಷ್ಣ ವರದಿ: ಪತ್ರಿಕೆಗಳು ಕಂಡಂತೆ........



ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ

'ಗಲಭೆಯ ಪ್ರಮಾಣಿತ ದಾಖಲೆ' ಎಂಬ ಶಿರೋನಾಮೆಯ ಇಂಡಿಯನ್ ಎಕ್ಸ್‌ಪ್ರೆಸ್‌ನ ಸಂಪಾದಕೀಯ (8.8.98) ಹೀಗೆ ಆರಂಭವಾಗುತ್ತದೆ-

"ಡಿಸೆಂಬರ್ 1992 ರಿಂದ ಜನವರಿ ಮೂಲಕ ಮಾರ್ಚ್ 1993 ರವರೆಗೆ ಮುಂಬೈಯಲ್ಲಿ ನಡೆದ ಗಂಭೀರ ಗಲಭೆಗಳ ಕಾರಣ ಮತ್ತು ಪರಿಣಾಮಗಳನ್ನು ಶ್ರೀಕೃಷ್ಣಾ ತನಿಖಾ ಆಯೋಗದ ವರದಿ ಸ್ಫಟಿಕ ಸ್ಪಷ್ಟಗೊಳಿಸಿದೆ. ವರದಿಯಲ್ಲಿನ ಸ್ಪಷ್ಟತೆ, ಪ್ರಾಮಾಣಿಕತೆ ಮತ್ತು ಸಮತೋಲನಕ್ಕಾಗಿ ಇಡೀ ದೇಶ ಪ್ರಸ್ತುತ ಮುಂಬೈ ಹೈಕೋರ್ಟಿನ ನ್ಯಾಯಾಧೀಶರಾಗಿರುವ ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣರವರಿಗೆ ಕೃತಜ್ಞತೆ ಸಲ್ಲಿಸಬೇಕು. ಇವರ ಸಮಗ್ರ ಚಿತ್ರ ಮತ್ತು ಗಂಭೀರತೆ ಪ್ರಶ್ನಾತೀತ., ಅವರು ಕಂಡದ್ದರ ಬಗ್ಗೆ ವಿವಾದವೆಬ್ಬಿಸಲಾಗಿದೆ. ಮುಂದೆಯೂ ರಾಜಕೀಯ ಕಾರಣಗಳಿಗಾಗಿ ಎಬ್ಬಿಸುತ್ತಲೇ ಇರಬಹುದು. ಆದರೆ ಸಮಾಜದ ಮುಖ್ಯಧಾರೆಗೆ ಕಾಣುವುದು ಒಂದು ನಿಜ ಸಂಗತಿಗಳ, ತರ್ಕಸಂಗತವಾದ ಹಾಗೂ ಆ ಭಯಾನಕ ದಿನಗಳ ಸತ್ಯದಾಖಲೆ. ಆದ್ದರಿಂದ ರಾಜಕಾರಣಿಗಳನ್ನು ಮರೆತ ಎಷ್ಟೋ ಸಮಯದ ನಂತರವೂ ಶ್ರೀಕೃಷ್ಣಾ ಆಯೋಗದ ವರದಿ ಈ ಅವಧಿಯ ಮೊದಲ ಪ್ರಮಾಣಿತ ದಾಖಲೆಯಾಗಿ ನಿಲ್ಲುತ್ತದೆ"

★★★

ಗಂಭೀರ ದೋಷಾರೋಪಣೆ ಎನ್ನುವ 'ಪ್ರಜಾವಾಣಿ' ಯ ಸಂಪಾದಕೀಯದ ಕೆಲವು ಅಂಶಗಳು -

"1992-93 ರಲ್ಲಿ ನಡೆದ ಮುಂಬೈ ಗಲಭೆಗಳ ವಿಚಾರಣೆ ನಡೆಸಿದ ಶ್ರೀಕೃಷ್ಣಾ ಆಯೋಗದ ವರದಿ ಕೊನೆಗೂ ಬಹಿರಂಗವಾಗಿ, ಘಟನೆಗಳಿಗೆ ಕಾರಣರಾದವರನ್ನು ಬಯಲಿಗೆ ಎಳೆದಿದೆ...... ವರದಿಯು ಹಿಂದೂ ವಿರೋಧಿ ಮತ್ತು ತಾರತಮ್ಯದಿಂದ ಕೂಡಿದ್ದು, ಇದರಲ್ಲಿ ಕೆಲವು ಭಾಗಗಳನ್ನು ತಾವು ಖಂಡಿಸುವುದಾಗಿ ಮುಖ್ಯಮಂತ್ರಿ ಹೇಳಿದ್ದು ಸಹಜವೇ. ಶಿವಸೇನೆ-ಬಿಜೆಪಿ ನಾಯಕರ ವಿರುದ್ಧ ಗಂಭೀರವಾದ ದೋಷಾರೋಪಣೆಗಳಿರುವ ವರದಿಯನ್ನು ಅವರದೇ ಸರ್ಕಾರ ಒಪ್ಪಿಕೊಳ್ಳುತ್ತದೆ ಎಂದು ಯಾರೂ ನಿರೀಕ್ಷಿಸುವುದೂ ಇಲ್ಲ. ಆಯೋಗದ ಅಭಿಪ್ರಾಯಗಳಿಗೆ ವಾಸ್ತವಾಂಶಗಳ ಆಧಾರವಿದೆಯೇ ಎಂಬುದು ಪರಿಶೀಲನಾರ್ಹ. ಉದಾಹರಣೆಗೆ ಠಾಕ್ರೆ ವಿರುದ್ಧ ಆರೋಪಗಳಿಗೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ ಎಂದು ಜೋಷಿಯವರು ಭಾವಿಸಿದ್ದಾರೆ. ಆದರೆ ಅವರ ಬರವಣಿಗೆ, ಭಾಷಣಗಳು ಪ್ರಚೋದನಕಾರಿಯಾಗಿದ್ದವು ಎಂಬುದನ್ನು ಅಲ್ಲಗೆಳೆಯಲಾಗದು"

★★★

'ಹೊಣೆ ನಿರ್ವಹಣೆಯಲ್ಲೊಂದು ಗಂಭೀರ ಚ್ಯುತಿ' ಎಂದಿರುವ 'ದಿ ಹಿಂದೂ' ಪತ್ರಿಕೆಯ ಸಂಪಾದಕೀಯ(8.8.98) ದಿಂದ

'ಶ್ರೀಕೃಷ್ಣಾ ಆಯೋಗ ಕಂಡದ್ದನ್ನು ತಿರಸ್ಕರಿಸಿರುವುದರಲ್ಲಿ ಆತಂಕದ ಸಂಗತಿಯೆಂದರೆ ಒಂದು ತನಿಖಾ ಆಯೋಗ ಕಂಡು ಹಿಡಿದದ್ದರ ಬಗ್ಗೆ ವ್ಯಕ್ತಗೊಂಡಿರುವ ಅಪಚಾರವಲ್ಲ, ಅದಕ್ಕೂ ಹೆಚ್ಚಾಗಿ ಮುಂಬೈಯ ಮತ್ತು ಭಾರತದ ಇತ್ತೀಚಿನ ಇತಿಹಾಸದ ಒಂದು ಅತ್ಯಂತ ಕರಾಳ ಅವಧಿಯ ಕಾರಣಗಳೇನು ಎಂದು ಮಂಥನ ಮಾಡಿ ಸರಿಯಾದ ಪಾಠಗಳನ್ನು ಕಲಿಯುವ ಒಂದು ಅಮೂಲ್ಯ ಅವಕಾಶವನ್ನು ಬದಿಗೆಸೆಯಲಾಗಿದೆ......................... ಶ್ರೀ ಕೃಷ್ಣ ವರದಿಯನ್ನು ತಿರಸ್ಕರಿಸಿರುವುದು ಬಹುಶಃ 1992-93 ರ ಹೊಲಸು ಘಟನೆಗಳ ಜವಾಬ್ದಾರಿಯನ್ನು ಹಂಚುವ ಇಡೀ ಪ್ರಯತ್ನದ ಬಗ್ಗೆ ಶಿವಸೇನೆ ವ್ಯವಸ್ಥೆ ಹೊಂದಿದ್ದ ನಿಲುವಿನ ತಾರ್ಕಿಕ ಕೊನೆಯಿರಬೇಕು. ಆದರೂ ಒಂದೆಡೆ ಶ್ರೀಕೃಷ್ಣ ವರದಿಯ ಆಧಾರದ ಮೇಲೆ ಮುಂಬೈಯಲ್ಲಿ ದಂಗೆಗಳ ಸಮಯದಲ್ಲಿ ಕೆಲವು ಪೋಲೀಸ್ ಅಧಿಕಾರಿಗಳ 'ಕರ್ತವ್ಯ ಚ್ಯುತಿ' ಯನ್ನು ಪರೀಕ್ಷಿಸಲು ಒಂದು ಸಮಿತಿ ರಚಿಸಿರುವಾಗ, ಇನ್ನೊಂದೆಡೆ ಅದೇ ವರದಿ ಈ ಘಟನೆಗಳಲ್ಲಿ ಶಿವಸೇನೆಯ ಉದ್ರೇಕಕಾರಿ ಪಾತ್ರದ ಬಗ್ಗೆ ದೋಷ ಹೊರಿಸಿರುವುದನ್ನು ಒಪ್ಪಲು ನಿರಾಕರಿಸುವುದು ಒಂದು ಕರ್ಕಶ ವೈಪರೀತ್ಯ. 1992-93 ರ ಘಟನೆಗಳಲ್ಲಿ ಶಿವಸೇನೆಯ ಮುಖ್ಯಸ್ಥ ಮತ್ತು ಅವರ ಅನುಯಾಯಿಗಳು 1992-93 ರ ಘಟನೆಗಳಲ್ಲಿ ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಕೋಮುಗಳ ನಡುವೆ ಧ್ರುವೀಕರಣದಲ್ಲಿ ವಹಿಸಿದ ಪಕ್ಷಪಾತಪೂರ್ಣ ಹಾಗೂ ಉದ್ರೇಕಕಾರಿ ಪಾತ್ರದ ರಾಜಕೀಯ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಒಂದು ಪ್ರಜಾಪ್ರಭುತ್ವದಲ್ಲಿ ಆಡಳಿತ ನಡೆಸುವವರು ಒಂದು ಬಲವಾದ ಉತ್ತರದಾಯಿತ್ವ ಹಾಗೂ ಕಾನೂನಿಗೆ ಗೌರವವನ್ನು ಪ್ರದರ್ಶಿಸಿದರೆ ಆದರಿಂದ ಆಳ್ವಿಕೆಯ ವಿಶ್ವಾಸಾರ್ಹತೆ ಹೆಚ್ಚುತ್ತದೆ ಎಂಬುದೊಂದು ಸ್ವತಃಸಿದ್ಧ ಮಾತ್ರ. ಜೋಶಿ ಆಡಳಿತಕ್ಕೆ ಶಿವಸೇನೆ ಮುಖ್ಯಸ್ಥ ಶ್ರೀ ಬಾಳಾ ಠಾಕ್ರೆಯ ಮೇಲೆ ಶ್ರೀ ಕೃಷ್ಣ ವರದಿಯ ದೋಷಾರೋಪಣೆಗಳ ರಾಜಕೀಯ ಮತ್ತು ನೈತಿಕ ಪರಿಣಾಮಗಳನ್ನು ಕುರಿತಂತೆ ಕ್ರಮ ವಹಿಸಲು ಕಷ್ಟವಾಗುತ್ತದೆ ಎಂಬುದು ಸ್ವಯಂವೇದ್ಯ. ಪ್ರಜಾಪ್ರಭುತ್ವದ ಮೂಲಭೂತ ವಿಧಿ-ವಿಧಾನಗಳನ್ನು ಅನುಸರಿಸಲು ನಿರಾಕರಿಸುವುದು ನೈತಿಕವಾಗಿ ದೂಷಣಾರ್ಹ ಮಾತ್ರವಲ್ಲ ಎಂಬುದನ್ನು ಮುಖ್ಯಮಂತ್ರಿಗಳು ಮತ್ತು ಅವರ ಸಹಯೋಗಿಗಳು ಅರಿಯಬೇಕು. ಅದು ರಾಜಕೀಯವಾಗಿ ಕೂಡಾ ಮಂದದೃಷ್ಟಿಯದ್ದು, ಏಕೆಂದರೆ ಸಾಮಾನ್ಯ ವಿಧಿ-ವಿಧಾನಗಳ ಇಂತಹ ನಗ್ನ ಉಲ್ಲಂಘನೆಯಿಂದ ಸಾರ್ವಜನಿಕ ಕ್ಷೇತ್ರದಲ್ಲಿ ನೈತಿಕ ಅಧಿಕಾರ ಮತ್ತು ರಾಜಕೀಯ ವಿಶ್ವಾಸಾರ್ಹತೆಗೆ ಅಪಾರ ನಷ್ಟವಾಗುತ್ತದೆ"

★★★

"ಕಳಂಕಕಾರಿ ದೋಷಾರೋಪಣೆ" ಎಂಬ ಶಿರೋನಾಮೆಯ ಡೆಕ್ಕನ್ ಹೆರಾಲ್ಡ್ ಸಂಪಾದಕೀಯ(8.8.98) ಹೀಗೆ ಹೇಳಿದೆ-

"ಪರಿಸ್ಥಿತಿ ಹೇಗಿದೆಯೆಂದರೆ ರಾಜ್ಯದಲ್ಲಿ ಆಳುವ ಸೇನಾ-ಬಿಜೆಪಿ ಕೂಟ ಆಗಲೇ ರಾಜಕೀಯ ತೊಂದರೆಯಲ್ಲಿದೆ. ಶ್ರೀಕೃಷ್ಣ ಆಯೋಗ ಕಂಡು ಹಿಡಿದ ಅಂಶಗಳು ಅದನ್ನು ಇನ್ನಷ್ಟು ಕಂಗೆಡಿಸುತ್ತದೆ. ಆಯೋಗದ ಸಂದೇಶ ಸ್ಪಷ್ಟವಾಗಿದೆ, ನಿರ್ಭಯವಾಗಿದೆ. ಅದು ದೇಶದ ಸಂವಿಧಾನ ಮತ್ತು ಬಹುಸ್ವರೂಪದ ಸಮಾಜ ನಿಂತಿರುವ ಜಾತ್ಯಾತೀತ ತಳಪಾಯವನ್ನೇ ಅಲುಗಾಡಿಸಿದ ಒಂದು ಪ್ರಶ್ನೆಯ ರಾಜಕೀಯ ಆಯಾಮದ ಆಚೆಹೋಗಿದೆ. ಕಾರ್ಯವರದಿ ಕಾನೂನು-ವ್ಯವಸ್ಥೆಯ ಯಂತ್ರದಲ್ಲಿ ಗಮನಿಸಿದ ದೋಷಗಳನ್ನು ಸರಿಪಡಿಸುವ ಭರವಸೆ ನೀಡಿದೆ. ಆದರೆ ನಿಜಸಂಗತಿಯೆಂದರೆ ಈ ಕೂಟ ವಿಶ್ವಾಸಾರ್ಹತೆಯನ್ನು ಮರಳಿ ಪಡೆಯಲು ಹಾಳತವನ್ನು ಸಂವಿಧಾನಕ್ಕೆ ಕಾಯಾ, ವಾಚಾ, ಮನಸಾ ಬದ್ಧತೆಯನ್ನು ತೋರಿಸಬೇಕಾಗಿದೆ"

★★★

ಆರಂಭದಲ್ಲಿ ಹೇಳಿದ 'ಇಂಡಿಯನ್ ಎಕ್ಸ್‌ಪ್ರೆಸ್'ನ ಸಂಪಾದಕೀಯದ ಕೊನೆಯ ಮಾತುಗಳೂ ಗಮನಾರ್ಹ-

"......... ಇನ್ನೊಂದು ಆಯೋಗದ ವರದಿಯ ಬಗ್ಗೆ ಹೇಳುತ್ತಾ ಎಲ್.ಕೆ.ಅಡ್ವಾಣಿಯವರು ಸಂಸತ್ತಿನ ಮುಂದೆ ಉತ್ತಮ ನಿಯಮಗಳನ್ನು ಹಾಕಿಕೊಟ್ಟರು. ದೋಷಾರೋಪಣೆಗೊಳಗಾದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಇನ್ನೂ ಆರೋಪದ ಮೋಡ ಕವಿದವರ ಬಗ್ಗೆ ವಿಚಾರಣೆ ನಡೆಸಲಾಗುತ್ತದೆ ಮತ್ತು ಇತರರೆಲ್ಲರನ್ನು ಶಾಂತಿಯಿಂದಿಡಲು ಬಿಡಲಾಗುತ್ತದೆ. ಜೈನ್ ವರದಿಗೆ ಸಂದದ್ದು ಶ್ರೀಕೃಷ್ಣ ವರದಿಗೂ ಸಲ್ಲಬೇಕು"

ಆದರೆ ಹೀಗೆಂದು ಮಹಾರಾಷ್ಟ್ರದ ಮುಖ್ಯಮಂತ್ರಿ ಜೋಷಿಯವರು ಮಾತ್ರವಲ್ಲ ಈ ನೀತಿ ಪ್ರತಿಪಾದಿಸಿದ ಸ್ವತಃ ಕೇಂದ್ರ ಗೃಹಮಂತ್ರಿ ಅಡ್ವಾಣಿಯವರೂ ಭಾವಿಸಿದಂತಿಲ್ಲ. ರಥಯಾತ್ರೆಯ ರಾಜಕೀಯದ ಅಡ್ವಾಣಿಯವರಿಂದ ಇದನ್ನು ನಿರೀಕ್ಷಿಸುವಂತೆಯೂ ಇಲ್ಲ, ಅಲ್ಲವೇ?

ಮಂದಿಯ ಹೆಸರುಗಳನ್ನು ವರದಿ ನೀಡಿದೆ.

★

ಸಹಿಷ್ಣುತೆ ಮತ್ತು ಉದ್ಯಮಶೀಲತೆಗೆ ಹೆಸರಾದ ಮುಂಬೈಯಲ್ಲಿ ಇಂತಹ ಭೀಕರ ಘಟನೆ ಏಕೆ ನಡೆಯಿತು? 'ಹಿಂದುತ್ವವಾದಿ ಶಕ್ತಿಗಳ ಬೆಳವಣಿಗೆ' ಹಾಗೂ "ಮುಸ್ಲಿಮರು ಜನಾಂಗೀಯ ಅನನ್ಯತೆಯನ್ನು ಹೆಚ್ಚುಹೆಚ್ಚಾಗಿ ಎತ್ತಿತೋರಿಸಲಾರಂಭಿಸಿದ್ದು" ಎಂದು ಆಯೋಗಕ್ಕೆ ಅನಿಸಿದೆ.

"ಈ ನಗರದಲ್ಲಿ ಕೈಗಾರಿಕಾ ಚಟುವಟಿಕೆಗಳ ತ್ವರಿತ ಅವನತಿ ಹಾಗೂ ಅದರಿಂದಾಗಿ ಉಂಟಾದ ಉದ್ಯೋಗಾ ವಕಾಶ ನಷ್ಟ ಅತಾಶೆಗೆ ಒಂದು ಮೂಲ. ಇದು ಈ ನಗರ ಕೋಮುವಾದಿ ಹಿಂಸಾಚಾರಕ್ಕೆ ಬಲಿಯಾಗುವಂತೆ ಮಾಡಿತು ಹಾಗೂ..... ಸುಮಾರು ಅರ್ಧದಷ್ಟು ಉದ್ಯೋಗಾವಕಾಶ ಒದಗಿಸುವ ಅನಧಿಕೃತ ವಲಯ, ಕಾನೂನು ಬಾಹಿರವಾಗಿದೆ, ಕ್ರೂರವಾಗಿದೆ, ಕೊಳಕಾಗಿದೆ, ವಿಪರೀತ ಶೋಷಣೆಯಿಂದ ಕೂಡಿದೆ, ರಕ್ಷಣೆ, ಉದ್ಯೋಗದ ಭದ್ರತೆಯಿಲ್ಲ......... ಇಲ್ಲಿ ಕೆಲಸ ಮಾಡುವವರು ಕೋಮುವಾದಿ ಆಕ್ರಮಣದ ಮೊದಲ ಬಲಿಗಳಾಗಲು ಸಾಧ್ಯ. ಹಾಗೆಯೇ ಕೋಮುದಂಗೆಗಳಲ್ಲಿ ಅವರನ್ನು ಬಳಸಿಕೊಳ್ಳುವುದೂ ಅಷ್ಟೇ ಸುಲಭ" ಎಂದು ಶ್ರೀಕೃಷ್ಣ ಆಯೋಗ ಅಭಿಪ್ರಾಯಪಟ್ಟಿದೆ.

★

ಈ ವರದಿಯಲ್ಲಿ ಶಿವಸೇನೆಯ ಮೇಲೆಯೇ ದೋಷಾರೋಪಣೆ ಮಾಡಲಾಗಿದೆ, ಬಿ.ಜೆ.ಪಿ ಬಗ್ಗೆ ಟೀಕೆಯಿಲ್ಲ ಎಂದು ಬಿ.ಜೆ.ಪಿ. ಮುಖಂಡರಿಗೆ ಸಮಾಧಾನವಾಗಿದೆಯಂತೆ. ಆದರೆ ಈ ಸಮಾಧಾನಕ್ಕೆ, ಕಾರಣಗಳಿಲ್ಲ ಎನ್ನುತ್ತಾರೆ ಕೆಲವು ವಿಶ್ಲೇಷಕರು.

ಈ ಗಲಭೆಗಳ ಹಿನ್ನೆಲೆಯ ಬಗ್ಗೆ ಹೇಳುತ್ತಾ ಶ್ರೀಕೃಷ್ಣ ಆಯೋಗದ ವರದಿ ಹೀಗೆಂದಿದೆ - "ಮತ್ತೆ - ಮತ್ತೆ ಹಿಂದುತ್ವವಾದಿಗಳು ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ಇದ್ದ ಸ್ಥಳದಲ್ಲೇ ಒಂದು ದೇವಸ್ಥಾನ ಕಟ್ಟುವ ಕರ್ಕಶ ಕೂಗು ಎಬ್ಬಿಸುತ್ತಿದ್ದರು....... ಇದಕ್ಕೆ ಬಲವಾದ ಮುಸ್ಲಿಂ ಪ್ರತಿರೋಧದಿಂದ ಸಮಸ್ಯೆ ವಿವಾದಾತ್ಮಕವಾಗಿ ನ್ಯಾಯಾಲಯಕ್ಕೆ ಹೋಯಿತು........ 90ರ ದಶಕದವರೆಗೆ ಕೆಂಡವಾಗುಳಿದಿತ್ತು. ಬಿ.ಜೆ.ಪಿ. ಕಳೆದು ಹೋದ ರಾಜಕೀಯ ಶಕ್ತಿಯನ್ನು ಮರಳಿ ಪಡೆಯಲು ಅದನ್ನು ಪುನಶ್ಚೇತನಗೊಳಿಸಿತು....... ಬಿ.ಜೆ.ಪಿ. ಮುಖಂಡ ಶ್ರೀ ಎಲ್.ಕೆ. ಅಡ್ವಾಣಿಯವರ ರಥಯಾತ್ರೆಯಿಂದ ಮತ್ತೆ ರಾಮಜನ್ಮಭೂಮಿ ಬಾಬ್ರಿ ಮಸೀದಿ ವಿವಾದದ ಮೇಲೆ ಗಮನ ಕೇಂದ್ರೀಕೃತವಾಯಿತು. **ರಥಯಾತ್ರೆಯ ದಾರಿಯಲ್ಲಿ ಅನಿವಾರ್ಯವಾಗಿ ನಡೆದ ಗಲಭೆಗಳು.......... ಬರಲಿದ್ದ ಬಿರುಗಾಳಿಯನ್ನು ಸೂಚಿಸುವ ದೂರದ ಸಿಡಿಲ ಸದ್ದಾಗಿದ್ದವು**.................. ಸುಮಾರು ಜುಲೈ 1992 ರಿಂದ ಬಿ.ಜೆ.ಪಿ. ಅಯೋಧ್ಯೆಯಲ್ಲಿ ರಾಮದೇವಸ್ಥಾನದ ನಿರ್ಮಾಣದ ತನ್ನ ಪ್ರಚಾರಾಂದೋಲನಕ್ಕೆ ಕುಮ್ಮಕ್ಕು ನೀಡಲು ರಾಮ ಪಾದುಕಾ ಮೆರವಣಿಗೆಗಳು, ಚೌಕ್‌ಸಭಾಗಳನ್ನು ಆರಂಭಿಸಿದರು........ **ಧಾರ್ಮಿಕ ಎಂದು ಹೇಳಿಕೊಂಡರೂ ಇದರಲ್ಲಿ ಧರ್ಮದ ಅಂಶ ಕಮ್ಮಿಯಿತ್ತು, ರಾಜಕೀಯ ಜಾಸ್ತಿಯಿತ್ತು.** ತಮ್ಮ ಧರ್ಮವನ್ನು ಪ್ರತಿಪಾದಿಸುವ ಆಕರ್ಷಕ ವೇಶದಲ್ಲಿ ಹಿಂದುತ್ವವಾದಿಗಳು ಈ ಪ್ರಶ್ನೆಯನ್ನು ರಾಜಕೀಯಕರಣಗೊಳಿಸಿದರು"

ಶಿವಸೇನೆಯ ಕುಕೃತ್ಯದಲ್ಲಿ ಬಿ.ಜೆ.ಪಿ.ಯ ಪಾಲಿನ ಬಗ್ಗೆ ಶ್ರೀಕೃಷ್ಣ ಆಯೋಗಕ್ಕೆ ಸಂದೇಹವಿಲ್ಲ ಎಂದು ಇದರಿಂದ ಸ್ಪಷ್ಟವಾಗುವುದಿಲ್ಲವೇ?

ಬೆಂಕಿಯಾರಿಸ ಬನ್ನೀರೇ.... ಮುಂಬೈಯ ಕೊಳಗೇರಿಯಲ್ಲಿ ಡಿ. 7 , 1992 ರ ಒಂದು ದೃಶ್ಯ ಮನೆಗೆ ಬಿದ್ದ ಬೆಂಕಿಯಾರಿಸಲು ಓಡುತ್ತಿದ್ದಾಳೆ ಈ ಬಾಲಕಿ. ಒಬ್ಬ ಓಣಿಯ ತಿರುವಿನಲ್ಲಿ ಸತ್ತು ಬಿದ್ದಿದ್ದಾನೆ.



ಕೋಮುಭಾವನೆ ಬಡಿದೆಬ್ಬಿಸುವ ಶಿವಸೇನೆ - ಬಿಜೆಪಿ ಆಡಳಿತ

ಮಹಾರಾಷ್ಟ್ರದಿಂದ ಒಂದು ವರದಿ - ಅಶೋಕ ಧವಳೆಯವರಿಂದ

ಕಳೆದ ಲೋಕಸಭೆ ಚುನಾವಣೆಯಲ್ಲಿ ಶಿವಸೇನೆ-ಬಿಜೆಪಿ ಮೈತ್ರಿಕೂಟಕ್ಕೆ ಮಹಾರಾಷ್ಟ್ರದ ಜನರು ಮರಣಾಂತಿಕ ಹೊಡೆತ ನೀಡಿದಂದಿನಿಂದಲೂ ಈ ಕೋಮುವಾದಿ ಆಡಳಿತ ಬಿಕ್ಕಟ್ಟಿನಿಂದ ಬಿಕ್ಕಟ್ಟಿಗೆ ಸಾಗುತ್ತಿದೆ.

ಕಳೆದ ತಿಂಗಳಂತೂ ಶಿವಸೇನೆಯ ಆಂತರಿಕ ಕಚ್ಚಾಟಗಳಿಂದಾಗಿ ರಾಜ್ಯ ಸರಕಾರದ ಆಡಳಿತವೇ ಕುಸಿದುಬಿದ್ದಿತ್ತು. ರಾಜ್ಯ ಸಭೆ ಮತ್ತು ವಿಧಾನಪರಿಷತ್ ಚುನಾವಣೆಗಳಲ್ಲಿ ಕ್ರಾಸ್ ಓಟಿಂಗ್ ನೇತೃತ್ವ ವಹಿಸಿದ್ದರೆಂಬ ಆರೋಪಕ್ಕೊಳಗಾಗಿರುವ ಶಿವಸೇನೆ ಮಂತ್ರಿ ಸುರೇಶ್ ನವಲೆ ಅವರ ಮನೆ ಮೇಲೆ ಶಿವಸೇನೆ ಕಾರ್ಯಕರ್ತರೇ ದಾಳಿ ಮಾಡಿದರು. ನವಲೆ ಇದನ್ನು ನೇರವಾಗಿ ವಿಧಾನಸಭೆಯಲ್ಲೇ ಪ್ರಸ್ತಾವಿಸಿದರು. ಕೋಲಾಹಲವೇ ಉಂಟಾಯಿತು. ನವಲೆ ಅವರನ್ನು ಮುಖ್ಯಮಂತ್ರಿ ಮನೋಹರಜೋಶಿ ಕೂಡಲೇ ಸಚಿವ ಸಂಪುಟದಿಂದ ಕಿತ್ತುಹಾಕಿದರು.

ಇದಕ್ಕೂ ಮುಂಚೆ, ಸಂಪುಟ ಪುನರ್ರಚನೆಯ ವೇಳೆ ನವಲೆಯಂತೆ ಮರಾಠಾ ಸಮುದಾಯಕ್ಕೆ ಸೇರಿದ ಇನ್ನೊಬ್ಬ ಶಿವಸೇನೆ ಸಚಿವ ಗುಲಾಬ ರಾವ್ ಗವಂಡೆ ಅವರನ್ನು ಕೈಬಿಡಲಾಗಿತ್ತು. ಈ ಎರಡೂ ವಿದ್ಯಮಾನಗಳು ಶಿವಸೇನೆಯೊಳಗೆ ತೀಕ್ಷ್ಣ ಜಾತಿ ಸಂಘರ್ಷವನ್ನು ಹುಟ್ಟು ಹಾಕಿದೆ. ಅದು ಈಗಲೂ ಮುಂದುವರಿದಿದೆ.

ಶಿವಸೇನೆಯ ಇನ್ನೊಬ್ಬ ಪ್ರಭಾವೀ ಮಂತ್ರಿ ಗಣೇಶ ನಾಯ್ಕ ಕೂಡ ಪಕ್ಷದ ಮುಖ್ಯಸ್ಥ ಬಾಳಾ ಠಾಕ್ರೆಯನ್ನು ಎದುರು ಹಾಕಿಕೊಂಡಿದ್ದಾರೆ. ನಾಯ್ಕ ಅವರ ಸುಪರ್ದಿಗೆ ಬರುವ ಪ್ರದೇಶದಲ್ಲಿ ಬಲಾತ್ಕಾರದಿಂದ ವಸೂಲಿ ಮಾಡಲಾದ ಹಣದ ಪಾಲುಪಟ್ಟ ವಿಚಾರದಲ್ಲಿ ಇವರಿಬ್ಬರ ಮಧ್ಯೆ ಮನಸ್ತಾಪ ಉಂಟಾಗಿದೆ ಎನ್ನಲಾಗಿದೆ. ಗಣೇಶ ನಾಯ್ಕರನ್ನು ಕೂಡ ಸಂಪುಟದಿಂದ ಕಿತ್ತೊಗೆಯಲಾಯಿತು.

ಶಿವಸೇನೆ ಮತ್ತು ಕಾಂಗ್ರೆಸ್‌ನಂತೆ ಬಿಜೆಪಿ ಕೂಡ ಈಚಿನ ರಾಜ್ಯ ಸಭೆ ಹಾಗೂ ಪರಿಷತ್ ಚುನಾವಣೆಗಳಲ್ಲಿ ಕ್ರಾಸ್ ಓಟಿಂಗ್‌ನ ಕಹಿಯನ್ನು ಅನುಭವಿಸಿತು. ಇದು ಆ ಪಕ್ಷದಲ್ಲಿನ ಅತೃಪ್ತಿಯ ಸೂಚನೆಯಾಗಿದ್ದು ಕೇಂದ್ರದಲ್ಲಿ ಅಧಿಕಾರದಲ್ಲಿರುವುದರಿಂದಷ್ಟೇ ಈ ಅತೃಪ್ತಿ ಅಷ್ಟಕ್ಕೇ ನಿಂತಿದೆ.

ಈಚೆಗೆ ನಡೆದ ಸಮಾವೇಶವೊಂದರಲ್ಲಿ ಬಿಜೆಪಿಯ ಉನ್ನತ ನಾಯಕರು ಮುಖ್ಯಮಂತ್ರಿ ಮನೋಹರ ಜೋಷಿ(ಶಿವಸೇನೆ) ಅವರನ್ನು ತೆಗೆದು ಹಾಕುವಂತೆ ಒತ್ತಾಯಿಸಿದರು. ಉಪಮುಖ್ಯಮಂತ್ರಿ ಗೋಪಿನಾಥ ಮುಂಡೆ(ಬಿಜೆಪಿ) ಅವರಿಗೂ ಜೋಷಿಗೂ ಅಷ್ಟಕ್ಕಷ್ಟೇ. ಬಿಜೆಪಿಯ ಈ ಒತ್ತಾಯಕ್ಕೆ ಶಿವಸೇನೆಯಲ್ಲೂ ಸಾಕಷ್ಟು ಬೆಂಬಲ ಸಿಕ್ಕಿ ಜೋಷಿ ಬದಲಿಗೆ ಶಿವಸೇನಾ ಸಚಿವ ನಾರಾಯಣ ದುಬೆ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವ ತಂತ್ರವನ್ನು ಹೂಡಲಾಗಿತ್ತು. ಆದರೆ ಕೊನೆ ಕ್ಷಣದಲ್ಲಿ ಅದು ವಿಫಲವಾಯಿತು. ಆದರೂ ಪರಸ್ಪರರ ನಡುವಿನ ಅವಿಶ್ವಾಸ ಹೆಚ್ಚುತ್ತಲೇ ಇದೆ.

ಆದರೆ, ಈ ಪಿತೂರಿಗಳಿಗಿಂತ ಶಿವಸೇನೆ-ಬಿಜೆಪಿ ಸರಕಾರ ಕಳೆದ ಮೂರುವರೆ ವರ್ಷಗಳಲ್ಲಿ ಎಲ್ಲಾ ರಂಗಗಳಲ್ಲಿ ತೀರಾ ವಿಫಲಗೊಂಡಿದೆ ಎನ್ನುವುದೇ ಇಲ್ಲಿ ಮುಖ್ಯವಾಗುತ್ತದೆ. ಮೈತ್ರಿಕೂಟ ನೀಡಿದ್ದ ಚುನಾವಣೆ ಆಶ್ವಾಸನೆಗಳ ಮಹಾಪೂರ ಇಡೀ ರಾಜ್ಯಾದ್ಯಂತ ಅಪಹಾಸ್ಯಕ್ಕೀಡಾಗಿದೆ.

ವಿದರ್ಭ ಮತ್ತು ಮರಾಠವಾಡಾ ವಲಯಗಳಲ್ಲಿ ನೂರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು ಗ್ರಾಮೀಣ ಪ್ರದೇಶದ ಇತ್ತೀಚಿನ ಈ ಬಿಕ್ಕಟ್ಟು ಸರಕಾರದ ವೈಫಲ್ಯಕ್ಕೆ ಹಿಡಿದ ಕೈಗನ್ನಡಿ. ಕೇಂದ್ರದಲ್ಲಿನ ಬಿಜೆಪಿ ಸರಕಾರದ ನೀತಿಗಳ ಕೃಪೆಯಿಂದಾಗಿ ಬೆಲೆಗಳು ಗಗನಕ್ಕೇರುತ್ತಿವೆ. ಈ ಕೋಮುವಾದಿ ಮೈತ್ರಿಕೂಟ ಆಡಳಿತಕ್ಕೆ ಬಂದಾಗಿನಿಂದಲೂ ಭ್ರಷ್ಟಾಚಾರ ಮತ್ತು ಹಗರಣಗಳಲ್ಲಿ ಮುಳುಗೇಳುತ್ತಿದೆ. ಗ್ಯಾಂಗ್‌ಗಳ ನಡುವಿನ ಕಲಹ-ಕೊಲೆಗಳು, ಸುಲಿಗೆ, ಪೋಲೀಸ್ ದೌರ್ಜನ್ಯ ಮೇರೆ ಮೀರುತ್ತಿದೆ. ಕಾನೂನು ಸುವ್ಯವಸ್ಥೆ ಪರಿಸ್ಥಿತಿ ಹದಗೆಟ್ಟಿದೆ. 1992-97 ರ ಮುಂಬಯಿ ಗಲಭೆಗಳು ಹಾಗೂ ಸರಣಿ ಬಾಂಬ್ ಸ್ಫೋಟ ಕುರಿತ ಶ್ರೀ ಕೃಷ್ಣಾ ಆಯೋಗದ ವರದಿ ಶಿವಸೇನೆ-ಬಿಜೆಪಿ ಸರಕಾರದ ಮೇಲಿನ ತೂಗುಕತ್ತಿಯಂತಿದೆ. (ಅದೀಗ ಪ್ರಕಟವಾಗಿದ್ದು ಸರಕಾರ ತಿರಸ್ಕರಿಸಿಯೂ ಆಗಿದೆ)

ಈ ಎಲ್ಲಾ ಹಿನ್ನೆಲೆಯಲ್ಲಿ ತತ್ತರಿಸುತ್ತಿರುವ ಕಾವಿಪಡೆ ಕೂಟದ ಈ ಸರಕಾರ ಕಳೆದ ಕೆಲವು ವಾರಗಳಲ್ಲಿ ಕೋಮುವಾದಿ ಭಾವನೆಗಳನ್ನು ಕೆರಳಿಸಲು ಇನ್ನಿಲ್ಲದ ಆಟಗಳನ್ನು ನಡೆಸುತ್ತಿದೆ. ಮೂರು ವಿಷಯಗಳನ್ನು ಅದು ಮುಖ್ಯವಾಗಿ ಆಯ್ದುಕೊಂಡಿದೆ.

1. ನಾಥೂರಾವ್ ಗೋಡ್ಸೆಯ ವೈಭವೀಕರಣ ಹಾಗೂ ಗೋಡ್ಸೆ ಮಹಾತ್ಮ ಗಾಂಧಿಯನ್ನು ಕೊಂದಿದ್ದಕ್ಕೆ ಅಪದ್ಧ ಸಮರ್ಥನೆ.
2. ಶ್ರೀ ಕೃಷ್ಣಾ ಆಯೋಗದ ವಿರುದ್ಧ ಅಪಪ್ರಚಾರ.
3.ಬಾಂಗ್ಲಾದೇಶಿ 'ಆಕ್ರಮಣಕಾರರ' ವಿಷಯ

ಶಿವಸೇನೆ-ಬಿಜೆಪಿ ಸರಕಾರದ ವೈಫಲ್ಯಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯುವುದಕ್ಕಾಗಿಯೇ ಇದನ್ನು ಮಾಡಲಾಗುತ್ತಿದೆ. ಕೋಮುವಾದಿ ಮೈತ್ರಿಕೂಟದಲ್ಲಿನ ಆಂತರಿಕ ಕಲಹ ಹಾಗೂ ಪರಸ್ಪರ ನಡುವಿನ ಅಪನಂಬಿಕೆಯ ವಿದ್ಯಮಾನಗಳನ್ನು ಮುಚ್ಚಿಹಾಕಲು ಈ ರೀತಿ ಮಾಡಲಾಗುತ್ತಿದೆ.

ಶ್ರೀಕೃಷ್ಣಾ ಆಯೋಗದ ವರದಿಯ ಪ್ರಕಟಣೆಯಿಂದ ಮಹಾರಾಷ್ಟ್ರ ಸರಕಾರದ ವಿರುದ್ಧ ದೇಶಾದ್ಯಂತ ಭುಗಿಲೇಳುವ ಪ್ರತಿಭಟನೆಯನ್ನು ಎದುರಿಸಲೂ ಶಿವಸೇನೆ-ಬಿಜೆಪಿ ಕೂಟ ಇಂಥ ಹುನ್ನಾರಕ್ಕೆ ಇಳಿದಿದೆ.

ಕೋಮುವಾದಿ, ಕಮ್ಯುನಿಸ್ಟ್ ವಿರೋಧಿ

1995 ರ ಮಾರ್ಚ್‌ನಲ್ಲಿ ಅಧಿಕಾರಕ್ಕೆ ಬಂದಾಗಲೇ ಸೇನಾ-ಬಿಜೆಪಿ ಆಡಳಿತ 'ಬಾಂಗ್ಲಾದೇಶಿ ಅತಿಕ್ರಮಣಕಾರರ' ಪ್ರಶ್ನೆಯನ್ನು ಎತ್ತಿತ್ತು. ಹಿಂದೂಗಳನ್ನು 'ನಿರಾಶ್ರಿತರು' ಹಾಗೂ ಮುಸ್ಲಿಮರನ್ನು 'ಅತಿಕ್ರಮಣಕಾರರು' ಎಂದು ವರ್ಣಿಸುವ ಆರೆಸ್ಸೆಸ್ ನೀತಿಯನ್ನು ಚಾಚೂ ತಪ್ಪದೆ ಪಾಲಿಸಿದ ಠಾಕ್ರೆ, ಮುಂಬಯಿಯಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಬಾಂಗ್ಲಾದೇಶಿ ಅತಿಕ್ರಮಣಕಾರರಿದ್ದಾರೆ ಎಂದು ಆಧಾರರಹಿತ ಆರೋಪ ಮಾಡಿದ್ದರು. ಈ ಅತಿಕ್ರಮಣಕಾರರು ದೇಶ ವಿರೋಧಿ ಶಕ್ತಿಗಳೊಂದಿಗೆ ಸಂಬಂಧ ಹೊಂದಿದ್ದಾರೆ, ಬಾಂಬ್ ಸ್ಫೋಟಗಳಲ್ಲಿ ಅವರ ಪಾತ್ರವಿದೆ, ಇನ್ನೂ ಮುಂತಾದ ಆರೋಪಗಳನ್ನು ಅವರ ವಿರುದ್ಧ ಹೊರಿಸಲು ಆರಂಭವಾಗಿತ್ತು. ಆದರೆ ಇವೆಲ್ಲಕ್ಕೂ ರಾಜ್ಯದಲ್ಲೂ ಇಡೀ ದೇಶದಲ್ಲೂ ಪ್ರತಿಭಟನೆ ವ್ಯಕ್ತವಾಗಿದ್ದರಿಂದ ಹೊಸದಾಗಿ ರಚನೆಯಾಗಿದ್ದ ಸರಕಾರ ತಕ್ಷಣವೇ ತನ್ನ ನಿಲುವನ್ನು ಬದಲಾಯಿಸಿ ಹಿಂದೆ ಸರಿದಿತ್ತು.

ಆದರೆ 'ವಿಧೇಯ' ಹಾಗೂ ಕೋಮು ತಾರತಮ್ಯದ ಪೋಲೀಸ್ ಪಡೆಯನ್ನು ಹೊಂದಿರುವ ಸರಕಾರ 'ಅತಿಕ್ರಮಣ ಕಾರರನ್ನು' ಹೊರದಬ್ಬುವ ಕೆಲಸವನ್ನು ರಹಸ್ಯವಾಗಿ ನಡೆಸಿಕೊಂಡು ಬಂದಿತು. ಈ ಮೂರು ವರ್ಷಗಳಲ್ಲಿ ಬಲಾತ್ಕಾರದ ಹೊರದಬ್ಬುವಿಕೆ ಪ್ರಮಾಣ ತುಂಬಾ ಹೆಚ್ಚಿದೆ. ಕಳೆದ ತಿಂಗಳ ಉಲುಬೆರಿಯಾ ವಿದ್ಯಮಾನಗಳು ಮತ್ತು ಕಲ್ಕತ್ತ ಹೈಕೋರ್ಟ್ ನಿರ್ಧಾರದ ನಂತರ ಈ ವಿಷಯ ಸಾರ್ವಜನಿಕರ ಗಮನವನ್ನು ಹೆಚ್ಚಾಗಿ ಸೆಳೆಯಿತು.

ಆಗಿನಿಂದಲೂ ಶಿವಸೇನೆ-ಬಿಜೆಪಿ ಸರಕಾರ ಈ ವಿಷಯವನ್ನು ಬಳಸಿಕೊಂಡು ಒಂದೇ ಕಲ್ಲಿಗೆ ಮೂರು ಹಕ್ಕಿಗಳನ್ನು ಹೊಡೆಯುವ ಯತ್ನಕ್ಕೆ ಕೈಹಾಕಿದೆ. ಮೂಲಭೂತವಾದಿ ಕೋಮುವಾದಿ ಬಣ್ಣ ಕೊಟ್ಟಿರುವುದೇ ಅಲ್ಲದೆ ಇದು ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳ ನಡುವಿನ ಘರ್ಷಣೆ ಎಂದು ಹೇಳಿ ಇದಕ್ಕೆ ಅನ್ಯಾಕ್ರಮಣಶೀಲ ಸ್ವದೇಶಿ ಪ್ರೇಮದ ತಿರುವನ್ನು ನೀಡಲು ಯತ್ನಿಸಲಾಗಿದೆ. ಇಷ್ಟು ಮಾತ್ರವೇ ಅಲ್ಲದೆ ತನ್ನ ಕಮ್ಯುನಿಸ್ಟ್ ವಿರೋಧಿ ನೀತಿಗನುಗುಣವಾಗಿ ಅದು ಎಡರಂಗ ಸರಕಾರವನ್ನು ಗುರಿಯಾಗಿಸಿದೆ. ರಾಜ್ಯ ವಿಧಾನಸಭೆಯಲ್ಲಿ ಜುಲೈ 28 ರಂದು ಮುಖ್ಯಮಂತ್ರಿ ಮನೋಹರ ಜೋಷಿ ಮತ್ತು ಉಪಮುಖ್ಯಮಂತ್ರಿ ಗೋಪಿನಾಥ ಮುಂಡೆ ಮಾಡಿರುವ ಭಾಷಣಗಳಿಂದ ಇದು ಸ್ಪಷ್ಟವಾಗುತ್ತಿದೆ. ಎಲ್.ಕೆ.ಅಡ್ವಾಣಿ, ಮುರುಳಿ ಮನೋಹರಜೋಶಿ ಮತ್ತಿತರರು ಸಂಸತ್ತಿನಲ್ಲಿ ಮಾಡಿರುವ ಭಾಷಣಗಳಿಂದ ಬಿಜೆಪಿ ನೇತೃತ್ವದ ಕೇಂದ್ರ ಸರಕಾರವೂ ಇದೇ ಧೋರಣೆಯನ್ನು ತಳೆದಿರುವುದು ಗೊತ್ತಾಗುತ್ತದೆ.

ಸಿಪಿಐ(ಎಂ) ಶಾಸಕರ ಪರಿಣಾಮಕಾರಿ ಮಧ್ಯಪ್ರವೇಶ

ಜುಲೈ 28 ರಂದು ಮಹಾರಾಷ್ಟ್ರ ವಿಧಾನಸಭೆಯಲ್ಲಿ ಸಿಪಿಐ(ಎಂ) ಸದಸ್ಯ ಕಾಂ. ನರಸಯ್ಯ ಅದಮ್ ಮಾತನಾಡಿ ಅತಿಕ್ರಮಣಕಾರರೆಂಬ ಸರಕಾರದ ನಿಲುವು ತಪ್ಪು ಎಂದು ವಿವರಿಸಿದರು.

ಭಾರತದೆಲ್ಲೆಡೆಯಿಂದ, ಎಲ್ಲಾ ರಾಜ್ಯಗಳಿಂದ ಕಳೆದ 15-20 ವರ್ಷಗಳಿಂದ ಜನರು ಮಹಾರಾಷ್ಟ್ರ ರಾಜಧಾನಿ ಮುಂಬಯಿಗೆ ಬರುತ್ತಿದ್ದಾರೆ. ಪಶ್ಚಿಮ ಬಂಗಾಳದ ಮುಸ್ಲಿಂ ಸೋದರರೂ ಒಂದೂವರೆ ಎರಡು ದಶಕಗಳಿಂದ ಮುಂಬಯಿಯಲ್ಲಿ ವಾಸಿಸುತ್ತಿದ್ದಾರೆ. ಬಡತನದಿಂದ ಜರ್ಜರಿತವಾಗಿರುವ ಈ ಭಾರತೀಯ ರಾಷ್ಟ್ರೀಯರನ್ನು 'ಬಾಂಗ್ಲಾದೇಶಿ ಮುಸ್ಲಿಮರು' ಎಂದು ವರ್ಣಿಸಿರುವ ಉಪಮುಖ್ಯಮಂತ್ರಿ ಈ ಜನರನ್ನು ಕಾನೂನಿನ ಎಲ್ಲಾ ನಿಯಮಗಳನ್ನು ಮೀರಿ ನೇರವಾಗಿ ಹೊರದಬ್ಬುವ ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ. ಇದಕ್ಕಾಗಿ ಅವರು ಕ್ಷಮೆ ಕೋರಬೇಕು. ಪಶ್ಚಿಮ ಬಂಗಾಳದ ಸಿಪಿಐ(ಎಂ) ನೇತೃತ್ವದ ಸರಕಾರವನ್ನು ರಾಷ್ಟ್ರವಿರೋಧಿ ಎಂದು ವರ್ಣಿಸಲಾಗಿದೆ. ಪ.ಬಂಗಾಳದಿಂದ ಬಂದಿರುವ ಮುಸ್ಲಿಮರು ಭಾರತದ ನಾಗರೀಕರು ಎನ್ನುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಅವರ ಬಳಿ ಪಡಿತರ ಚೀಟಿಗಳೂ ಇವೆ. ಅವರು ನಮ್ಮ ದೇಶದ ಸೋದರರು. ಆದರೆ ಪೋಲಿಸರು ಪ.ಬಂಗಾಳದ ಈ ಬಡ ಮುಸ್ಲಿಮರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ಕಾಮ್ರೇಡ್ ಅದಮ್ ಹೇಳಿದರು.

ಅವರ ಭಾಷಣ ಮುಗಿಯುತ್ತಲೇ ಸಿಪಿಐ(ಎಂ), ಪಿಡಬ್ಲ್ಯುಪಿ, ಸಮಾಜವಾದಿ ಪಕ್ಷ ಮತ್ತು ಜನತಾದಳ ಎಲ್ಲಾ ಶಾಸಕರು ಹಾಗೂ ಕಾಂಗ್ರೆಸ್‌ನ ಕೆಲವು ಸದಸ್ಯರು ಸರಕಾರ ತಕ್ಷಣವೇ ಈ ವಿಚಾರದಲ್ಲಿ ವಿವರಣೆ ನೀಡಬೇಕು ಎಂದು ಒತ್ತಾಯಿಸಿದರು. ಸದನದಲ್ಲಿ ಕೋಲಾಹಲ ಉಂಟಾಯಿತು. ಅನೇಕ ಬಾರಿ ಸದನವನ್ನು ಮುಂದೂಡಲಾಯಿತು.

ನಿಮ್ಮ ನಿಷ್ಠೆ ಮಹಾರಾಷ್ಟ್ರಕ್ಕೋ, ಪಶ್ಚಿಮ ಬಂಗಾಳಕ್ಕೋ ಎಂದು ಸಂಘ ಪರಿವಾರದ ಕೆಲವು ಸದಸ್ಯರು ಕಾ. ಅದಮ್‌ರನ್ನು ಕೆಣಕಿದಾಗ, 'ನನ್ನ ನಿಷ್ಠೆ ಭಾರತಕ್ಕೆ' ಎಂದು ಹೇಳಿದ ಸಂಗಾತಿ ಸೂಕ್ತ ಉತ್ತರವನ್ನೇ ಕೊಟ್ಟರು.

ಇಡೀ ಪ್ರಕರಣ ಮರುದಿನ ಪತ್ರಿಕೆಗಳಲ್ಲಿ ಪ್ರಮುಖವಾಗಿ ಪ್ರಕಟವಾಯಿತು. ಅನೇಕ ಪತ್ರಿಕೆಗಳು ಸಂಪಾದಕೀಯ ಬರೆದು ರಾಜ್ಯ ಸರಕಾರದ ಕ್ರಮಗಳು ಪ್ರಾಥಮಿಕ ಮಾನವೀಯ ಹಕ್ಕುಗಳನ್ನೇ ಉಲ್ಲಂಘಿಸುತ್ತಿವೆ ಎಂದು ಕಟುವಾಗಿ ಟೀಕಿಸಿದವು.

ಬಾಳಾಠಾಕ್ರೆಯಂಥ ಒಬ್ಬ ಸೊಕ್ಕಿನ ಮನುಷ್ಯ ಕೂಡ ಶಿವಸೇನೆಯ ಮುಖಪತ್ರಿಕೆ 'ಸಾಮ್ನಾ'ದಲ್ಲಿ ಲೇಖನ ಬರೆದು ನಾಥೂರಾಮ್ ಗೋಡ್ಸೆ, ಬಾಂಗ್ಲಾದೇಶಿ ಅತಿಕ್ರಮಣಕಾರರು ಮತ್ತು ಶ್ರೀ ಕೃಷ್ಣಾ ಆಯೋಗದ ವಿಚಾರದಲ್ಲಿ ಹಿಂದುತ್ವದ ಶತ್ರುಗಳು ಶಿವಸೇನೆ-ಬಿಜೆಪಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿವೆ ಎಂದು ಒಪ್ಪಿಕೊಂಡರು!

ಆದರೆ, ಮಮತಾ ಬ್ಯಾನರ್ಜಿ ನಾಯಕತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷ ಗಲಿಬಿಲಿಗೊಂಡು ಶಿವಸೇನೆ-ಬಿಜೆಪಿ ಸರಕಾರದ ನೆರವಿಗೆ ಧಾವಿಸಿತು! 'ಅತಿಕ್ರಮಣಕಾರ' ಪ್ರಶ್ನೆಯಿಂದ ತೊಂದರೆಗೊಳಗಾದ ಮುಂಬಯಿಯ ಪ್ರದೇಶಗಳಿಗೆ ಭೇಟಿ ನೀಡಿದ ಟಿಎಂಸಿ ನಿಯೋಗವೊಂದು ಈ ವಿಚಾರದಲ್ಲಿ ರಾಜ್ಯ ಸರಕಾರ ನಿರ್ದೋಷಿ ಎಂದು ಸರ್ಟಿಫಿಕೇಟ್ ನೀಡಿತು! ಇದನ್ನು ಹಾಗೂ ಟಿಎಂಸಿ ನಾಯಕ ಅಜಿತ್ ಪಾಂಜಾ ಪ.ಬಂಗಾಳದ ಎಡರಂಗ ಸರಕಾರದ ವಿರುದ್ಧ ಮಾಡಿದ ಸುಳ್ಳು ಆರೋಪಗಳನ್ನು ಪತ್ರಿಕೆಗಳು ಪ್ರಕಟಿಸಿದವು.

ಆದರೆ, ತೊಂದರೆಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ ಸಿಪಿಐ(ಎಂ) ನಿಯೋಗವೊಂದು ಕೋಮುವಾದಿ ಆಡಳಿತಕ್ಕೆ ಟಿಎಂಸಿ ನೀಡಿದ್ದ ನಿರ್ದೋಷಿ ಸರ್ಟಿಫಿಕೇಟನ್ನು ತಿರಸ್ಕರಿಸಿತು.

5000 ದಷ್ಟು ಮುಸ್ಲಿಮರಿರುವ ವಡಾಲಾದ ಕೊಳಗೇರಿ ಒಂದರಲ್ಲಿ ಸಿಪಿಐ(ಎಂ) ಏರ್ಪಡಿಸಿದ್ದ ಸಭೆಯಲ್ಲಿ ಬಂಗಾಳಿ ಮುಸ್ಲಿಮರು ತಾವು ಎದುರಿಸುತ್ತಿರುವ ಸಂಕಷ್ಟಗಳನ್ನು ವಿವರಿಸಿದರು. ಪೋಲೀಸರು ಮತ್ತು ಸರಕಾರ ತಮ್ಮ ವಿರುದ್ಧ ಅನಾಗರಿಕ ಹಾಗೂ ಅಮಾನುಷವಾಗಿ ನಡೆದುಕೊಳ್ಳುತ್ತಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

ಈಚೆಗೆ ಸಭೆ ಸೇರಿದ್ದ ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯ ಸಮಿತಿ ಶಿವಸೇನೆ-ಬಿಜೆಪಿ ಆಡಳಿತ ಬಡಿದೆಬ್ಬಿಸಿರುವ ಕೋಮುವಾದಿ ಭಾವನೆಗಳನ್ನು ಎದುರಿಸುವ ನಿಟ್ಟಿನಲ್ಲಿ ಮಹತ್ವದ ನಿರ್ಣಯವೊಂದನ್ನು ಕೈಗೊಂಡಿತು.

ಇದು ಶ್ರೀಕೃಷ್ಣ ಆಯೋಗದ ವರದಿ ಮಂಡಿಸಿದ ನಂತರ 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಪ್ರಕಟವಾದ ಉನ್ನಿಯವರ ವ್ಯಂಗ್ಯ. ವ್ಯಂಗ್ಯ ಚಿತ್ರಕಾರರು ಸೂಚಿಸುವಂತೆ ಶಿವಸೇನೆಯ ಪಾಪ ಬಿಜೆಪಿಗಂಟಿದೆಯೇ ಅಥವಾ ಅವರಿಬ್ಬರೂ ಸಕ್ರಿಯ ಪಾಲುದಾರರೇ?



ದೇಶದೊಳಗೆ

ವಿಶ್ವ

ಕೋಮು ಶಕ್ತಿಗಳ ಮುಖವಾಡ ಬಟಾಬಯಲು

ಶಿವಸೇನೆ - ಬಿಜೆಪಿಗೆ ಆಯೋಗದ ಛೀಮಾರಿ

ದೇಶದ ವಾಣಿಜ್ಯ ರಾಜಧಾನಿ ಮುಂಬಯಿ ಮಹಾನಗರ ಅನುಭವಿಸಿದ ಅತ್ಯಂತ ಭೀಕರ ಕೋಮುದಂಗೆ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶ್ರೀ ಕೃಷ್ಣ ಆಯೋಗದ ವರದಿ ಕೊನೆಗೂ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಮಂಡನೆಯಾಗಿದೆ.

ನಿರೀಕ್ಷಿಸಿದಂತೆಯೇ ಆಯೋಗ ದಂಗೆಯಲ್ಲಿ ಕೋಮುವಾದಿ ಶಿವಸೇನೆ ಹಾಗೂ ಬಿಜೆಪಿಯ ಪಾತ್ರವನ್ನು ಬಟಾಬಯಲು ಮಾಡಿದೆ. ಅದೇ ರೀತಿ, ನಿರೀಕ್ಷಿಸಿದಂತೆಯೇ ಕೋಮುವಾದಿ ಮೈತ್ರಿಕೂಟದ ಸರಕಾರ ಈ ವರದಿಯನ್ನು ಸಾರಾಸಗಟಾಗಿ ತಿರಸ್ಕರಿಸಿದೆ.

ಅಯೋಧ್ಯೆಯ ಬಾಬರಿಮಸೀದಿ ನಾಶದ ಬೆನ್ನಲ್ಲಿ ಮುಂಬಯಿಯಲ್ಲಿ ನಡೆದ ಕೋಮು ಗಲಭೆ ಹಾಗೂ ಸರಣಿ ಬಾಂಬ್ ಸ್ಫೋಟಗಳ ತನಿಖೆಗೆಂದು ನ್ಯಾ.ಬಿ.ಎನ್. ಶ್ರೀಕೃಷ್ಣ ನೇತೃತ್ವದ ಏಕ ಸದಸ್ಯ ಆಯೋಗವನ್ನು ನೇಮಿಸಲಾಗಿತ್ತು.

ಅಂದಿನ ಕಾಂಗ್ರೆಸ್ ಸರಕಾರದಿಂದ ನೇಮಕಗೊಂಡಿದ್ದಈ ಆಯೋಗದ ಕೆಲಸ ಕಾರ್ಯಗಳನ್ನು ಬುಡಮೇಲು ಮಾಡಲು ಅನಂತರ ಅಧಿಕಾರಕ್ಕೆ ಬಂದ ಶಿವಸೇನೆ ಬಿಜೆಪಿ ಕೂಟದ ಸರಕಾರ ಸರ್ವ ಪ್ರಯತ್ನ ಮಾಡಿತ್ತು. ಆಯೋಗವನ್ನು ಬರ್ಖಾಸ್ತುಗೊಳಿಸುವ ಹಂತಕ್ಕೂ ಹೋಗಿತ್ತು. ಆದರೆ ತೀಕ್ಷ್ಣ ಪ್ರತಿಭಟನೆ ವ್ಯಕ್ತವಾದಾಗ ಆಯೋಗಕ್ಕೆ ಮರುಜೀವ ಕೊಟ್ಟಿತ್ತು.

ಶ್ರೀ ಕೃಷ್ಣ ಆಯೋಗಕ್ಕೆ ಸೂಕ್ತ ಸಹಕಾರ ನೀಡಲು ನಿರಾಕರಿಸಿದ್ದೇ ಕೋಮುಗಲಭೆಯಲ್ಲಿ ಶಿವಸೇನೆ ಬಿಜೆಪಿಯ ಪಾತ್ರವಿತ್ತೆಂಬ ಆರೋಪ ಮೇಲ್ನೋಟಕ್ಕೆ ಸಾಬೀತಾಗಲು, ಸಾಕಾಗಿತ್ತು. ಕಾವಿಪಡೆ ಸರಕಾರದ ವರ್ತನೆ ಕಳ್ಳನ ಮನಸ್ಸು ಹುಳ್ಳ ಹುಳ್ಳಗೆ ಎಂಬ ಮಾತಿಗೆ ತಕ್ಕಂತಿತ್ತು.

ಆಯೋಗ ತನ್ನ ವರದಿಯನ್ನು ಪೂರ್ಣಗೊಳಿಸಿದ ಮೇಲೆಯೂ ಅದನ್ನು ರಾಜ್ಯ ಶಾಸನಸಭೆಯಲ್ಲಿ ಮಂಡಿಸಲು ಸರಕಾರ ಮೀನಾ ಮೇಷ ಎಣಿಸಿತು. ಕೊನೆಗೆ 1998 ರ ಆಗಸ್ಟ್ 6 ರಂದು ವರದಿಯನ್ನು ಹಾಗೂ ಅದರ ಮೇಲೆ ಕ್ರಮಕೈಗೊಳ್ಳಲಾದ ವರದಿಯನ್ನು (ATR) ಮಂಡಿಸಿದ ಸರಕಾರ ಯಾವ ಚರ್ಚೆಗೂ ಅವಕಾಶ ಕೊಡದೆ ಅದೇ ದಿನ ಆಯೋಗದ ವರದಿಯನ್ನು ಏಕಪಕ್ಷೀಯವಾಗಿ ಸಾರಾಸಗಟಾಗಿ ತಿರಸ್ಕರಿಸಿತು !

ಯಾವುದೇ ಆಯೋಗದ ವರದಿಯನ್ನು ತಿರಸ್ಕರಿಸುವ ಅಧಿಕಾರ ಸರಕಾರಕ್ಕಿದೆ ಎನ್ನುವುದು ಸರಕಾರ ವಾದ. ಆದರೆ ಇಲ್ಲಿ ಸರಕಾರ ತನ್ನ ಅಧಿಕಾರವನ್ನು ಚಲಾಯಿಸಿದೆ ಎನ್ನುವುದಕ್ಕಿಂತ ಸರಕಾರದ ನೇತೃ ಪಕ್ಷವಾದ ಶಿವಸೇನೆ ವಿರುದ್ಧ ಆಯೋಗ ಮಾಡಿರುವ ಕಟುಮಾತಿನ ಖಂಡನೆ ಹಿನ್ನೆಲೆಯಲ್ಲಿ ಆ ಪಕ್ಷವನ್ನು ಅದರ ನಾಯಕ ಬಾಳಠಾಕ್ರೆಯನ್ನು ರಕ್ಷಿಸಲು ಮುಂದಾಗಿದೆ; ಅದಕ್ಕಾಗಿ ಪ್ರಜಾಪ್ರಭುತ್ವದ ಎಲ್ಲಾ ನೀತಿ ನೀಯಮಗಳನ್ನು ಗಾಳಿಗೆ ತೂರಿದೆ ಎನ್ನುವುದೇ ಹೆಚ್ಚು ಸೂಕ್ತವಾಗುತ್ತದೆ.

ಎಷ್ಟೊ ಆಯೋಗಗಳು ಬರುತ್ತವೆ-ಹೋಗುತ್ತವೆ' ಎಂದು ಬಾಳ ಠಾಕ್ರೆ ಹೇಳಿರುವುದು ಕೇಸರಿ ಪಡೆ ಪ್ರಜಾಪ್ರಭುತ್ವ ನ್ಯಾಯಾಂಗದ ಬಗ್ಗೆ ಹೊಂದಿರುವ ತಿರಸ್ಕಾರ ಭಾವದ ಸಂಕೇತವಾಗಿದೆ. ಇದು ಇಡೀ ಜನತೆಗೆ ಎಸಗಿದ ಅಪಮಾನವಾಗಿದೆ.

ಆಗ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷದ ಒಳಜಗಳ ಮತ್ತು ಆಡಳಿತ ವೈಫಲ್ಯದ ಪಾತ್ರವನ್ನು ಆಯೋಗ ಟೀಕಿಸಿದೆಯಾದರೂ ಹಿಂದೂ ಕೋಮುವಾದಿ ಸಂಘಟನೆಗಳು ಪಕ್ಷಗಳು ಅವುಗಳ ನಾಯಕರನ್ನು ಮುಸ್ಲಿಮರನ್ನು ಪ್ರಚೋದಿಸಿದ್ದೇ ಹಿಂಸಾಚಾರ ಭುಗಿಲೇಳಲು ಪ್ರಮುಖ ಕಾರಣ ಎಂದು ಸವಿವರವಾಗಿ ತಿಳಿಸಿದೆ.

1992 ರ ಡಿಸೆಂಬರ್ ಮತ್ತು ಅದರ ಒಂದು ತಿಂಗಳ ನಂತರ ಮುಖ್ಯವಾಗಿ ಶಿವಸೇನೆ ಮತ್ತು ಅದರ ನಾಯಕ ಬಾಳ ಠಾಕ್ರೆ ಹಾಗೂ ಸ್ವಲ್ಪ ಮಟ್ಟಿಗೆ ಬಿಜೆಪಿಯಂಥ ಬೇಜವಾಬ್ದಾರಿಯುತ ಸಂಘಟನೆಗಳು ಮುಸ್ಲಿಮರನ್ನು ಕೋಮುದಂಗೆಗೆ ಎಳಸಿದವು ಎಂದು ವರದಿ ಹೇಳಿದೆ.

ಬಾಳ ಠಾಕ್ರೆಯ ಪ್ರಚೋದಕ ಭಾಷಣ ಹೇಳಿಕೆಗಳು ಶಿವಸೇನೆಯ ಮುಖ್ಯ ಪತ್ರಿಕೆ ಸಾಮ್ನದಲ್ಲಿ ಪ್ರಕಟಿತವಾದ ಉದ್ರೇಕಕಾರಿ ಲೇಖನಗಳು ಹೇಗೆ ವಿದ್ವೇಷದ ವಿಷಬೀಜ ಬಿತ್ತಿದವು ಎಂದು ತಮ್ಮ ದೀರ್ಘ ವರದಿಯಲ್ಲಿ ನ್ಯಾಯಮೂರ್ತಿಯವರು ವಿವರಿಸಿದ್ದಾರೆ.

ಆಯೋಗದ ವರದಿ ಹಿಂದೂಗಳ ವಿರುದ್ಧವಾಗಿದೆ, ಮುಸ್ಲಿಮರ ಪರವಾಗಿದೆ ಎಂಬುದೂ ಅದನ್ನು ತಿರಸ್ಕರಿಸಲು ಕಾವಿಪಡೆ ಕೊಟ್ಟಿರುವ ಕಾರಣವಾಗಿದೆ. ಹಿಂದೂ 'ನ್ಯಾಯಾಧೀಶರೊಬ್ಬರ ವರದಿಯನ್ನು ಹಿಂದೂಗಳು ತಿರಸ್ಕರಿಸಿದಂತಾಗಿದೆ ಎಂಬರ್ಥದ ಹೇಳಿಕೆಯನ್ನು ಖ್ಯಾತ ನ್ಯಾಯಶಾಸ್ತ್ರಜ್ಞ ನಾನೀ ಪಾಲ್ಖೀವಾಲಾ ಕೊಟ್ಟಿದ್ದಾರೆ. ಇದು ಹಿಂದೂ ಕೋಮುವಾದಿಗಳ ಮುಖಕ್ಕೆ ಹೊಡೆದಂಥ ಹೇಳಿಕೆಯಾಗಿದೆ.

ಸರಕಾರ ವಜಾ, ಬಂಧನಕ್ಕೆ ಆಗ್ರಹ:

ಶ್ರೀ ಕೃಷ್ಣ ಆಯೋಗ ಕಟು ಟೀಕೆ ಮಾಡಿರುವ ಹಿನ್ನೆಲೆಯಲ್ಲಿ ಶಿವಸೇನೆ ಮುಖ್ಯಸ್ಥ ಬಾಳ ಠಾಕ್ರೆಯನ್ನು ಬಂಧಿಸಬೇಕು ಹಾಗೂ ಮಹಾರಾಷ್ಟ್ರ ಸರಕಾರವನ್ನು ವಜಾ ಮಾಡಬೇಕು ಎಂಬ ಬೇಡಿಕೆ ದೇಶ ವ್ಯಾಪ್ತಿಯಾಗಿ ಎದ್ದು ಬಂದಿದೆ. ತಪ್ಪಿತಸ್ಥರೆಂದು ಆಯೋಗ ಹೆಸರಿಸಿರುವ ಎಲ್ಲರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಬೇಕೆಂದೂ ಆಗ್ರಹ ಪಡಿಸಲಾಗಿದೆ.

ಬಿ.ಜೆ.ಪಿ.ಗೆ ಗುಡ್‌ಬೈ....

ಕಳೆದ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಯಾವುದೋ ಭ್ರಮೆಯಲ್ಲಿ ತೇಲಿ ಬಿಜೆಪಿಯ ಬೆನ್ನು ಬಿದ್ದವರು ಎಷ್ಟೋ ಮಂದಿ. ಹೊರಗಡೆ ಕಾರಣ ಏನೇ ಹೇಳಿರಬಹುದು. ಬಹುಶ: ಬಿಜೆಪಿ ಅಧಿಕಾರಕ್ಕೆ ಬಂದೇ ಬರುತ್ತದೆ. ನಮಗೂ ಏನಾದರೂ ಲಾಭ ಆದರೂ ಆದೀತು ಎಂಬ ಭಾವನೆ ಅಂಥ ಹಲವರಲ್ಲಿ ಇದ್ದಿರಲೂ ಬಹುದು.

ತಾವಿದ್ದ ಪಕ್ಷದ ಬಗೆಗಿನ ಅತೃಪ್ತಿಯಿಂದಲೋ ಅಧಿಕಾರ ಲಾಲಸೆಯಿಂದಲೋ ಬಿಜೆಪಿ ಸ್ವರ್ಗಗಳನ್ನು ಧರೆಗಿಳಿಸುತ್ತದೆ ಎಂಬ ಭ್ರಮೆಯಿಂದಲೋ ಆ ಪಕ್ಷವನ್ನು ಸೇರಿಕೊಂಡ ಹಲವು ಕಾಂಗ್ರೆಸಿಗರಲ್ಲಿ ಡಾ. ಅಬ್ರಾರ್ ಅಹಮದ್ ಅವರೂ ಒಬ್ಬರು. ಅಸ್ಲಾಂ ಷೇರ್ ಖಾನ್ ಇನ್ನೊಬ್ಬರು.

ಅಲ್ಪ ಸಂಖ್ಯಾತ ಸಮುದಾಯಕ್ಕೆ ಬಿಜೆಪಿಯಿಂದ ಏನಾದರೂ ಅನುಕೂಲವಾಗಬಹುದೆಂಬ ನಿರೀಕ್ಷೆ ಕೇವಲ ಹುಸಿಯಾದದು ಎಂಬುದನ್ನು ಕೇವಲ ಅರ್ಧವರ್ಷದೊಳಗೆ ಮನಗಂಡ ಡಾ. ಅಹಮದ್ ಇದೀಗ ಆ ಪಕ್ಷಕ್ಕೆ ಅಂತಿಮ ವಿದಾಯ ಹೇಳಿದ್ದಾರೆ.

ಮಾಜಿ ಕೇಂದ್ರ ಸಚಿವರೂ ಆದ ಅಬ್ರಾರ್ ಅಹಮದ್ ಆಗಸ್ಟ್ 5 ರಂದು ಬಿಜೆಪಿಯನ್ನು ತೊರೆದರು. ತಾವು ವಿಶೇಷ ಆಹ್ವಾನಿತರಾಗಿದ್ದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಗೆ ಮಾತ್ರವಲ್ಲದೆ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ನೀಡಿರುವುದಾಗಿ ಅಬ್ರಾರ್ ತಿಳಿಸಿದ್ದಾರೆ.

ಕಾರಣವೇನು?:

ಹಲವು ಮುಸ್ಲಿಮರ ಅಗತ್ಯಗಳನ್ನು ಅದರಲ್ಲಿ ವಿಶೇಷವಾಗಿ ಉದ್ಯೋಗ ಮತ್ತು ಶಿಕ್ಷಣದ ಬಗ್ಗೆ ವಿಶೇಷ ಗಮನ ಕೊಡಲಾಗುವುದೆಂಬ ಆಶ್ವಾಸನೆಯನ್ನು ಬಿಜೆಪಿ ಈಡೇರಿಸಿಲ್ಲ ಎಂದು ಅಬ್ರಾರ್ ಆಪಾದಿಸಿದ್ದಾರೆ.

ಬಿಜೆಪಿಗೆ ಒಂದು ಅವಕಾಶ ಕೊಟ್ಟು ಒಂದು ಸಲ ಪರೀಕ್ಷಿಸಿ ನೋಡಿ ಎಂದು ಮಾಡಿಕೊಳ್ಳಲಾದ ಮನವಿಯ ಮೇರೆಗೆ ಅನೇಕ ಮುಸ್ಲಿಂ ನಾಯಕರು ಬಿಜೆಪಿಯನ್ನು ಸೇರಿದ್ದಾಗಿ ಅವರು ತಿಳಿಸಿದ್ದಾರೆ. ಆದರೆ ಈಗ ಪರಿಸ್ಥಿತಿ ಏನು ಎಂದು ಪ್ರಶ್ನಿಸಿದ್ದಾರೆ.

ಕೇಂದ್ರದಲ್ಲಾಗಲೀ ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಾಗಲೀ ಅಲ್ಲಿನ ಸರಕಾರಗಳು ಮುಸ್ಲಿಮರನ್ನು ಪ್ರಮುಖ ಹುದ್ದೆಗಳಿಗೆ ನೇಮಿಸಿಲ್ಲ ಮತ್ತು ಅವರಿಗೆ ಸಾಕಷ್ಟು ಪ್ರಾತಿನಿಧ್ಯ ನೀಡಿಲ್ಲ ಎಂದು ಅಬ್ರಾರ್ ದೂರಿದ್ದಾರೆ.

ಧಾರ್ಮಿಕ ಹುಚ್ಚುತನ:

ಧಾರ್ಮಿಕ ಹುಚ್ಚುತನ ಹಬ್ಬಲು ಹಾಗೂ ಸರಕಾರದ ನಿರ್ಧಾರಗಳಲ್ಲಿ ಆರ್ ಎಸ್ ಎಸ್ ಮೇಲುಗೈ ಸಾಧಿಸಲು ಬಿಜೆಪಿ ಅವಕಾಶ ಕೊಟ್ಟಿದೆ ಎಂದು ಅಹಮದ್ ಹೇಳಿದ್ದಾರೆ.

ಪಶ್ಚಿಮ ರಾಜ್ಯಸ್ಥಾನ ಮಹಾರಾಷ್ಟ್ರ ಮತ್ತು ಗುಜರಾತಿನಲ್ಲಿ ಅಲ್ಪಸಂಖ್ಯಾತರ ಮೇಲೆ ಒತ್ತಡ ಹೇರಲಾಗುತ್ತಿದೆ. ಮತದಾರರ ಪಟ್ಟಿಯಿಂದ ಮುಸ್ಲಿಮರ ಹೆಸರನ್ನು ತೆಗೆದು ಹಾಕಲು ಸರಕಾರಿ ಯಂತ್ರವನ್ನು ಬಳಸಲಾಗುತ್ತಿದೆ ಎಂದು ಆಪಾದಿಸಿದ್ದಾರೆ. ಮುಸ್ಲಿಮರಿಗೆ ಭಯದ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ ಎಂದಿದ್ದಾರೆ.

ಬಹು ಉತ್ಸಾಹದಿಂದ ಬಿಜೆಪಿಯನ್ನು ಅಪ್ಪಿಕೊಂಡವರು ಅಷ್ಟೇ ಬೇಗನೆ ಅದರ ನೈಜ ಮುಖವನ್ನು ಕಾಣುತ್ತಿರುವುದು ತುಂಬಾ ಸಂತೋಷದ ವಿದ್ಯಮಾನ.

ಬಿಜೆಪಿ ಬಿಟ್ಟಿರುವ ಅಬ್ರಾರ್ ಅಹಮದ್ ಪುನಃ ಕಾಂಗ್ರೆಸ್ ಪಕ್ಷವನ್ನು ಸೇರಿದ್ದು ಅಸ್ಲಾಂ ಷೇರ್ ಖಾನ್ ಮತ್ತಿತರ ಹಲವು ನಾಯಕರೂ ಇದೇ ಹಾದಿ ಹಿಡಿಯುವ ಸಂಭವವಿದೆ.

ಉತ್ತರದ ನಾಲ್ಕು ರಾಜ್ಯಗಳಲ್ಲಿ ಇದೇ ನವೆಂಬರ್‌ನಲ್ಲಿ ವಿಧಾನಸಭೆ ಚುನಾವಣೆಗಳು ನಡೆಯಲಿವೆ. ಬಿಜೆಪಿಯಿಂದ ಮುಸ್ಲಿಂ ನಾಯಕರು ಹೊರಹೋಗುತ್ತಿರುವುದರಿಂದ ಚುನಾವಣೆ ಫಲಿತಾಂಶದ ಮೇಲೆ ಮಹತ್ವದ ಪರಿಣಾಮ ಬೀರುವ ಸಂಭವವಿದೆ. ಬಿಜೆಪಿಯನ್ನು ಈ ಆತಂಕ ಬಲವಾಗಿ ಕಾಡುತ್ತಿದೆ.

ಜನರನ್ನು ಕೊಲ್ಲಲೆಂದೇ ನಡೆಸಿದ್ದ ಗೋಲಿಬಾರ್

ರಾಜಸ್ಥಾನದ ಶಾಸ್ತ್ರಿನಗರದಲ್ಲಿ ಕಳೆದ ವರ್ಷ ಡಿಸೆಂಬರ್ 15 ರ ರಾತ್ರಿ ಆರು ಜನರು ಸತ್ತು ನೂರಾರು ಜನರು ಗಾಯ ಗೊಂಡ ಪೊಲೀಸ್ ಗೋಲಿಬಾರಿಗೆ ಆಡಳಿತವೇ ಹೊಣೆ ಎಂದು ಅಧ್ಯಯನ ವರದಿಯೊಂದು ಸ್ಪಷ್ಟವಾಗಿ ದೋಷಾರೋಪ ಮಾಡಿದೆ.

ನಾಗರಿಕ ಹಕ್ಕುಗಳ ಜನತಾ ಸಂಘಟನೆ (ಪಿಯುಸಿಎಲ್) ಗೋಲಿಬಾರಿನ ತನಿಖೆ ನಡೆಸಿತ್ತು. ಕೊಲ್ಲುವ ಉದ್ದೇಶದಿಂದಲೇ ಜನರ ಮೇಲೆ ಗೋಲಿಬಾರ್ ನಡೆಸಲಾಗಿತ್ತು ಎಂದು ಅದು ವಿಶೇಷವಾಗಿ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿದೆ.

ಬಿಜೆಪಿ ರಾಜ್ಯ ಸರಕಾರ ಕೋಮು ಪಕ್ಷಪಾತದಿಂದ ಹಾಗೂ ಜನವಿರೋಧಿಯಾಗಿ ವರ್ತಿಸಿದೆ ಎಂದು ಪಿಯುಸಿಎಲ್ ಖಂಡಿಸಿದೆ.

ಲೋಕಸಭೆಯ ಮಧ್ಯಂತರ ಚುನಾವಣೆಯ ಸಂಭಾವ್ಯತೆಯ ಹಿನ್ನೆಲೆಯಲ್ಲಿ ಕಂಡಾಗ, ಹಲವು ಗುಂಪು ಗಲಭೆಗಳು ನಡೆದಿದ್ದರೂ ಆಗ ಅಷ್ಟೊಂದು ತೀಕ್ಷ್ಣವಾಗಿ ವರ್ತಿಸದಿದ್ದ ಆಡಳಿತ ಹಾಗೂ ಪೊಲೀಸರು ಶಾಸ್ತ್ರಿ ನಗರದಲ್ಲೇ ಅಷ್ಟೊಂದು ಕ್ರೂರವಾಗಿ ವರ್ತಿಸಿದ್ದೇಕೆ ಎಂಬುದಕ್ಕೆ ಆಯೋಗವೇ ಉತ್ತರಿಸಿದೆ.

ಶಾಸ್ತ್ರಿ ನಗರದ ಪ್ರಕರಣದಲ್ಲಿ ಮುಸ್ಲಿಮರು ಒಳಗೊಂಡಿದ್ದುದೇ ಇದಕ್ಕೆ ಕಾರಣ ಎಂದು ಅದು ಹೇಳಿದೆ.

ಖಬರ್‌ಸ್ತಾನ್ (ಸ್ಮಶಾನ) ಒಂದರ ಅತಿಕ್ರಮಣವನ್ನು ಪ್ರತಿಭಟಿಸಿ ಮುಸ್ಲಿಮರು ಚಳವಳಿ ನಡೆಸುತ್ತಿದ್ದಾಗ ಪೊಲೀಸರು ಕ್ರಮಕ್ಕಿಳಿದರು. ಇದು ಹಿಂದೂ-ಮುಸ್ಲಿಂ ಗಲಭೆಯ ಸ್ವರೂಪಕ್ಕೆ ತಿರುಗಿರಲಿಲ್ಲ. ಆದರೂ ಪೊಲೀಸರು ಪೂರ್ವಾಗ್ರಹ ಪೀಡಿತರಾಗಿ ಹುಚ್ಚಾಪಟ್ಟೆ ಗುಂಡು ಹಾರಿಸಿದರು ಎಂದು ವರದಿ ಹೇಳಿದೆ.

39 ಸುತ್ತು ಗುಂಡುಹಾರಿಸಲಾಯಿತು ಎಂದು ಪೊಲೀಸರು ಹೇಳಿರುವುದು ಸುಳ್ಳು. ವಾಸ್ತವವಾಗಿ 70 ಸುತ್ತು ಗುಂಡು ಹಾರಿಸಲಾಗಿತ್ತು. ಇದರಿಂದ 70 ಜನರು ಸಾಯಬಹುದಾಗಿತ್ತು ಎಂದಿರುವ ರಾಜಸ್ಥಾನ ಪಿಯುಸಿಎಲ್ ಪ್ರಧಾನ ಕಾರ್ಯದರ್ಶಿ ಪ್ರೇಂ ಕೃಷ್ಣ ಶರ್ಮಾ ಇಷ್ಟೊಂದು ಸುತ್ತು ಗುಂಡು ಹಾರಿಸಿದ್ದಕ್ಕೆ ವಿಷಾದ ವ್ಯಕ್ತಪಡಿಸುತ್ತಾರೆ. ಗುಂಡೇಟಿನಿಂದ ಗಾಯಗೊಂಡಿರುವವರ ಪೈಕಿ 42 ಜನರಲ್ಲಿ 25 ಮಂದಿ ಮೊಣಕಾಲು ಅಥವಾ ಅದರ ಮೇಲೆ ಗುಂಡಿನಿಂದ ಗಾಯಗೊಂಡಿದ್ದಾರೆ ಎಂದವರು ವಿವರಿಸಿದ್ದಾರೆ.

ಮುಸ್ಲಿಂ ವಿರೋಧಿ ಮನೋಭಾವ:

ಪೊಲೀಸರಲಿ ಮನೆಮಾಡಿರುವ ಮುಸ್ಲಿಂ ವಿರೋಧಿ ಮನೋಭಾವ, ವಿಶೇಷವಾಗಿ ಗಲಭೆಗಳ ಮೇಳೆ ಹೇಗೆ ಕೇಲಸಮಾಡುತ್ತದೆ ಎಂಬುದು ಶ್ರೀ ಕೃಷ್ಣ ಆಯೋಗ ಮತ್ತು ಪಿಯುಸಿಎಲ್ ತನಿಖಾ ವರದಿಗಳಲ್ಲಿ ಸಮಾನವಾಗಿರುವ ಅಂಶವಾಗಿದೆ.

ಮುಖ್ಯಮಂತ್ರಿ ಅಳಿಯನಿಗೆ ಅಮೂಲ್ಯ ಆಸ್ತಿ ದಾನ


ಭ್ರಷ್ಟಾಚಾರ, ಸ್ವಜನ ಪಕ್ಷಪಾತ - ಬಂಡವಾಳಶಾಹಿ ವ್ಯವಸ್ಥೆಯ ಎರಡು ಅನಿಷ್ಟಗಳು. ತತ್ವಸಿದ್ಧಾಂತ ನೈತಿಕತೆಯ ಉಪದೇಶ ನೀಡುವ ಕಾವಿಪಡೆಯೂ ಈ ನಿಯಮದಿಂದ ಹೊರತಲ್ಲ. ಮಹಾರಾಷ್ಟ್ರದ ಒಂದು ಪ್ರಕರಣದಿಂದ ಇದು ಸ್ಪಷ್ಟ.

ಪುಣೆಯಲ್ಲಿ 7.50 ಕೋಟಿ ರೂಪಾಯಿ ಬೆಲೆಬಾಳುವ ಅಮೂಲ್ಯ ಜಮೀನಿಗೆ ಮುಖ್ಯಮಂತ್ರಿ ಮನೋಹರ ಜೋಷಿಯ ಅಳಿಯ ಗಿರೀಶವ್ಯಾಸ್ ಒಡೆಯ. ಅತ್ಯಂತ ಪ್ರಮುಖ ಸ್ಥಳದಲ್ಲಿರುವ ಈ 30 ಸಾವಿರ ಚದರ ಅಡಿ ಜಮೀನು ಗಿರೀಶ್‌ಗೆ ಸಿಕ್ಕಿದ್ದು ಕೇವಲ ಕೆಲವೇ ಲಕ್ಷ ರೂಪಾಯಿಗಳಿಗೆ. ಕಾರಣ ಆತ ಮುಖ್ಯ ಮಂತ್ರಿಗಳ ಅಳಿಯ ಅಷ್ಟೆ.

ಪುಣೆಯ ನಗರಪಾಲಿಕೆ ಖಾಸಗಿ ವ್ಯಕ್ತಿಯೊಬ್ಬರಿಂದ ಖರೀದಿಸಿದ್ದ ಈ ಜಮೀನನ್ನು ಮೊದಲು ಉದ್ಯಾನವನಕ್ಕೆಂದು ಮೀಸಲಿರಿಸಲಾಗಿತ್ತು. ಆಮೇಲೆ ಶಾಲೆಗೆ ಎಂದು ನಿರ್ಧರಿಸಲಾಯಿತು. ಆದರೆ ಅವೆಲ್ಲವನ್ನು ರದ್ದುಮಾಡಿ ಹಠಾತ್ತನೆ ಅದನ್ನು ಗಿರೀಶ್ ವ್ಯಾಸ್‌ಗೆ ಮಾರಲಾಗಿದೆ. ಈ ಬಗ್ಗೆ ಪಾಲಿಕೆಯಲ್ಲಿ ಚರ್ಚೆ ನಡೆಯುವ ಹೊತ್ತಿಗಾಗಲೇ ಆ ಜಾಮೀನಿನಲ್ಲಿ ಎಳಂತಸ್ತಿನ ಕಟ್ಟಡ ಎದ್ದಾಗಿದೆ. ಹೇಗಿದೆ ನೋಡಿ!

ಮಾರ್ಚ್ 30 ರಂದು ವಿಷಯ ಚರ್ಚೆಗೆ ಬಂದಾಗ ಪಾಲಿಕೆಯ ಅಂದಿನ ಕಮಿಷನರ್ ರಾಮನಾಥಝಾ ಈ ಜಾಗ ಶಾಲೆಗೆ ಮೀಸಲಾಗಿರುವುದರಿಂದ ಬಹುಮಹಡಿ ಕಟ್ಟಡ ಯೋಜನೆಯನ್ನು ತಿರಸ್ಕರಿಸಲಾಗಿದೆ ಎಂದು ಹೇಳಿದ್ದರು. ಆದರೆ ಆ ವೇಳೆಗಾಗಲೇ ಕಟ್ಟಡ ನಿರ್ಮಾಣ ಕಾರ್ಯ ಮುಗಿದು ಹೋಗಿತ್ತು.

ರಾಜಕೀಯ ಆಶ್ರಯವಿಲ್ಲದೆ ಹೀಗೆಲ್ಲಾ ಆಗಲು ಸಾಧ್ಯವೇ. ಖಂಡಿತಾ ಇಲ್ಲ.



ಯುದ್ಧ ಬೇಡ ಶಾಂತಿ ಬೇಕು: ಆಗಸ್ಟ್ 6 ರಂದು ಕಲ್ಕತ್ತದಲ್ಲಿ ಅನುರಣಿಸಿದ ಘೋಷಣೆಯಿದು. ಹಿರೋಷಿಮಾ ದುರಂತದ ಸ್ಮರಣೆ ದಿನ ನಡೆದ ಶಾಂತಿ ರ್‍ಯಾಲಿಯಲ್ಲಿ ಸುಮಾರು ನಾಲ್ಕು ಲಕ್ಷ ಜನರು ಪಾಲ್ಗೊಂಡಿದ್ದರು. ಆ ಬೃಹತ್ ಮೆರವಣಿಗೆಯ ಒಂದು ನೋಟವಿದು. ಕೆಲವು ವಿದೇಶಿ ಟಿವಿ ಚಾನೆಲ್‌ಗಳು ಈ ಕಾರ್ಯಕ್ರಮವನ್ನು ನೇರಪ್ರಸಾರ ಮಾಡಿದ್ದೊಂದು ವಿಶೇಷ.

ಒರಿಸ್ಸಾ ಎ.ಜಿ. ರಾಜಿನಾಮೆ

ಒರಿಸ್ಸಾದ ಅಡ್ವೊಕೇಟ್ ಜನರಲ್ ಇಂದ್ರಜಿತ್‌ರೇ ಕೊನೆಗೂ ತಮ್ಮ ಹುದ್ದೆಗೆ ರಾಜಿನಾಮೆ ನೀಡಿದ್ದಾರೆ. ಮಹಿಳೆಯೊಬ್ಬರ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಆರೋಪಕ್ಕೆ ಗುರಿಯಾಗಿರುವ ರೇ ಅವರನ್ನು ವಜಾಮಾಡುವಂತೆ ರಾಜ್ಯದಲ್ಲಿ ಮಹಿಳಾ ಸಂಘಟನೆಗಳು, ಮಹಿಳಾ ಆಯೋಗ ಪ್ರತಿ ಪಕ್ಷಗಳು ಭಾರೀ ಆಂದೋಲನವನ್ನೇ ನಡೆಸಿದ್ದವು. ಆದರೆ ಸಿಬಿಐ ಆರೋಪ ಪಟ್ಟಿ ಸಲ್ಲಿಸಿದ್ದರೂ ಅವರ ವಿರುದ್ಧದ ಆರೋಪ ಸಾಬೀತಾಗದೆ ರೇ ಯವರನ್ನು ವಜಾ ಮಾಡುವುದಿಲ್ಲ ಎಂದು ಕಾಂಗ್ರೆಸ್ ಮುಖ್ಯ ಮಂತ್ರಿ ಜೆಬಿ ಪಟ್ನಾಯಕ್ ಹೇಳಿದ್ದರು.

ಆದರೆ ಚಳುವಳಿಗೇ ಜಯಸಿಕ್ಕಿದೆ. ಹೋರಾಟಕ್ಕೆ ಮಣಿದ ರೇ ಕೊನೆಗೂ ಪದತ್ಯಾಗ ಮಾಡಿದ್ದಾರೆ. ವಿಚಾರಣೆಗೆ ಇದು ಇನ್ನೂ ಅನುಕೂಲಕರ ವಾತಾವರಣವನ್ನು ಕಲ್ಪಿಸಲಿದೆ.

ಶರತ್ ಚಂದ್ರ

ಕೆನ್ಯಾ ಟಂಜಾನಿಯಾದಲ್ಲಿ ಅಮೆರಿಕನ್ ರಾಯಭಾರ ಕಛೇರಿಯ ಬಳಿ ಬಾಂಬ್ ಸ್ಫೋಟ

ಆಫ್ರಿಕಾದ ಕೆನ್ಯಾ, ಟಂಜಾನಿಯಾದ ರಾಜಧಾನಿ (ಅನುಕ್ರಮವಾಗಿ) ನೈರೋಬಿ ಹಾಗೂ ದಾರ್-ಎಸ್-ಸಲಾಂಗಳಲ್ಲಿ ಅಮೆರಿಕನ್ ರಾಯಭಾರಿ ಕಚೇರಿಗಳ ಬಳಿ ಬಾಂಬ್ ಸ್ಫೋಟವಾಗಿ ಹಲವಾರು ಸಾವು-ನೋವುಗಳಾಗಿವೆ. ಅಮೆರಿಕನ್ ರಾಯಭಾರ ಕಚೇರಿಯ ಅಮೆರಿಕನ್ ಮತ್ತು ಸ್ಥಳೀಯ ಸಿಬ್ಬಂದಿಯಲ್ಲದೆ, ಹಲವಾರು ನೆರೆಹೊರೆಯಲ್ಲಿನ ಸ್ಥಳೀಯರಿಗೆ ಸಾವು-ನೋವುಗಳಾಗಿವೆ. ನೈರೋಬಿಯಲ್ಲಿ 12 ಜನ ಅಮೆರಿಕನ್ನರು ಸೇರಿದಂತೆ 170 ಹೆಚ್ಚು ಜನ ಮಡಿದಿದ್ದು, ನಾಲ್ಕು ಸಾವಿರಕ್ಕೂ ಹೆಚ್ಚು ಜನರಿಗೆ ತೀವ್ರ ಗಾಯಗಳಾಗಿವೆ. ದಾರ್-ಎಸ್-ಸಲಾಂನ ಸ್ಫೋಟದಲ್ಲಿ ಒಂಬತ್ತು ಜನಕ್ಕೂ ಹೆಚ್ಚು ಮಡಿದಿದ್ದು, 70ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ನೈರೋಬಿಯದಲ್ಲಿ ಬಾಂಬ್ ಸ್ಫೋಟ ಒಂದು ದೊಡ್ಡ ಬಹುಮಹಡಿಕಟ್ಟಡದ ಬಳಿ ನಡೆದದ್ದರಿಂದ, ಇನ್ನೂ ನೆಲಸಮವಾದ ಈ ಕಟ್ಟಡದಲ್ಲಿ ಬದುಕುಳಿದವರಿಗಾಗಿ ಹುಡುಕಾಟ ಮುಂದುವರೆದಿದೆ.

ಅರಬ್ ದೇಶಗಳ ರಾಜಕೀಯ, ಮಿಲಿಟರಿ ಚಟುವಟಿಕೆ ಬಳಿ ಕಣ್ಣಿಡುವ ಅಮೆರಿಕದ ಗುಪ್ತಚಾರರಿಗೆ ಹಾಗೂ ಮಿಲಿಟರಿ ಸಿಬ್ಬಂದಿಗೆ ಮುಖ್ಯ ಕಚೇರಿಯಾಗಿರುವ ನೈರೋಬಿ, ದಾರ್-ಎಸ್-ಸಲಾಂ ರಾಯಭಾರ ಕಚೇರಿ ಮೇಲೆ ಬಾಂಬ್ ದಾಳಿ ಅಮೆರಿಕಕ್ಕೆ ಮುಖಭಂಗವಾದಂತಾಗಿದೆ. ನೂರಾರು ಮೈಲಿ ದೂರವಿರುವ ರಾಜಧಾನಿಗಳಲ್ಲಿ ಈ ಎರಡೂ ಬಾಂಬ್ ಸ್ಫೋಟಗಳು 10 ಸೆಕೆಂಡು ಅಂತರದಲ್ಲಿ ಆಗಿದ್ದು, ಇದನ್ನು ಅತ್ಯಂತ ಪರಿಣತ, ಸುಸಜ್ಜಿತ ಭೂಗತ ಭಯೋತ್ಪಾದಕ ಗುಂಪು ನಡೆಸಿದೆ ಎಂಬುದು ಖಚಿತವಾಗಿದೆ. ಪವಿತ್ರ ಸ್ಥಳಗಳ ವಿಮೋಚನೆಗೆ ಇಸ್ಲಾಮಿಕ್ ಸೈನ್ಯ ಎಂಬ ಅಪರಿಚಿತ ಗುಂಪು ಈ ಎರಡೂ ಸ್ಫೋಟಗಳನ್ನು ತಾನು ನಡೆಸಿದ್ದು ಎಂದು ರೇಡಿಯೋ ಫ್ರಾನ್ಸ್ ಹಾಗೂ ಅರಬ್ ಉಪಗ್ರಹ ಟಿ.ವಿ. ಚಾನೆಲ್‌ಗಳಿಗೆ ಕಳಿಸಿದ ಹೇಳಿಕೆಗಳಲ್ಲಿ ಹೇಳಿಕೊಂಡಿದೆ. ಅರಬ್ ಪ್ರದೇಶಗಳನ್ನು ಅಮೆರಿಕನ್ ಪಡೆಗಳ ಹಿಡಿತದಿಂದ ಹೊರಗೆಸೆಯುವುದು ತನ್ನ ಉದ್ದೇಶ ಎಂದು ಹೇಳಿದೆ.

ಅರಬ್ ದೇಶಗಳ ಬಗ್ಗೆ ಅಮೆರಿಕದ ನೀತಿ ಅರಬ್- ವಿರೋಧಿ ಇಸ್ರೇಲಿಗೆ ಅದರ ಬೇಷರತ್ ಬೆಂಬಲದ ಬಗ್ಗೆ ಜನರ ಆಕ್ರೋಶಕ್ಕೆ ರಾಜಕೀಯ ಅಭಿವ್ಯಕ್ತಿಗೆ ಅವಕಾಶವಿಲ್ಲದೆ, ಈ ರೀತಿಯ ಧಾರ್ಮಿಕ ಮೂಲಭೂತವಾದಿ ಭಯೋತ್ಪಾದಕ ಅಭಿವ್ಯಕ್ತಿಗೆ ಅವಕಾಶ ಮಾಡಿಕೊಟ್ಟಿದೆ. ಈ ದಾಳಿಗಳಿಂದ ಅಮೆರಿಕನ್ ರಾಯಭಾರ ಸಿಬ್ಬಂದಿ ಭಯಭೀತರಾಗಿದ್ದು, ಎಲ್ಲಾ ಅರಬ್ ದೇಶಗಳಲ್ಲಿ ಅಮೆರಿಕನ್ ರಾಯಭಾರ ಕಚೇರಿಗಳು ಭದ್ರತಾ ವ್ಯವಸ್ಥೆಗಳನ್ನು ಬಿಗಿ ಮಾಡಲಾಗಿದೆಯಂತೆ. ವಿಶೇಷವಾಗಿ ಸೌದಿ ಅರೇಬಿಯಾ ದಲ್ಲಿ ವಿಶೇಷ ಗಮನ ನೀಡಲಾಗಿದೆ. 1996 ರಲ್ಲಿ ಸೌದಿ ಅರೇಬಿಯಾದಲ್ಲಿ ಸೈನ್ಯದ ವಠಾರದಲ್ಲಿ 19 ಅಮೆರಿಕನ್ ಸೈನಿಕರನ್ನು ಕೊಂದ ಸ್ಫೋಟದ ನಂತರ ಇದು ದೊಡ್ಡ ದಾಳಿಯಾದ್ದರಿಂದ ಈ ರೀತಿಯ ಎಚ್ಚರಿಕೆ ತಿಳಿಸಲಾಗುತ್ತಿದೆ. ಅಲ್ಲದೆ ಅಮೆರಿಕನ್, ಇಸ್ರೇಲಿ ಗುಪ್ತಚರ ಮಿಲಿಟರಿ ಗುಪ್ತ ವರದಿ ಗಳ ಪ್ರಕಾರ ಸೌದಿ ಅರೇಬಿಯಾದ ಶ್ರೀಮಂತನ ಮಗನಾದ ಒಸಾಮಾ ಬಿನ್ ಲಾರೆನ್ ಎಂಬ ವ್ಯಕ್ತಿ ಈ ಬಾಂಬ್ ದಾಳಿಯ ಹಿಂದಿರುವ ಮೂಲ ಎಂದಿದೆ. ಆತ ಸೌದಿ ಅರೆಬಿಯಾ ಬಿಟ್ಟು ಅಫಘಾನಿಸ್ತಾನದಲ್ಲಿ ವಾಸಿಸುತ್ತಿದ್ದು, ಮುಸ್ಲಿಂ ದೇಶಗಳಿಂದ ಅಮೆರಿಕ ಪಡೆಗಳನ್ನು ಓಡಿಸುವುದು ತನ್ನ ಉದ್ದೇಶ ಎಂದು ಹೇಳುತ್ತಿದ್ದಾನೆ ಎನ್ನಲಾಗಿದೆ.

ಮ್ಯೆನ್‌ಮಾರ್(ಬರ್ಮಾ)ನಲ್ಲಿ ಸೂಕಿಯವರ 'ಕಾರ್-ಸತ್ಯಾಗ್ರಹ'

ಬರ್ಮಾದಲ್ಲಿ ಮಿಲಿಟರಿ ಸರ್ವಾಧಿಕಾರಿ ಸರ್ಕಾರದ ವಿರುದ್ಧ ಪ್ರಜಾಸತ್ತೆ ಪುನಃ ಸ್ಥಾಪಿಸಲು ದಂಗೆಯ ದಶ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪುನಃ ಆ ಚಳುವಳಿ ಚೇತರಿಸಿಕೊಂಡು ಮುಂದೆ ಹೋಗುವ ಹಾಗೆ ಕಾಣುತ್ತದೆ. ಹಲವು ವರ್ಷಗಳಿಂದ ಈಗ ಗೃಹಬಂಧನದಲ್ಲಿ ಇರುವ ನೇಷನಲ್ ಲೀಗ್ ಫಾರ್ ಡೆಮಾಕ್ರಸಿ ಮತ್ತು ಹತ್ತು ವರ್ಷಗಳ ಹಿಂದೆ ನಡೆದ (ಆದರೆ ಅದರ ಫಲಿತಾಂಶಗಳನ್ನು ತಿರಸ್ಕರಿಸಿದ) ಚುನಾವಣೆಗಳಲ್ಲಿ ಗೆದ್ದ ನಾಯಕಿ ಆಂಗ್ ಸಾನ್ ಸೂಕಿ ಚಳುವಳಿಯ ಹತ್ತನೇ ವಾರ್ಷಿಕೋತ್ಸವದಂದು ಗೃಹ ಬಂಧನ ಹಾಗೂ ರಂಗೂನ್‌ನಿಂದ ಹೋಗಬಾರದು ಎಂಬ ಮಿಲಿಟರಿ ಸರ್ಕಾರ ನಿರ್ದೇಶನ ಉಲ್ಲಂಘಿಸಿ ಲೀಗ್‌ನ ಸದಸ್ಯರನ್ನುದ್ದೇಶಿಸಿ ಮಾತನಾಡಲು ಬಯಸಿದರು. ಅವರ ಮನೆಯಿಂದ ಸ್ವಲ್ಪದೂರ ಹೋಗುತ್ತಿದ್ದಂತೆ ಅವರ ಕಾರನ್ನು ತಡೆಯಲಾಯಿತು. ಸೂಕಿ ಮನೆಗೆ ವಾಪಸು ಹೋಗಲು ನಿರಾಕರಿಸಿದರು. ಹಲವು ದಿನಗಳವರೆಗೆ ಸೂಕಿ ಕಾರನ್ನು ಅಲ್ಲೇ ನಿಲ್ಲಿಸಿ 'ಸತ್ಯಾಗ್ರಹ' ಮಾಡಿದರು. ಮ್ಯೆನ್‌ಮಾರ್‌ನ ಮಿಲಿಟರಿ ಸರ್ಕಾರ ಆ ಕೆಲವು ದಿನಗಳಲ್ಲಿ ಆತಂಕಿತವಾಗಿತ್ತು. ಯಾಕೆಂದರೆ ಅದೇ ಸಮಯದಲ್ಲಿ ಆಸಿಯನ್ ಪ್ರಾದೇಶಿಕ ಫೋರಂನ ಸಭೆ ಮನಿಲಾದಲ್ಲಿ ನಡೆಯುತ್ತಿತ್ತು. ಮ್ಯೆನ್‌ಮಾರ್ ದಕ್ಷಿಣ ಪೂರ್ವ ಏಶ್ಯಾದ ದೇಶಗಳ ಪ್ರಾದೇಶಿಕ ಕೂಟ ಆಸಿಯನ್(ASEAN) ನಲ್ಲಿ ಗೌರವಾನ್ವಿತ ಜಾಗ ಹೊಂದಲು ಬಯಸುತ್ತದೆ. ಆದ್ದರಿಂದ ಆಸಿಯನ್ ಸಭೆ ಸಮಯದಲ್ಲಿ ತೀವ್ರ ಆಂತರಿಕ ಬಿಕ್ಕಟ್ಟು ಅಂತರ್ರಾಷ್ಟ್ರೀಯ ಗಮನ ಸೆಳೆಯುವುದು ಮಿಲಿಟರಿ ಸರ್ಕಾರಕ್ಕೆ ಇಷ್ಟವಿರಲಿಲ್ಲ. ಆದ್ದರಿಂದ ಆಸಿಯನ್ ಸಭೆ ಮುಗಿಯುವವರೆಗೆ ಕಾದು ಆಮೇಲೆ ಸೂಕಿಯವರ 'ಸತ್ಯಾಗ್ರಹ' ಕೊನೆಗೊಳಿಸಿ ಬಲವಂತವಾಗಿ ಅವರನ್ನು ಮನೆಗೆ ಕಳಿಸಲಾಯಿತು. ಇದು ಮಾತ್ರವಲ್ಲ ಹಲವಾರು ಸಂದರ್ಭಗಳಲ್ಲಿ ಸರ್ಕಾರ ಮತ್ತು ಪ್ರಜಾಸತ್ತಾತ್ಮಕ ಚಳುವಳಿಯ ಬೆಂಬಲಿಗರ ನಡುವೆ ಘರ್ಷಣೆ ತೀವ್ರ ರೂಪದಲ್ಲಿ ಆರಂಭವಾಗಿದೆ.

ಪ್ಯಾಲೆಸ್ಟೀನ್ ಮಂತ್ರಿಗಳ ರಾಜಿನಾಮೆ

ಪ್ಯಾಲೆಸ್ಟೇನ್‌ನಲ್ಲಿ ಅರಾಫತ್‌ರ ಮಂತ್ರಿಮಂಡಲದ ಇಬ್ಬರು ಹಿರಿಯ ಹಾಗೂ ಪ್ರಸಿದ್ಧ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ. ಇತ್ತೀಚಿಗೆ ಅರಾಫತ್ ಮಾಡಿದ ಮಂತ್ರಿಮಂಡಲ ಪುನರ್ರಚನೆ, ಸರ್ಕಾರ ಎದುರಿಸುತ್ತಿರುವ ತೀವ್ರ ಭ್ರಷ್ಟಾಚಾರದ ಸಮಸ್ಯೆಯನ್ನು ನಿವಾರಿಸುವಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಪ್ರತಿಭಟನೆ ಸಲ್ಲಿಸಲು ಇವರಿಬ್ಬರು ರಾಜೀನಾಮೆ ನೀಡಿದ್ದಾರೆ ಎನ್ನಲಾಗಿದೆ. ರಾಜೀನಾಮೆ ನೀಡಿದ ಸಚಿವರೆಂದರೆ - ಉನ್ನತ ಶಿಕ್ಷಣ ಮಂತ್ರಿಯಾಗಿದ್ದ ಡಾ|| ಹನ್ನನ್ ಅಶ್ರಾವಿ ಮತ್ತು ಕೃಷಿ ಮಂತ್ರಿಯಾಗಿದ್ದ ಅಬೆಲ್ ಜವಾದ್ ಸಟೆಹ್ - ರಾಜೀನಾಮೆ ಕೊಟ್ಟ ಇಬ್ಬರು ಸಚಿವರು. ತೀವ್ರ ಭ್ರಷ್ಟಾಚಾರದ ಆಪಾದನೆಗೆ ಒಳಗಾಗಿದ್ದ ಸಚಿವರನ್ನು ಮಂತ್ರಿ ಮಂಡಲ ರಚನೆಯಲ್ಲಿ ಕೈ ಬಿಡಬೇಕಾಗಿತ್ತು ಹಾಗೂ ಭ್ರಷ್ಟ ಸಚಿವರನ್ನು ವಿಚಾರಣೆಗೆ ಒಳಪಡಿಸಬೇಕಾದಾಗ ಅವರಿಗೆ ಭ್ರಷ್ಟಾಚಾರ ಮುಚ್ಚಿಹಾಕಲು ಸಾಕಷ್ಟು ನೆರವು ನೀಡಲಾಗಿದೆ ಎಂದು ಅವರು ಆಪಾದಿಸಿದ್ದಾರೆ.

ಇತ್ತೀಚಿಗೆ ಮಾಡಿದ ಮಂತ್ರಿ ಮಂಡಲ ಪುನರ್ರಚನೆಯಲ್ಲಿ ಇವರಿಬ್ಬರನ್ನು ಮಂತ್ರಿಗಳಾಗಿ ತೆಗೆದುಕೊಳ್ಳಲಾಗಿತ್ತು. ಆದರೆ ಇವರಿಬ್ಬರು ಪ್ರತಿಭಟನಾರ್ಥ ಮಂತ್ರಿಮಂಡಲದಿಂದ ದೂರ ಉಳಿದಿದ್ದಾರೆ.

ಅಮೆರಿಕನ್ ಸೈನ್ಯಕ್ಕೆ ಮುಕ್ತ ಅವಕಾಶ ಮಾಡುವ ಒಪ್ಪಂದಕ್ಕೆ ಢಾಕ್ಕಾ ನಕಾರ

ಪ್ರಾಕೃತಿಕ ಪ್ರಕೋಪದ ಸಮಯದಲ್ಲಿ ಪರಿಹಾರ ಕಾರ್ಯಕ್ಕೆ ನೆರವಾಗುವ ನೆವದಲ್ಲಿ ಅಮೆರಿಕ ಸೈನ್ಯಕ್ಕೆ ವೀಸಾ ಇಲ್ಲದೆ ದೇಶ ಪ್ರವೇಶಿಸುವ ಹಕ್ಕು ಕೊಡುವ SOFA ಒಂಪಂದಕ್ಕೆ ಸಹಿ ಹಾಕದಿರಲು ಬಾಂಗ್ಲಾದೇಶ ಸರ್ಕಾರ ನಿರ್ಧರಿಸಿದೆ. ಆರು ತಿಂಗಳು SOFA ಬಗ್ಗೆ ಬಾಂಗ್ಲಾದೇಶ, ಅಮೆರಿಕದ ಒತ್ತಡ ನಿರಾಕರಿಸಿದೆ, ಸಹಿ ಹಾಕದಿರಲು ನಿರ್ಧರಿಸಿದೆ.

ಬಾಂಗ್ಲಾದೇಶದಲ್ಲಿ ಪ್ರಾಕೃತಿಕ ಪ್ರಕೋಪಗಳು ನಡೆಯುವಾಗ ನಿರ್ದಿಷ್ಟ ಒಪ್ಪಂದದ ಪ್ರಕಾರ ಅಮೆರಿಕದ ಸೇನೆಗಳು ದೇಶ ಪ್ರವೇಶಿಸಬಹುದು.

SOFA ಒಪ್ಪಂದಕ್ಕೆ ಬಾಂಗ್ಲಾದೇಶ ಸಹಿ ಹಾಕುವುದರ ಬಗ್ಗೆ ಭಾರೀ ಸಾರ್ವತ್ರಿಕ ವಿವಾದವಾಗಿದ್ದು, ಮುಖ್ಯವಾಗಿ ಜನರ ಒತ್ತಡದಿಂದ ಸರ್ಕಾರ SOFAಗೆ ಸಹಿ ಮಾಡಿಲ್ಲ.

ಬಿಜಾಪುರದಲ್ಲಿ ಲಂಬಾಣಿ ಗುಡಿಸಲು ನೆಲಸಮ

ಭಾರತ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆಗಸ್ಟ್ 9 ಮಹತ್ವದ ದಿನ. ಮಹಾತ್ಮಾ ಗಾಂಧಿಯವರು ಚಲೇಜಾವ್ ಚಳುವಳಿಗೆ ಕರೆ ಕೊಟ್ಟ ದಿನ, ಆದರೆ ಬಿಜಾಪುರದ ನಗರ ಹದ್ದಿಯೊಳಗಿರುವ ಕಾಜಲಗಿ ತಾಂಡೆಯ ಲಂಬಾಣಿ ಜನರಿಗೆ ಮಾತ್ರ ಆಗಸ್ಟ್ 9 ಕರಾಳ ದಿನವಾಗಿತ್ತು. ಕಂದಾಯ ಇಲಾಖೆಯವರು ಪೋಲೀಸರ ಸಹಾಯದಿಂದ ಮುಂಜಾನೆ 9 ಗಂಟೆಗೆ ಲಂಬಾಣಿ ಜನರು ಕಳೆದ 60 ವರ್ಷಗಳಿಂದ ವಾಸಿಸುತ್ತಿದ್ದ ಗುಡಿಸಲುಗಳನ್ನು ನಾಶ ಮಾಡಿದ ದಿನವಾಗಿ ಪರಿಣಮಿಸಿದೆ.

ತಾವಿದ್ದ ಗುಡಿಸಲುಗಳ ಬದಲಾಗಿ ಮನೆಕಟ್ಟಿ ಕೊಳ್ಳುವ ಉದ್ದೇಶದಿಂದ ಕಳೆದ 10-15 ವರ್ಷಗಳಿಂದಲೂ ಹೋರಾಡುತ್ತ ಬಂದಿರುವ ಈ ಲಂಬಾಣಿ ಜನರಿಗೆ ನ್ಯಾಯ ಕೊಡಿಸುವುದರಲ್ಲಿ ಅಧಿಕಾರಿಗಳು ವಿಫಲರಾದಾಗ ಈ ಜನ ಹಲವಾರು ಹೋರಾಟಗಳನ್ನು ನಡೆಸಿದ್ದರು. ಲಂಬಾಣಿ ಜನರಿಗೆ ಸಲ್ಲತಕ್ಕ ಈ ಜಾಗವನ್ನು ಸರಕಾರಿ ನೌಕರರು ಕಬಳಿಸಿ ಸ್ವಾಧೀನ ಪಡಿಸಿಕೊಳ್ಳುವ ಪ್ರಯತ್ನ ನಡೆದಾಗ ಕಂಬಾವುಟದ ನೇತೃತ್ವದಲ್ಲಿ ಹೋರಾಟ ನಡೆಯಿತು. ಅದನ್ನು ಕಂಡ ಅಧಿಕಾರಿಗಳು, ಯಾವದೇ ಮುನ್ನಚ್ಚರಿಕೆ ಕೊಡದೆ ನೂರಾರು ಪೋಲೀಸ್ ಪಡೆಯ ಸಹಾಯದಿಂದ ಆಗಸ್ಟ್ 9 ರಂದೇ ಬಡ ಲಂಬಾಣಿ ಜನರ ಗುಡಿಸಲುಗಳನ್ನು ನೆಲಸಮಗೊಳಿಸುವ ಕ್ರಮ ಕೈಗೊಂಡಾಗ ಸಿಪಿಐ(ಎಂ) ಪಕ್ಷದಿಂದ ಆರಿಸಿ ಹೋಗಿ ಬಿಜಾಪುರ ನಗರ ಸಭೆಯ ಉಪಾಧ್ಯಕ್ಷೆಯಾಗಿರುವ ಜಕ್ಕವ್ವ ಮತ್ತು ತಾಂಡೆಯಲ್ಲಿರುವ ಕಮ್ಯುನಿಸ್ಟ್ ಕಾರ್ಯಕರ್ತರು ಅದನ್ನು ತಡೆದಾಗ ಪೋಲೀಸರು ದೌರ್ಜನ್ಯ ನಡೆಸಿದ ಪರಿಣಾಮವಾಗಿ ಜಕ್ಕವ್ವ, ಬೀಮು ಲಮಾಣಿ ಮೊದಲಾದವರಿಗೆ ಪೆಟ್ಟು ಬಿದ್ದಿದೆ. ಧೀರ ಪ್ರತಿಭಟನೆಯಿಂದಾಗಿ ಒಂದು ಗುಡಿಸಲನ್ನು ಮಾತ್ರ ನೆಲಸಮಗೊಳಿಸಲು ಸಾಧ್ಯವಾಗಿ ಕಂದಾಯ ಅಧಿಕಾರಿಗಳೂ ಪೋಲೀಸರೂ ತಮ್ಮ ರಾಕ್ಷಸಿಕೃತ್ಯವನ್ನು ನಿಲ್ಲಿಸುವಂತೆ ಮಾಡಲು ಸಾಧ್ಯವಾಗಿದೆ.

ಮರುದಿನ ಲಂಬಾಣಿ ಮಹಿಳೆಯರನ್ನೊಳಗೊಂಡ ಬೃಹತ್ ಮೆರವಣಿಗೆ ಜಿಲ್ಲಾಧಿಕಾರಿ ಕಛೇರಿಗೆ ಹೋಗಿ ಮತಪ್ರದರ್ಶನ ನಡೆಸಿ ಪೋಲೀಸ್ ದೌರ್ಜನ್ಯವನ್ನು ಖಂಡಿಸಲಾಯಿತು. ಸಿಪಿಐ(ಎಂ) ಮುಖಂಡರಾದ ಎನ್.ಕೆ. ಉಪಾಧ್ಯಾಯರು ಸ್ವಾತಂತ್ರ್ಯ ಚಳುವಳಿಯ ಉದ್ದೇಶ ವಿವರಿಸಿ ತಾವೆಲ್ಲಾ 1942 ಆಗಸ್ಟ್ 9 ರಂದು ಬ್ರಿಟಿಷ್ ಆಡಳಿತೆಯ ಪೋಲೀಸರಿಂದ ಲಾಠಿ ಏಟು ತಿಂದಿರುವುದನ್ನು ನೆನಪಿಸಿ ಸ್ವಾತಂತ್ರ್ಯ ಸ್ವರ್ಣೋತ್ಸವದ ಕೊನೆದಿನಗಳಲ್ಲಿ ಆಗಸ್ಟ್ 9 ರಂದೇ ಬಡ ಲಂಬಾಣಿ ಜನರು ಪೋಲೀಸರ ಲಾಠೀ ಏಟಿನಿಂದ ದೌರ್ಜನ್ಯಕ್ಕೊಳಗಾಗಿರುವುದನ್ನು ಖಂಡಿಸಿದರು. ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿಯವರು ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿ ದಬ್ಬಾಳಿಕೆಯನ್ನು ಖಂಡಿಸಿ ಇದೇ ರೀತಿ ದೌರ್ಜನ್ಯ ನಡೆದರೆ ತೀವ್ರ ಹೋರಾಟ ನಡೆಸುವ ಎಚ್ಚರಿಕೆ ನೀಡಿದರು.

ಅಂಬೇಡ್ಕರ್ ಪ್ರತಿಮೆ ಭಗ್ನ- ಸಿಪಿಐ(ಎಂ) ಖಂಡನೆ

ತುಳಿತಕ್ಕೊಳಗಾದ ಅಸಂಖ್ಯಾತ ಜನರ ಪ್ರೇರಕ ಶಕ್ತಿ ಹಾಗೂ ಸಂವಿಧಾನ ಶಿಲ್ಪಿ ಡಾ|| ಅಂಬೇಡ್ಕರ್ ಪ್ರತಿಮೆಯನ್ನು ಬಂಗಾರ ಪೇಟೆಯಲ್ಲಿ ಇತ್ತೀಚಿಗೆ ಭಗ್ನ ಗೊಳಿಸಿರುವುದನ್ನು ಧಾರವಾಡ ಸಿಪಿಐ(ಎಂ) ಜಿಲ್ಲಾ ಸಮಿತಿ ಬಲವಾಗಿ ಖಂಡಿಸಿದೆ.

ಬುದ್ಧ, ಗಾಂಧಿ, ಅಂಬೇಡ್ಕರ್ ಮುಂತಾದ ಭಾರತದ ಮಹಾಚಿಂತಕರ ಹಾಗೂ ಕ್ರಾಂತಿಕಾರಕ ಸಮಾಜ ಸುಧಾರಕರನ್ನು ಅವಹೇಳನ ಮಾಡುವುದು, ಅವರ ಪ್ರತಿಮೆಗಳನ್ನು ಭಗ್ನಗೊಳಿಸುವುದು, ಸಮಾಧಿಗಳನ್ನು ಹಾಳುಗೆಡುವುದು, ಕೃತಿಗಳನ್ನು ನಾಶಮಾಡುವುದು ಇತ್ತೀಚಿನ ದಿನಗಳಲ್ಲಿ ರಾಜ್ಯ ಹಾಗೂ ದೇಶದ ವಿವಿಧ ಭಾಗಗಳಲ್ಲಿ ಹೆಚ್ಚುತ್ತಿದೆ.

ಈ ದುಷ್ಕೃತ್ಯಗಳ ಹಿಂದೆ ಮತಾಂಧ ಶಕ್ತಿಗಳ ಕೈವಾಡವೂ ಇದ್ದು. ಅಂತಹ ದುಷ್ಟ ಶಕ್ತಿಗಳ ವಿರುದ್ಧ ಎಲ್ಲಾ ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳು ಒಗ್ಗೂಡುವಂತೆ ಜಿಲ್ಲಾ ಸಮಿತಿ ಕರೆ ನೀಡಿದೆ.

ರಾಜಕೀಯ ಪ್ರಚಾರಾಂದೋಲನ

ಬೆಂಗಳೂರು: ಸಿಪಿಐ(ಎಂ)ನ ಕೇಂದ್ರ ಸಮಿತಿ ಕರೆಯಮೇರೆಗೆ ನಗರದಲ್ಲಿ ಜುಲೈ 23 ರಿಂದ 30 ರ ವರಗೆ ಮಾಗಡಿ ರಸ್ತೆ ರಾಮ ಚಂದ್ರಪುರ, ಲಕ್ಷ್ಮಿನಾರಾಯಣಪುರ, ಆರ್.ಜಿ. ಕಾಲೋನಿ, ವಿಲ್ಸನ್ ಗಾರ್ಡನ್, ಜಯನಗರ, ಶ್ರೀನಗರ, ಯಶವಂತಪುರ ಹೊಸೂರು ರಸ್ತೆ, ಕೆ.ಆರ್. ಪುರಂ, ಕುಂಬಳಗೋಡು ಎನ್.ಆರ್ ಕಾಲೋನಿ, ಕಲಾಸಿ ಪಾಳ್ಯ ಸಂಪಂಗಿರಾಮ ನಗರ ಮೆಜೆಸ್ಟಿಕ್ ಹಾಗೂ ದೊಡ್ಡಬಳ್ಳಾಪುರ ಪ್ರದೇಶಗಳಲ್ಲಿ ಕರಪತ್ರ ಹಂಚುವುದು ಬೀದಿ ಬದಿ ಸಭೆಗಳು ಬಹಿರಂಗ ಸಭೆಗಳು ನಡೆದವು.

ಬಹಿರಂಗ ಸಭೆಗಳಲ್ಲಿ ಮಾತನಾಡಿದ ಜಿಲ್ಲಾ ಮುಖಂಡರು ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಜನವಿರೋಧಿ ನೀತಿಗಳ ಅರಿವನ್ನು ಜನತೆಯ ಬಳಿ ಕೊಂಡೊಯ್ದರು. ಮಧ್ಯಮ ವರ್ಗದ ವರಲ್ಲಂತೂ 'ಈ ಬಾರಿ ಬಿಜೆಪಿ' ಎಂಬ ಸೊಗಿನ ಘೋಷಣೆ ಅರ್ಥವಾಗ ತೊಡಗಿದೆ.

ಹುಬ್ಬಳ್ಳಿ: ಕೇಂದ್ರ ಸರ್ಕಾರದ.ಬೆಲೆ ಏರಿಕೆಯ ಮುಂಗಡ ಪತ್ರ ಹಾಗೂ ಯುದ್ಧ ಭೀತಿ ಸೃಷ್ಟಿಸಿದ್ದರ ವಿರುದ್ಧ ಧಾರವಾಡ ಸಿಪಿಐ(ಎಂ) ಜುಲೈ 25 ರಂದು ಮನೆ ಮನೆಗಳಿಗೆ ಕರಪತ್ರ ಹಂಚುವ ಮೂಲಕ ಬಿಜೆಪಿ ನೇತೃತ್ವದ ಜನವಿರೋಧಿ ನೀತಿಗಳನ್ನು ಜನತೆಗೆ ವಿವರಿಸಿದರು.

ನಂತರ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ರಾಜ್ಯ ಸಮಿತಿ ಮುಖಂಡರಾದ ಸಿ.ಆರ್ ಭಟ್ ಬಿಜೆಪಿ ಸ್ಥಿರ, ಸ್ವಚ್ಛ, ದಕ್ಷ ಸರಕಾರ ನೀಡಲು ಸಂಪೂರ್ಣವಾಗಿ ಸೋತಿದೆ ಎಂದರು. ಬಿಜೆಪಿ ಅನಗತ್ಯವಾಗಿ ದೇಶವನ್ನು ಯುದ್ಧೋನ್ಮಾದದೆಡೆಗೆ ನೂಕಿದೆ ಎಂದರು.

ಸಭೆಯಲ್ಲಿ ಜಿಲಾ ್ಲಮುಖಂಡರಾದ ಆರ್.ಹೆಚ್.ಆಯಿ, ಎಂ.ಬಿ.ಕಟ್ಟಿ ಮುಂತಾದವರು ಮಾತನಾಡಿ ಸ್ವದೇಶಿಯ ಪೊಳ್ಳುತನ ಬಯಲಿಗೆಳೆದರು.

ಜಪಾನಿ ದುಡಿಯುವ ಮಹಿಳೆಯರೊಂದಿಗೆ ಅನುಭವ ಹಂಚಿಕೆ

ಏಷ್ಯಾ ದುಡಿಯುವ ಮಹಿಳೆಯರ ವೇದಿಕೆಯನ್ನು ಪ್ರತಿನಿಧಿಸಿ ಬಂದಿದ್ದ 20 ಜನ ಜಪಾನಿ ದುಡಿಯುವ ಮಹಿಳೆಯರನ್ನು ಕರ್ನಾಟಕ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯು ಸನ್ಮಾನಿಸಿತು.

ಭಾರತದಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿಗಳನ್ನು ಕುರಿತು ಅಧ್ಯಯನ ಮಾಡಲು ಬಂದಿದ್ದ ಇವರು ಜುಲೈ 22 ರಂದು ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ ನಡೆದ "ಸ್ನೇಹ ಸಂಜೆ" ಕಾರ್ಯಕ್ರಮದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾ ಹಿರೋಷಿಮಾ ನಾಗಸಾಕಿಗಳ ಮೇಲಾದ ಬಾಂಬ್ ಪ್ರಯೋಗದ ಭಯಾನಕತೆಯ ಬಗ್ಗೆ ವಿವರಿಸಿ, ವಿಶ್ವಶಾಂತಿಯ ಅಗತ್ಯತೆಯನ್ನು ಒತ್ತಿ ಹೇಳಿದರು. ಮುಂದುವರೆದು ಮಾತನಾಡುತ್ತಾ ಜಪಾನಿ ದುಡಿಯುವ ಮಹಿಳೆಯರು ನಿರಂತರ ಹೋರಾಟದ ವಿಫಲವಾಗಿ ಕೆಲ ಸುಧಾರಣೆಗಳನ್ನು ಕಂಡಿರುವ ಬಗ್ಗೆ ಹಾಗೂ ಹೆಚ್ಚು ಅವಕಾಶಗಳನ್ನು ಪಡೆದ ಬಗ್ಗೆ ಗಮನ ಸೆಳೆದರು.



ದು.ಮ.ಸ ಸಮಿತಿಯ ರಾಜ್ಯ ಸಂಚಾಲಕಿ ಎಸ್. ವರಲಕ್ಷ್ಮಿ ಪ್ರಸ್ತಾವಿಕ ಭಾಷಣದಲ್ಲಿ ರಾಜ್ಯದ ದುಡಿಯುವ ಮಹಿಳೆಯರ ಹತ್ತಾರು ಸಮಸ್ಯೆಗಳ ಬಗ್ಗೆ ವಿವರಣೆ ನೀಡಿದರು.

ಜೂಲಿಯಾನ್ ವಿನ್ಸೆಂಟ್ ಸ್ವಾಗತ ಮಾಡಿದರೆ ಸೀತಾಲಕ್ಷ್ಮಿ ಕಾರ್ಯಕ್ರಮ ನಿರೂಪಣೆ ಮಾಡಿದರು.

ಈ ಸಂದರ್ಭದಲ್ಲಿ ಸಿ.ಐ.ಟಿ.ಯು ರಾಜ್ಯ ಅಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್ ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ವಿ.ಜೆ.ಕೆ. ನಾಯರ್ ಅತಿಥಿಗಳಾಗಿ ಉಪಸ್ಥಿತರಿದ್ದರು.

ನೆಯ್ಗೆಗಾರರ ಸಭೆ

ಉಡುಪಿ ತಾಲೂಕು ನೆಯ್ಗೆಗಾರರ ಸರ್ವಸದಸ್ಯರ ಸಭೆಯು ಜುಲೈ 22 ರಂದು ಸಂಘ ಅಧ್ಯಕ್ಷರಾದ ಕೃಷ್ಣ ಶೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಉಡುಪಿಯಲ್ಲಿ ನಡೆಯಿತು.

ಸಭೆಯು ನೇಕಾರರಿಗೆ ಸರ್ಕಾರವು ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಬೇಕು, ಹೆಚ್ಚಿನ ಕಂತುಗಳಲ್ಲಿ ಸಾಲ ಮರು ಪಾವತಿಗೆ ಅವಕಾಶ ಕಲ್ಪಿಸಬೇಕು, ಹಾಗೂ ನೇಕಾರರ ಕಾಲೋನಿಗಳಿಗೆ ವಿದ್ಯುತ್ ರಸ್ತೆ, ಚರಂಡಿ ವ್ಯವಸ್ಥೆ ಕಲ್ಪಿಸುವಂತೆ ಒತ್ತಾಯಿಸುವ ನಿರ್ಣಯ ಕೈಗೊಂಡಿತು.

ಫೆಮಾ, ಪಿ.ಎಂ.ಎಲ್. ಚರ್ಚೆಯಿಲ್ಲದೆ ಶಾಸನವಾಗಬಾರದು

ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ

ಬಿ.ಜೆ.ಪಿ. ಸರಕಾರ ಬಜೆಟ್ ಅಧಿವೇಶನದ ಕೊನೆಯ ವೇಳೆಗೆ ಮಂಡಿಸಿದ ಫೆಮಾ ಮತ್ತು ಪಿ.ಎಂ.ಎಲ್. ಮಸೂದೆಗಳಲ್ಲಿ ಹಲವು ಆಕ್ಷೇಪಾರ್ಹ ಅಂಶಗಳಿವೆ ಎಂದು ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಟೀಕಿಸಿದೆ.

ಫೆಮಾ ಅಂದರೆ ವಿದೇಶಿ ವಿನಿಮಯ ನಿರ್ವಹಣೆ ಮಸೂದೆ ಮತ್ತು ಪಿ.ಎಂ.ಎಲ್. ಅಂದರೆ ಹಣ ತೊಳೆಯುವ (ಕಪ್ಪು ಹಣವನ್ನು ಬಿಳಿ ಮಾಡುವ)ಮಸೂದೆ. ಈ ಮಸೂದೆಗಳನ್ನು ಈಗಿರುವ ಫೆರಾ ಅಂದರೆ ವಿದೇಶಿ ವಿನಿಮಯ ನಿಯಂತ್ರಣ ಕಾನೂನಿನ ಸ್ಥಾನದಲ್ಲಿ ತರಲಾಗುತ್ತಿದೆ. ಈ ಬಗ್ಗೆ ಇನ್ನೂ ಸಂಸತ್ತಿನಲ್ಲಿ ಚರ್ಚೆ ನಡೆದಿಲ್ಲ.

ಫೆಮಾ ದೊಡ್ಡ ಪ್ರಮಾಣದಲ್ಲಿ ಕಪ್ಪು ಹಣವನ್ನು ಬಿಳಿ ಮಾಡಲು, ಬಂಡವಾಳ ದೇಶದಿಂದ ಹೊರಹೋಗಲು ಪ್ರೋತ್ಸಾಹ ನೀಡುತ್ತದೆ ಎಂದಿರುವ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಬಂಡವಾಳ ಪರಿವರ್ತನೆಗೆ ಅವಕಾಶ ನೀಡಿದೆ, ಇದೊಂದು ಹಿಂಬಾಗಿಲಿನಿಂದ ತಂದಿರುವ ಧೋರಣೆ ಬದಲಾವಣೆ ಎಂದು ಖಂಡಿಸಿದೆ. ಈ ಮಸೂದೆ 'ಭಾರತದ ನಿವಾಸಿ' ಎಂಬುದನ್ನು ನಿರ್ವಚಿಸಿದ ರೀತಿ ಸಿರಿವಂತ ಭಾರತೀಯರು ತಮ್ಮ ಆಸ್ತಿಗಳನ್ನು, ಹಣವನ್ನು ವಿದೇಶದಲ್ಲಿಡಲು ಸಾಕಷ್ಟು ತೂತುಗಳನ್ನು ಒದಗಿಸಿದೆ. ಫೆರಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ನಿರ್ಣಯ ಅಂತಿಮವಾಗುತ್ತಿತ್ತು. ಹೊಸ ಮಸೂದೆ ಈ ನಿರ್ಣಯವನ್ನು ಸಡಿಲಿಸುವ ಅಥವಾ ಅಮಾನತು ಮಾಡುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ನೀಡಿದೆ. ಇದು ಪ್ರಭಾವಶಾಲೀ ತಪ್ಪಿತಸ್ಥರ ಪರವಾಗಿ ಅಧಿಕಾರದಲ್ಲಿರುವವರು ಇದನ್ನು ದುರುಪಯೋಗಪಡಿಸಿಕೊಳ್ಳಲು ನೀಡಿರುವ ಅವಕಾಶ.

ಪಿ.ಎಂ.ಎಲ್. ಮಸೂದೆ ಆರ್ಥಿಕ ಅಪರಾಧಿಗಳನ್ನು ಹಿಡಿಯಲೆಂದು ಇರುವ ಜ್ಯಾರಿ ನಿರ್ದೇಶನಾಲಯ (ಎನ್‌ಫೋರ್ಸ್‌ಮೆಂಟ್ ಡೈರೆಕ್ಟೋರೇಟ್)ದ ಅಧಿಕಾರವನ್ನು ಈ ಮಸೂದೆಯಲ್ಲಿ ಹೇಗೆ ನಿರ್ವಚಿಸಲಾಗಿದೆಯೆಂದರೆ ವಿಚಾರಣೆಯ ವಿಷಯದಲ್ಲಾಗಲೀ, ಶಿಕ್ಷಿಸುವ ವಿಚಾರದಲ್ಲಾಗಲೀ ಈ ನಿರ್ದೇಶನಾಲಯದ ಅಧಿಕಾರಗಳಿಗೆ ಕತ್ತರಿ ಹಾಕಲಾಗಿದೆ. ದೊಡ್ಡ ಬಂಡವಾಳಶಾಹಿಗಳ ಒತ್ತಡದಿಂದಾಗಿ "ಆರ್ಥಿಕ ಅಪರಾಧಗಳನ್ನು ಇಲ್ಲಿ ಅಪರಾಧ ಎಂದು ಪರಿಗಣಿಸಿಲ್ಲ. ಇದರ ಪರಿಣಾಮವಾಗಿ ಹವಾಲಾ ವ್ಯವಹಾರಗಳು ದೊಡ್ಡ ಪ್ರಮಾಣದಲ್ಲಿ ಬೆಳೆಯಲಿದೆ, ಬಂಡವಾಳ ಹೊರಹಾರಿ ಹೊಗಲಿದೆ, ಇದರಿಂದ ದೇಶದ ಆರ್ಥಿಕಕ್ಕೆ ಅಪಾರ ಹಾನಿ ತಲುಪಲಿದೆ ಎಂದು ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ಫೆಮಾವನ್ನು ವಿಶೇಷಾಜ್ಞೆಯಾಗಿ ಜ್ಯಾರಿ ಮಾಡಬಹುದು, ಕಪ್ಪು ಹಣವನ್ನು ಬಿಳುಪು ಮಾಡುವ ಮಸೂದೆಯನ್ನು ಕಂಪನಿ ವಲಯದ ಆಕ್ಷೇಪಗಳಿಂದಾಗಿ ಹಾಗೆಯೇ ಬಿಡಬಹುದು ಎಂದು ಹೇಳಲಾಗುತ್ತಿದೆ. ಅಂದರೆ ಕಪ್ಪು ಹಣ ವ್ಯವಹಾರಗಳು ಮತ್ತು ಅವನ್ನು ಬಿಳುಪು ಮಾಡುವ ಕೆಲಸ ಸಮೃದ್ಧವಾಗಿ ಬೆಳೆಯುವ ಒಂದು ನಿರ್ವಾತ ಸೃಷ್ಟಿಯಾಗುತ್ತದೆ ಎಂದೇ ಇದರರ್ಥ ಎಂದು ಹೇಳಿರುವ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಸಂಸತ್ತಿನಲ್ಲಿ ಈ ಎರಡು ಮಸೂದೆಗಳ ಬಗ್ಗೆ ಒಂದು ಪೂರ್ಣ ಚರ್ಚೆ ನಡೆಸದೆ, ಇಂತಹ ಪ್ರಮುಖ ವಿಷಯದ ಬಗ್ಗೆ ಎಲ್ಲಾ ವಿಭಾಗಗಳ ಅಭಿಪ್ರಾಯ ಪಡೆಯದೆ ಸರಕಾರ ಮುಂದುವರೆಯಬಾರದು ಎಂದು ಆಗ್ರಹಪಡಿಸಿದೆ. ○



ರೆಕ್ಕೆ ಬಿಡಿಸಿ ಪಾರಿವಾಳಗಳೆ....

ರೆಕ್ಕೆ ಬಿಡಿಸಿ ಪಾರಿವಾಳಗಳೆ
ಯುದ್ಧನಾಡಿನಲ್ಲಿ
ಶಾಂತಿ ಅರಳಲಿ ಎದೆಗಳಲ್ಲಿ
ಹಾಡು ಕೊರಳಿನಲ್ಲಿ

ರೆಕ್ಕೆ ತೆರೆದ ಬೆಳ್ಳಕ್ಕಿಯ ಸೊಗಸು
ಪ್ರೀತಿ ಹುಡುಗಿ ಕಣ್ಣಾಲಿಯ ಕನಸು
ಹಾಡು ಹಕ್ಕಿಯ ಎದೆಗೂಡಿನ ಮೇಲೆ
ಯುದ್ಧದ ಬಾಂಬುಗಳೇ ಸಿಡಿಯದಿರಿ.

ಚೈತ್ರದ ಚಿಗುರು ಹಾಡಿನಾ ಉಸಿರು
ಎಳೆಜೀವಗಳ ಬದುಕಿನ ಬಸಿರು
ಕಾಮನ ಬಿಲ್ಲಿನ ಕನಸುಗಳನ್ನು
ಅಮೇರಿಕ ರಾಜರೆ ಕಾಡದಿರಿ

ಬೆಟ್ಟದ ಸಾಲು ನಡೆದಾಡಿದ ರಸ್ತೆ
ತಾಯಿಯ ಕರಳು ಬಂಗಾರದ ಮರಳು
ತಣ್ಣನೆ ಕೊರೆಯುವ ರಾತ್ರಿಗಳಿಂದ
ಸ್ವಾತಿಯ ಮುತ್ತನ್ನು ಕಸಿಯದಿರಿ

ಕನಸ ಹೊತ್ತ ಆ ಕಣ್ಣುಗಳನ್ನು
ಬಣ್ಣ ಬಣ್ಣದ ಪಕಳೆಗಳನ್ನು
ಬರೆಯುವ ಕವಿತೆಯ ಸಾಲುಗಳ
ಹಾಡುತಿರುವ ಈ ಕೊರಳುಗಳ
ಯುದ್ಧದ ಬೀಜವ ಕಲಕದಿರಿ,

ಜಿ.ಎನ್. ಮೋಹನ್

ದೇಶದ ಆರ್ಥಿಕ ಸಂಕಷ್ಟಗಳ ನಡುವೆ ಎಂ.ಪಿ.ಗಳ ವೇತನ ಏರಿಕೆ ತರವಲ್ಲ : ಎಡಪಕ್ಷಗಳು

ಆಗಸ್ಟ್ 4 : ದೇಶಾದ್ಯಂತ ಸಾವಿರಾರು ಕಾಲೇಜು ಮತ್ತು ವಿ.ವಿ. ಅಧ್ಯಾಪಕರು ತಮಗೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಅಥವಾ ಯು.ಜಿ.ಸಿ. ಶಿಫಾರಸು ಮಾಡಿದ ವೇತನ ಶ್ರೇಣಿ ನೀಡಬೇಕೆಂದು ಒತ್ತಾಯಿಸಿ ಮುಷ್ಕರ ಮಾಡಿದ್ದರು.

ಉತ್ತರ ಪ್ರದೇಶದಲ್ಲಿ ಸಾವಿರಾರು ಶಾಲಾ ಅಧ್ಯಾಪಕರು ತಮಗೆ ಗೌರವದ ಬದುಕು ನಡೆಸಲು ಬೇಕಾದ ವೇತನ ಕೊಡಿ ಎಂದು ಒಂದು ತಿಂಗಳಿಂದ ಮುಷ್ಕರದಲ್ಲಿದ್ದಾರೆ.

ಆಗಸ್ಟ್ 4ರಂದು ದೂರದರ್ಶನ, ಟಿ.ವಿ. ಚಾನೆಲ್‌ಗಳಲ್ಲಿ ಸಂಬಳ ಏರಿಕೆಯ ಸುದ್ದಿ ಬಂತು, ಸುಮಾರು ಮೂರುಪಟ್ಟಿನಷ್ಟು ಏರಿಕೆಯ ಸುದ್ದಿ. ಆದರೆ ಅದು ಶಾಲಾ ಅಧ್ಯಾಪಕರದ್ದು ಅಲ್ಲ, ಕಾಲೇಜು ಅಧ್ಯಾಪಕರದ್ದೂ ಅಲ್ಲ, ರಾಷ್ಟ್ರಪತಿ, ಉಪರಾಷ್ಟ್ರಪತಿ, ಸಂಸತ್ ಸದಸ್ಯರ ವೇತನ ಮತ್ತು ಪೆನ್ಶನ್ ಹೆಚ್ಚಳ ಕುರಿತು ಪ್ರಕಟಣೆ!

ರಾಷ್ಟ್ರಪತಿಗಳ ವೇತನವನ್ನು 50 ಸಾವಿರ ರೂ.ಗೆ ಏರಿಸಲಾಯಿತು. ಪೆನ್ಶನ್ ಮೊತ್ತ ವರ್ಷಕ್ಕೆ 3 ಲಕ್ಷ.

ಉಪರಾಷ್ಟ್ರಪತಿಗಳ ವೇತನ 14,500 ರಿಂದ 40,000 ಕ್ಕೆ ಏರಿಸಲಾಗಿದೆ. ರಾಜ್ಯಪಾಲರ ಸಂಬಳವನ್ನು 11,000 ರೂ. ನಿಂದ 36,000 ರೂ.ಗೇರಿಸಲಾಗಿದೆ.

ಸಂಸತ್ ಸದಸ್ಯರ ಸಂಬಳವನ್ನು 1500 ರೂ. ಮಾಸಿಕದಿಂದ 4000 ರೂ. ಕ್ಕೇರಿಸಲಾಗಿದೆ. ದೈನಂದಿನ ಭತ್ಯೆಯನ್ನು 200.ರೂನಿಂದ 400ಕ್ಕೇರಿಸಲಾಗಿದೆ. ಸಂಸತ್ ಸದಸ್ಯರ ವೇತನ-ಭತ್ಯೆಗಳ ಈ ಏರಿಕೆಯಿಂದ ಸರಕಾರ ವಾರ್ಷಿಕ ರೂ. 15 ಕೋಟಿ ಹೆಚ್ಚಿನ ಖರ್ಚು ಹೊರಬೇಕಾಗಿದೆ.

ಸಂಸತ್ತಿನ ಬಜೆಟ್ ಅಧಿವೇಶನದ ಕಟ್ಟಕಡೆಯಲ್ಲಿ ಸಂಸತ್ ಸದಸ್ಯರ ವೇತನ ಹೆಚ್ಚಳದ ಈ ಮಸೂದೆ ಮಂಡಿಸಿದುದು ದುರದೃಷ್ಟಕರ ಎಂದು ಸಿ.ಪಿ.ಐ.(ಎಂ) ಮತ್ತು ಸಿ.ಪಿ.ಐ. ಒಂದು ಜಂಟಿ ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿವೆ.

ಹೊಸ ಪ್ರಸ್ತಾವಗಳಿಂದ ಎಂ.ಪಿಗಳ ಸಂಬಳ, ಭತ್ಯೆಗಳಲ್ಲಿ ಗಮನಾರ್ಹ ಹೆಚ್ಚಳವಾಗುತ್ತದೆ. ಅಲ್ಲದೆ ಅವರ ಪೆನ್ಶನ್‌ನಲ್ಲೂ ಹೆಚ್ಚಳವಾಗುತ್ತದೆ. 1400 ರಿಂದ 2500 ರೂ.ಗೆ ಏರುತ್ತದೆ. ಐದು ವರ್ಷಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿದವರಿಗೆ ಇನ್ನೂ ವರ್ಷಕ್ಕೆ 500 ರೂ. ನೀಡಲಾಗುವುದು. ಪೆನ್ಶನ್ ಮೊತ್ತದ ಮೇಲೆ ಯಾವುದೇ ಮಿತಿಯಿಲ್ಲ ಎಂಬುದು ಆಶ್ಚರ್ಯಕರ ಎಂದು ಸಿ.ಪಿ.ಐ.(ಎಂ) ಮತ್ತು ಸಿ.ಪಿ.ಐ. ಹೇಳಿವೆ.

"ದೇಶ ಗಂಭೀರ ಪರಿಸ್ಥಿತಿಗಳನ್ನು ಎದುರಿಸುತ್ತಿದೆ. ಸಾಮಾನ್ಯ ಜನ, ಬಡ ವಿಭಾಗಗಳು ಸರ್ವತೋಮುಖ ಬೆಲೆಯೇರಿಕೆ ಮತ್ತು ಹೆಚ್ಚುತ್ತಿರುವ ನಿರುದ್ಯೋಗಗಳಿಂದ ನರಳುತ್ತಿದ್ದಾರೆ. ಜನಗಳ ಮೇಲೆ ಹೊಸ ಭಾರಗಳನ್ನು ಹೇರಿದ ಬಜೆಟ್ ಅಧಿವೇಶನ ಇಂತಹ ಒಂದು ಕ್ರಮದೊಂದಿಗೆ ಮುಕ್ತಾಯಗೊಂಡಿದೆ" ಎಂದಿರುವ ಸಿ.ಪಿ.ಐ.(ಎಂ), ಸಿಪಿಐ ಇದೊಂದು ಅಣಕ ಎಂದಿವೆ.

ಇಂತಹ ಒಂದು ಮಸೂದೆಗೆ ಎಡ ಪಕ್ಷಗಳ ಸಂಸತ್ ಸದಸ್ಯರು ಎಲ್ಲಾ ಹಂತಗಳಲ್ಲಿ ವಿರೋಧ ವ್ಯಕ್ತಪಡಿಸಿದರು; ಈ ಶಿಫಾರಸುಗಳನ್ನು ಮಾಡಿದ ಜಂಟಿ ಸಮಿತಿಯಲ್ಲೂ ವಿರೋಧಿಸಿದರು ಎಂದು ನೆನಪಿಸಿರುವ ಸಿ.ಪಿ.ಐ.(ಎಂ) ಮತ್ತು ಸಿ.ಪಿ.ಐ. ಜಂಟಿ ಹೇಳಿಕೆ ಈ ಕ್ರಮಕ್ಕೆ ತಮ್ಮ ಅನುಮೋದನೆ ಇಲ್ಲ ಎಂದು ಸ್ಪಷ್ಟಪಡಿಸುತ್ತಾ, ಈ ರೀತಿ ಹೆಚ್ಚಳದ ಕೆಲಸವನ್ನು ದೇಶದ ಜನ ಮೆಚ್ಚುವುದಿಲ್ಲ ಎಂದಿದೆ.

ಭೀಕರ ಚಂಬಾ ಹತ್ಯಾಕಾಂಡ : "ಉಗ್ರಗಾಮಿ ಪಿಡುಗನ್ನು ತಡೆಯಲು ಕೇಂದ್ರ ಗಮನ ಕೇಂದ್ರೀಕರಿಸಬೇಕು"

ಹಿಮಾಚಲ ಪ್ರದೇಶ ಚಂಬಾ ಜಿಲ್ಲೆಯ ಎರಡು ಕಡೆ 35 ಜನಗಳ ಸಾಮೂಹಿಕ ಹತ್ಯಾಕಾಂಡದ ಬಗ್ಗೆ ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಆಘಾತ ವ್ಯಕ್ತಪಡಿಸುತ್ತಾ ಅದನ್ನು ಖಂಡಿಸಿದೆ. ಜಮ್ಮುವಿನ ದೋಡಾ ಜಿಲ್ಲೆಯ ಘಟನೆಗಳು ನಡೆದ ಕೆಲವೇ ದಿನಗಳಲ್ಲಿ ಸಶಸ್ತ್ರ ಉಗ್ರಗಾಮಿಗಳಿಂದ ಕಟ್ಟಡ ಕೆಲಸಗಾರರ ಈ ಅಮಾನವೀಯ ಹತ್ಯೆ ನಡೆದಿದೆ. ಜಮ್ಮು ಪ್ರದೇಶದಲ್ಲಿ ಕೈಗೊಂಡ ಭದ್ರತಾ ಕ್ರಮಗಳೆಲ್ಲವೂ ಪಾಕಿಸ್ತಾನೀ ಬೆಂಬಲಿತ ಉಗ್ರಗಾಮಿಗಳ ಕುತಂತ್ರಗಳನ್ನು ತಡೆಯುವಲ್ಲಿ ಫಲ ನೀಡಿಲ್ಲ ಎಂಬುದು ಬಹಳ ಆತಂಕದ ಸಂಗತಿ ಎಂದು ಸಿ.ಪಿ.ಐ.(ಎಂ) ಹೇಳಿದೆ.

ಕೇಂದ್ರ ಸರಕಾರದ ಧೋರಣೆಯ ಕುರಿತ ವಿವಿಧ ಸರ್ಕಾರಿ ಪ್ರಕಟಣೆಗಳು ಸಾಮಾನ್ಯ ನಾಗರೀಕರು ಹೀಗೆ ನಿರ್ದಯ ಕೊಲೆ-ಸುಲಿಗೆಗೊಳಗಾಗುತ್ತಿರುವ ಈ ಸೂಕ್ಷ್ಮ ಗಡಿ ಪ್ರದೇಶದ ವಾಸ್ತವತೆಗಳಿಗೆ ಅನುಗುಣವಾಗಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಎಂದಿರುವ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಗಡಿ ಪ್ರದೇಶಗಳಲ್ಲಿ ಉಗ್ರಗಾಮಿ ಚಟುವಟಿಕೆಗಳ ಪಿಡುಗನ್ನು ತಡೆಯಲು, ಜನಗಳ ಜೀವ ರಕ್ಷಿಸಲು ಕೇಂದ್ರ ಸರಕಾರ ಗಮನ ಕೇಂದ್ರೀಕರಿಸಬೇಕಾಗಿದೆ ಎಂದರು.

ಉತ್ತಾರಾಂಚಲ ಮಸೂದೆ : ಭೂಸುಧಾರಣೆಯನ್ನು ಬುಡಮೇಲು ಮಾಡಲು ಪ್ರಯತ್ನಿಸಬೇಡಿ

ಬಿ.ಜೆ.ಪಿ. ಸರಕಾರಕ್ಕೆ ಸಿ.ಪಿ.ಐ.(ಎಂ) ಎಚ್ಚರಿಕೆ

ಉತ್ತಾರಾಂಚಲ ರಾಜ್ಯ ಕುರಿತ ಕರಡು ಮಸೂದೆಯಲ್ಲಿ ದೊಡ್ಡ ಭೂ ಹಿಡುವಳಿಗಳನ್ನು ರಕ್ಷಿಸಲಾಗುತ್ತದೆ ಎಂಬ ಅಂಶ ಸೇರಿಸಲು ಸಂಪುಟ ಮಂಜೂರಾತಿ ನೀಡಿದೆಯೆಂದು ವರದಿಯಾಗಿದೆ. ಇದನ್ನು ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ವಿರೋಧಿಸಿದೆ. ಇದು ಭೂಸುಧಾರಣಾ ಶಾಸನಗಳಿಗೆ ಮೂಲಭೂತ ಬದ್ಧತೆಯನ್ನು ಬುಡಮೇಲು ಮಾಡುತ್ತದೆ, ದೊಡ್ಡ ಭೂಮಾಲಕರು ಭಾರೀ ಭೂ ಹಿಡುವಳಿಗಳನ್ನು ಇಟ್ಟುಕೊಂಡಿರುವುದಕ್ಕೆ ನೀಡಿರುವ ಬಹಿರಂಗ ಅನುಮೋದನೆ ಎಂದು ಅದು ಖಂಡಿಸಿದೆ. ಎಲ್ಲಾ ಭೂಸುಧಾರಣಾ ಶಾಸನಗಳೂ ಸಂವಿಧಾನದ ಒಂಭತ್ತನೇ ಶೆಡ್ಯೂಲಿನಲ್ಲಿ ಆಗುತ್ತದೆ. ಆದ್ದರಿಂದ ಇಂತಹ ಒಂದು ಶಾಸನದಲ್ಲಿ ಇಂತಹ ಅಂಶ ಸೇರಿಸುವುದು ಸಂವಿಧಾನ ಬಾಹಿರ ಮತ್ತು ಕಾನೂನುಬಾಹಿರ ಎಂದು ಸಿ.ಪಿ.ಐ.(ಎಂ) ಹೇಳಿದೆ.

ಉಧಮ್‌ಸಿಂಗ್ ನಗರದ ಬಗ್ಗೆ ಹೇಳುವುದಾದರೆ ಅಲ್ಲಿಯ ಜನ ಮುಂದಿನ ವ್ಯವಸ್ಥೆಯಲ್ಲಿ ಎಲ್ಲಿ ಇರಬಯಸುತ್ತಾರೆ ಎಂದು ಅವರ ಆಶಯಗಳನ್ನು ತಿಳಿಯುವುದು ಅಗತ್ಯ. ಆದರೆ ಇದರರ್ಥ ಭೂಮಿತಿ ಶಾಸನಗಳನ್ನು ಉಲ್ಲಂಘಿಸಿ ಭೂಮಾಲಕರಿಗೆ ರಕ್ಷಣೆ ನೀಡಬೇಕೆಂದೇನಲ್ಲ. ಕೇಂದ್ರದಲ್ಲಿನ ಬಿ.ಜೆ.ಪಿ. ನೇತೃತ್ವದ ಸರಕಾರ ಈ ಕ್ರಮದ ಮೂಲಕ ತನ್ನ ಭೂಮಾಲಕ-ಪರ ಪಕ್ಷಪಾತವನ್ನು ಬಯಲು ಮಾಡಿಕೊಂಡಿದೆ ಎಂದು ಸಿ.ಪಿ.ಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ○

ಪ್ರಸಾರ ಭಾರತಿ ಮಸೂದೆ ರಾಜ್ಯ ಸಭೆಗೆ ಬರಲಿಲ್ಲವೇಕೆ?


ಪ್ರಸಾರ ಭಾರತಿ ಮಸೂದೆಯನ್ನು ಲೋಕಸಭೆ ಅಂಗೀಕರಿಸಿದ ಮೇಲೆ ಅದನ್ನು ರಾಜ್ಯ ಸಭೆಯಲ್ಲಿ ತರಬೇಕು ಎಂದು 'ಎಲ್ಲಾ ವಿರೋಧ ಪಕ್ಷಗಳು ಒತ್ತಾಯಿಸಿದ್ದರೂ ವಾಜಪೇಯಿ ಸರಕಾರ ಅದನ್ನು ರಾಜ್ಯಸಭೆಯಲ್ಲಿ ಮಂಡಿಸಲಿಲ್ಲ.

124 ರಾಜ್ಯ ಸಭೆ ಸದಸ್ಯರು(ಅಂದರೆ ಬಹುಸಂಖ್ಯಾತ ಸದಸ್ಯರು) ಈ ಮಸೂದೆಯನ್ನು ಸದನದ ಪರಿಶೀಲನೆಗೆ ತರಬೇಕು ಎಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಆದರೂ ಸುದ್ದಿ ಮತ್ತು ಪ್ರಸಾರ ಮಂತ್ರಿ ಹಾಗೆ ಮಾಡದೆ ಅದಕ್ಕೆ ಏನೇನೋ ಸಬೂಬು ನೀಡಿದರು.

ಈ ರೀತಿ ಸಂಸತ್ತನ್ನು ಬದಿಗೊತ್ತಿ ಸುಗ್ರೀವಾಜ್ಞೆ ತರುವುದು ವಾಜಪೇಯಿ ಸರಕಾರದ ಹುನ್ನಾರ. ಇದೊಂದು ಪ್ರಜಾಪ್ರಭುತ್ವ-ವಿರೋಧಿ ಕಸರತ್ತು ಎಂದು ಬಲವಾಗಿ ಖಂಡಿಸಿರುವ ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಈ ವಿಷಯದಲ್ಲಿ ಪ್ರಜಾಸತ್ತಾತ್ಮಕ ವಿಧಿ-ವಿಧಾನ ಅನುಸರಿಸುವಂತೆ ಸರಕಾರಕ್ಕೆ ಸಲಹೆ ನೀಡಬೇಕು ಎಂದು ರಾಷ್ಟ್ರಪತಿಗಳಿಗೆ ಮನವಿ ಮಾಡಿದೆ.

ವಾರದ ವ್ಯಂಗ ಚಿತ್ರ

'ದಿ ಹಿಂದು'ನಲ್ಲಿ ಸುರೇಂದ್ರನ್



Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ.2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by P. Ramachandra Rao for Communist Party of India (Marxist), Karnataka State Committee, EDITOR: P.RAMACHANDRA RAO